ಕಡಲ ಮೀನುಗಾರಿಕೆ

ವೈ ಎಸ್ ದುರ್ಗೇಕರ

1975

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-24

ಪ್ರಕಟಣೆ : 27

ಕಡಲ ಮೀನುಗಾರಿಕೆ

ವೈ. ಎಸ್. ದುರ್ಗೇಕರ

1975

ಕನ್ನಡ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560024.

ಕಡಲ ಮೀನುಗಾರಿಕೆ— (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗ ದಿಂದ ಸಿದ್ಧಗೊಂಡು ಸಂವಹನ ಸಮಿತಿ ಪ್ರಕಾಶಿತ) ಪ್ರಥಮ ಮುದ್ರಣ 1975, ಪ್ರತಿ 1000, ಪುಟ viii + 60 ಬೆಲೆ: ರೂ. 4-00

ಪ್ರಧಾನ ಸಂಪಾದನೆ

ವಿ. ಸಿ. ಹಿತ್ತಲಮನಿ
ಪ್ರಾಧ್ಯಾಪಕರು

ಸಹಸಂಪಾದನೆ

(i) ತಾಂತ್ರಿಕ:

ಎಂ. ಸತ್ಯನಾರಾಯಣರಾವ್
ಸಂಶೋಧನಾ ಸಹಾಯಕರು

(ii) ಭಾಷೆ:

ಕೆ. ಎಸ್. ಪ್ರತಾಪ್‌ಕುಮಾರ್
ಸಂಶೋಧನಾ ಸಹಾಯಕರು

ಕಲೆ:

ಬಿ. ಜಿ. ರಮೇಶ್

ಎಲ್ಲರೂ ಕನ್ನಡ ಅಧ್ಯಯನ ವಿಭಾಗ, ಕೃಷಿ ಕಾಲೇಜು, ಬೆಂಗಳೂರಿಗೆ ಸೇರಿದವರು.

ತಾಂತ್ರಿಕ ಪರಿಶೀಲನೆ

ಎಚ್. ಪಿ. ಸಿ. ಶೆಟ್ಟಿ
ಶಿಕ್ಷಣ ನಿರ್ದೇಶಕರು

ಮೀನುಗಾರಿಕೆ ಕಾಲೇಜು, ಮಂಗಳೂರು.

ಮುದ್ರಕರು: ಡಬ್ಲ್ಯು. ಕ್ಯೂ. ಜಡ್ಜ್ ಪ್ರೆಸ್, ಬೆಂಗಳೂರು-560025.

ಮುನ್ನುಡಿ

ಇಂದಿನ ವಿಶ್ವದಲ್ಲಿನ ಹಲವಾರು ಸಮಸ್ಯೆಗಳಿಗೆ ಕೃಷಿ ಉತ್ಪಾದನೆಯ ಹೆಚ್ಚಳವೇ ಬಹುಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯ. ಕೃಷಿ ಉತ್ಪಾದನೆಯ ಹೆಚ್ಚಳವು ಕೃಷಿ ಸಂಶೋಧನೆಗಳ ಫಲಿತಾಂಶಗಳನ್ನಳವಡಿಸುವಿಕೆಯನ್ನು ಅವಲಂಬಿಸಿದೆ. ಕಳೆದ ಒಂದು ದಶಕದಲ್ಲಿ ಕೃಷಿ ಸಂಶೋಧನೆಯು ನಾನಾಮುಖವಾಗಿ ಬೆಳೆದಿದೆ. ಅದರ ಪ್ರಯೋಜನ ವನ್ನು ಕೆಲವು ರೈತರು ಪಡೆದಿದ್ದಾರೆ. ಅದರಲ್ಲಿ ಕೆಲವರು ಹೆಚ್ಚಿನ ಪ್ರಗತಿಯನ್ನು ಸಾಧಿಸಿ, ಜಾಗತಿಕ ಗರಿಷ್ಠ ಸಾಧನೆಯನ್ನು ನಾವೂ ಸಾಧಿಸಲು ಸಾಧ್ಯವೆಂಬ ಭರವಸೆಯ ದೃಷ್ಟಾಂತವೆನಿಸಿದ್ದಾರೆ. ಈ ಅಳವಡಿಕೆ ಹಾಗೂ ಸಾಧನಗಳು ಕೆಲವರ ಸ್ವತ್ತಾಗಿ ಉಳಿಯದೆ ಸಾರ್ವತ್ರಿಕವಾಗಬೇಕು. ಆಗ ರಾಷ್ಟ್ರದಲ್ಲಿ ನಿಜವಾದ ಕೃಷಿಪ್ರಗತಿ ಹಾಗೂ ಸಾಮಾಜಿಕ ಕಲ್ಯಾಣ ಮೂಡಿಬರುತ್ತದೆ. ಈ ಕಾರ್ಯಸಾಧನೆಯಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಯು ಮಹತ್ವದ ಅಂಶವಾಗಿದೆ. ಈ ದೃಷ್ಟಿಯಲ್ಲಿ ಕೃಷಿ ವಿಜ್ಞಾನ ಪುಸ್ತಕ ಗಳು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಾತಂತ್ರ್ಯಾನಂತರದ ಅಭ್ಯುದಯದ ಹಲವಾರು ಯತ್ನಗಳಲ್ಲಿ ರಾಷ್ಟ್ರೀಯ ಭಾಷೆಗಳ ಅಭಿವೃದ್ಧಿಯೂ ಒಂದು. ಹಿಂದಿ ಭಾಷೆಯೊಂದಿಗೇನೇ ಇತರ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ನಡೆಯಬೇಕೆಂದು ಸಂಸತ್ತು ನಿರ್ಧರಿಸಿದೆ. ಹಲವಾರು ಭಾಷೆ ಗಳು ಬಳಕೆಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಭಾಷೆಗಳೂ ಸಮತೂಕವಾಗಿ ಬೆಳೆದು ಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದುಬರುತ್ತದೆ. ಈ ಭಾಷೆಗಳು ಸಾಕಷ್ಟು ಅಭಿವೃದ್ಧಿ ಹೊಂದಿದಾಗ ಶಿಕ್ಷಣಮಾಧ್ಯಮಗಳಾಗಲು ಸಮರ್ಥವಾಗುತ್ತವೆ. ನಾಡಿನ ಭಾಷೆಗಳೆಲ್ಲ ವನ್ನೂ ಶಿಕ್ಷಣಮಾಧ್ಯಮಗಳಾಗುವಂತೆ ಬಲಗೊಳಿಸುವ ಹೊಣೆ ವಿವಿಧ ವಿಶ್ವವಿದ್ಯಾ ನಿಲಯಗಳದ್ದು. ಅದಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳು, ಕೃಷಿಶಿಕ್ಷಣ ಮಾಧ್ಯಮ ಗಳಾಗುವಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದ್ದು ಕೃಷಿ ವಿಶ್ವವಿದ್ಯಾನಿಲಯಗಳ ಕೆಲಸವಾಗಿದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವು ಈ ಕಾರ್ಯಸಾಧನೆಗೋಸುಗ ಕನ್ನಡದಲ್ಲಿ ಕೃಷಿಸಾಹಿತ್ಯ ನಿರ್ಮಾಣ ಕೈಗೆತ್ತಿಕೊಂಡಿದೆ. ಇಷ್ಟು ದಿನ ಇಂಗ್ಲಿಷ್ ಭಾಷೆ ಯಲ್ಲಿಯೇ ಶಿಕ್ಷಣ ಪಡೆದು, ಬಳಕೆ ನಡೆಯಿಸಿದ ಶಿಕ್ಷಕ ಹಾಗೂ ವಿಜ್ಞಾನಿಗಳಿಗೆ ಒಮ್ಮೆಲೇ ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥರಚನೆ ಮಾಡುವುದು ಸುಲಭ ಕಾರ್ಯವೇನಲ್ಲ. ಇಂಥದರಲ್ಲಿ ಈ ಕೆಲಸ ಪ್ರಾರಂಭವಾದ ಅಲ್ಪಾವಧಿಯಲ್ಲಿ ಕಾಲುಶತ ಗ್ರಂಥಗಳು ಪ್ರಕಟಗೊಂಡು ಜನಪ್ರಿಯವಾದುದು ಅತ್ಯಂತ ಹೆಮ್ಮೆಯ ಸಾಧನೆ.

ಉಪಯುಕ್ತ ಸಂಶೋಧನಾಧಾರಿತ ಆಳ ಅಭ್ಯಾಸದ ಫಲವಾಗಿ ಸೃಷ್ಟಿಗೊಂಡ ಕೃಷಿ ವಿಜ್ಞಾನ ಗ್ರಂಥಗಳು ನಮ್ಮ ರಾಜ್ಯದ ಕೃಷಿ ವಿದ್ಯಾರ್ಥಿ ಹಾಗೂ ಕೃಷಿಕರಿಗೆ ಅಮೂಲ್ಯ ಕೊಡಿಗೆಗಳಾಗುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯ ಮಿಂಚಿನ ವೇಗದಿಂದ ನಡೆಯಲೆಂದು ನಾನು ಹಾರೈಸುತ್ತೇನೆ.

ಹ. ರಾ. ಅರಕೇರಿ
ಉಪಕುಲಪತಿಗಳು

ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು
ತಾ॥ 15–10–1975

ಸಂಪಾದಕರ ಮಾತು

ಮೀನುಗಾರಿಕೆ ವ್ಯವಸಾಯ ವಿಜ್ಞಾನದ ಒಂದು ಪ್ರಮುಖ ಅಂಶ. ವ್ಯವಸಾಯ ವಿಜ್ಞಾನದ ಬಗೆಗೆ ಇತರ ರಂಗಗಳಲ್ಲಿ ಹಲವಾರು ಪುಸ್ತಕಗಳು ಪ್ರಕಟವಾಗುತ್ತಿದ್ದು, ಮೀನುಗಾರಿಕೆಯಲ್ಲಿ ಪ್ರಕಟಣೆಗಳೇ ಇಲ್ಲವೆಂದು ಹೇಳಬಹುದು. ಕೃಷಿ ವಿಶ್ವವಿದ್ಯಾಲಯವು ಈ ದಿಸೆಯಲ್ಲಿ ಹಲವಾರು ಪುಸ್ತಕಗಳನ್ನು ಪ್ರಕಟಿಸುವ ಯೋಜನೆ ಹಾಕಿಕೊಂಡಿದೆ. ಈ ಪುಸ್ತಕದ ಪ್ರಕಟಣೆ ಆ ನಿಟ್ಟಿನಲ್ಲಿ ಪ್ರಥಮ ಹೆಜ್ಜೆ.

ರಾಜ್ಯದ ಮೀನುಗಾರಿಕೆ ಹೈಸ್ಕೂಲುಗಳಲ್ಲಿ ಹಲವಾರು ವರ್ಷ ಶಿಕ್ಷಕರಾಗಿ ಅನುಭವ ಪಡೆದ ಶ್ರೀ ವೈ. ಎಸ್. ದುರ್ಗೇಕರ್ ಅವರು ಈ ಪುಸ್ತಕವನ್ನು ಬರೆದಿದ್ದಾರೆ. ಇದರಲ್ಲಿ ಮೀನುಗಾರಿಕೆಯ ಸ್ಥೂಲ ಪರಿಚಯ, ಮೀನು ಹಿಡಿಯುವ ವಿವಿಧ ಸಾಧನಗಳು, ಬಲೆಗಳ ತಯಾರಿಕೆ, ಕಡಲಿನಲ್ಲಿ ಮೀನು ಹಿಡಿಯಲು ಸಂಚರಿಸುವ ದೋಣಿಗಳು ಅನುಸರಿಸಬೇಕಾದ ಹಲವು ನಿಯಮಗಳು ಈ ಮೊದಲಾದ ಹಲವು ವಿಷಯಗಳ ವಿವೇಚನೆ ಈ ಪುಸ್ತಕದಲ್ಲಿವೆ. ಈ ಗ್ರಂಥವು ಮೀನುಗಾರಿಕೆಯಲ್ಲಿ ಆಸಕ್ತರಿಗೂ, ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ.

ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560024
ತಾ॥ 15-10-1975

ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು

ಲೇಖಕರ ಮಾತು

ಮೀನುಗಾರಿಕೆಯೂ ಒಂದು ಕಸಬು. ಹಿಂದೆ ಇದು ಕೆಲವು ಕುಟುಂಬಗಳಿಗೆ ಮಾತ್ರ ವಂಶಪಾರಂಪರ್ಯವಾಗಿ ಬಂದ ವೃತ್ತಿಯಾಗಿತ್ತು. ಆದರೆ ಇಂದು ಹಾಗಾಗಿಲ್ಲ. ಎಲ್ಲ ರಂಗಗಳಲ್ಲಿ ವಿಜ್ಞಾನ ಹಾಗೂ ತಾಂತ್ರಿಕತೆಗಳು ಬೆಳೆದು ಬಂದಂತೆ ಮೀನುಗಾರಿಕೆಯಲ್ಲೆ ಬೆಳೆದುಬಂದಿವೆ. ಹಲವಾರು ಹೊಸ ವಿಧಾನಗಳು ಪರಿಣಾಮವಾಗಿ ಬಳಕೆಯಲ್ಲಿ ಬಂದಿವೆ. ಹಲವು ವರ್ಗಗಳ ಜನತೆ ಇದನ್ನು ಜೀವನಾಧಾರ ವೃತ್ತಿಯಾಗಿ ಅನುಸರಿಸಲು ಯತ್ನಿಸುತ್ತಿದ್ದಾರೆ. ಈ ಕಾರಣದಿಂದಾಗಿ ಮೀನುಗಾರಿಕೆಯು ದೇಶದ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುವ ಒಂದು ಸಾಧನವಾಗಿದೆ. ದೇಶದ ಆಹಾರ ಪರಿಸ್ಥಿತಿ, ಅದರಲ್ಲಿಯೂ ಪೌಷ್ಟಿಕಾಹಾರದ ಕೊರತೆಯನ್ನು ನೀಗಿಸುವುದರಲ್ಲಿ ಮೀನುಗಾರಿಕೆಯ ಪಾತ್ರ ಹಿರಿದಾಗಿದೆ. ಮೀನುಗಾರಿಕೆಯನ್ನು ಪ್ರಾಥಮಿಕ ಶಾಲೆಯಿಂದ ಸ್ನಾತಕೋತ್ತರ ಮಟ್ಟದವರೆಗೆ ಕಲಿಸುವ ಏರ್ಪಾಡು ಇಂದು ನಮ್ಮ ರಾಜ್ಯದಲ್ಲಿದೆ. ಕಡಲತೀರದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತಗಳಲ್ಲಿ ಮೂಲ ಉದ್ಯೋಗದ ಮುಖಾಂತರವಾಗಿ ಹಮ್ಮಿದ ಶಿಕ್ಷಣಕ್ರಮದಲ್ಲಿ ಮೀನುಗಾರಿಕೆಗೆ ವಿಶಿಷ್ಟ ಸ್ಥಾನವಿದೆ. ನೂಲುವಿಕೆ, ನೇಯ್ಗೆ ಹಾಗೂ ಕೃಷಿಗೆ ನೀಡಲಾದ ಸ್ಥಾನ ಮೀನುಗಾರಿಕೆಗೆ ದೊರೆತುದು ರಾಷ್ಟ್ರಜೀವನದಲ್ಲಿ ಅದಕ್ಕಿರುವ ಮಹತಿಯನ್ನು ಎತ್ತಿ ತೋರಿಸುತ್ತದೆ.

ಕನ್ನಡದಲ್ಲಿ ಮೀನುಗಾರಿಕೆಯ ಬಗ್ಗೆ ಪುಸ್ತಕಗಳು ವಿರಳ. ಕಡಲ ಮೀನುಗಾರಿಕೆಯ ಬಗೆಗೆ, ಬಲೆಗಳೇ ಮೊದಲಾದ ಹಲವು ವಿಷಯಗಳನ್ನು ತಿಳಿಯಬಯಸುವವರೆಲ್ಲರಿಗೂ ಇದು ಉಪಯುಕ್ತ ಪುಸ್ತಕವಾಗಿದೆ. ರಾಜ್ಯದ ಮೀನುಗಾರಿಕೆ ತರಬೇತಿ ಕೇಂದ್ರಗಳಲ್ಲಿಯ ತರಬೇತಿಗಾರರಿಗಂತೂ ಇದು ಬಹು ಪ್ರಯೋಜನಕಾರಿ.

ಈ ಪುಸ್ತಕವನ್ನು ಬರೆಯುವಿಕೆಯಲ್ಲಿಯೂ ಹಾಗೂ ಪ್ರಕಟಣೆಯ ವಿಷಯದಲ್ಲಿಯೂ ಹಲವಾರು ಜನರು ನೆರವಾಗಿದ್ದಾರೆ. ಅವರೆಲ್ಲರಿಗೂ ನನ್ನ ನೆನಕೆಗಳು ಸಲ್ಲಬೇಕು.

ಕಾರವಾರ
ತಾ॥ 1-10-1975

ವೈ. ಎಸ್. ದುರ್ಗೇಕರ

ಪರಿವಿಡಿ

ಚಿತ್ರಗಳ ಪಟ್ಟಿ

ಅಧ್ಯಾಯ 1

ಮೀನುಗಾರಿಕೆ

ವಿಶ್ವದ ವಿಸ್ತೀರ್ಣ 17 ಕೋಟಿ ಚದರ ಮೈಲುಗಳು. ಅದರಲ್ಲಿ ಸುಮಾರು 12 ಕೋಟಿ ಚದರ ಮೈಲುಗಳಷ್ಟು ಇರುವ ಸಾಗರದ ಗಹನ ಅಂತರಂಗ ಜೀವನದ ಪರಿಚಯವು ಇನ್ನೂ ಖಚಿತವಾಗಿ ತಿಳಿಯದೆ ಉಳಿದಿದೆ. ಸಾಗರ ಗರ್ಭದಲ್ಲಿ ಒಂದು ವಿಶ್ವವೇ ಅಡಗಿದೆ. ಸಾಗರದಲ್ಲಿ ಹಲವಾರು ಲಕ್ಷ ಜಾತಿ ಜಲಚರಗಳಿವೆ. ಈ ಜೀವ ರಾಶಿಗಳ ವಿವರ ಕಂಡುಹಿಡಿಯಲು ಹಲವಾರು ಸಂಶೋಧನೆಗಳು ನಡೆದಿವೆ; ನಡೆಯುತ್ತಿವೆ. ಈ ಜಲಚರಗಳಲ್ಲಿ ಹಲವು ಅಮೂಲ್ಯ ಆಹಾರವಸ್ತುಗಳಾಗಿವೆ. ಮಾನವನು ಎಂದಿನಿಂದಲೂ ತನ್ನ ಆಹಾರಕ್ಕಾಗಿ ಬಹುಮಟ್ಟಿಗೆ ಸಮುದ್ರವನ್ನು ಅವಲಂಬಿಸುತ್ತಿದ್ದುದನ್ನು ಚರಿತ್ರೆ ವಿವರಿಸುತ್ತಿದೆ. ಇಂದು ಲೋಕದಲ್ಲಿ ಜನಸಂಖ್ಯೆಯು ವಿಪರೀತವಾಗಿ ಏರುತ್ತಿರುವಾಗ ಭೂಮಿಯಲ್ಲಿ ಬೆಳೆದ ಧಾನ್ಯ ಹಾಗೂ ಇತರ ಉತ್ಪತ್ತಿ ಮಾನವನ ಬಳಕೆಗೆ ಸಾಲದಾಗಿವೆ. ಆದುದರಿಂದ ಉತ್ತಮ ಪೌಷ್ಟಿಕ ಆಹಾರಕ್ಕಾಗಿ ಸಾಗರವನ್ನೂ ಅವನು ಮೊರೆಹೋಗಬೇಕಾಗಿದೆ.

ಸಮುದ್ರದಲ್ಲಿ ದೊರೆಯುವ ಜಲಚರಗಳಲ್ಲಿ ಮೀನೂ ಒಂದು. ಸಾಗರದಲ್ಲಿ ಅಲ್ಲದೆ ಮೀನುಗಳು ಸಾಮಾನ್ಯವಾಗಿ ಇತರ ಎಲ್ಲ ಜಲಾಶಯಗಳಲ್ಲಿಯೂ ವಾಸಿಸುತ್ತವೆ. ಮೀನು ಕಡಲ ಉಪ್ಪುನೀರಿನಲ್ಲಿ ವಾಸಿಸುವಂತೆ ಒಳನಾಡಿನ ಕೆರೆ, ತೊರೆಗಳ ಸೀನೀರಿನಲ್ಲೂ ವಾಸಿಸುತ್ತವೆ. ಮೀನುಗಳಲ್ಲಿ ಕೆಲವು ಅತಿ ಚಿಕ್ಕವಾಗಿದ್ದರೆ ಕೆಲವು ತುಂಬ ದೊಡ್ಡವಾಗಿರುತ್ತವೆ. ಕಾಡ್, ಸೊರ (ಶಾರ್ಕ್), ಕಿಂಚಕ (ಗರಗಸಮೀನು) ಮುಂತಾದ ಜಾತಿಯ ಮೀನುಗಳು ಗಾತ್ರದಲ್ಲಿ ಬಹು ದೊಡ್ಡವು.

ಪ್ರತಿ ವರ್ಷ ಮಾನವನು ಹಲವಾರು ಕೋಟಿ ಟನ್‌ಗಳಿಗಿಂತಲೂ ಹೆಚ್ಚಿಗೆ ಸಮುದ್ರ ಪ್ರಾಣಿಗಳನ್ನು ಹಿಡಿಯುತ್ತಾನೆ. ಮೀನಿನ ಉತ್ಪತ್ತಿಯು ಕಳೆದ ಹತ್ತು ವರ್ಷಗಳಲ್ಲಿ ಶೇ. 50ರಷ್ಟು ಹೆಚ್ಚಾಗಿದೆ. ವಿಶ್ವದ ಬಹುಪಾಲು ದೇಶಗಳಲ್ಲಿ ಮೀನು ಅತಿ ಮುಖ್ಯ ಪೌಷ್ಟಿಕ ಆಹಾರದ ಉಗಮವೆನಿಸಿದೆ. ಮೀನು ಮಾನವನಿಗೆ ಆಹಾರವಾಗಿರುವುದಲ್ಲದೆ, ಕೋಳಿ, ಆಕಳು, ಹಂದಿ ಮುಂತಾದ ಇತರ ಆತನ ಸಾಕುಪ್ರಾಣಿಗಳಿಗೂ ಆಹಾರವಾಗಿರುತ್ತದೆ. ಆತನ ಹೊಲ, ಗದ್ದೆ, ತೋಟಗಳಿಗೆ ಮೀನು ಒಳ್ಳೆಯ ಗೊಬ್ಬರವೂ ಹೌದು.

ಮೀನುಗಾರಿಕೆಯಲ್ಲಿ **ಒಳನಾಡಿನ ಮೀನುಗಾರಿಕೆ, ಕಡಲ ಮೀನುಗಾರಿಕೆ** ಎಂದು ಸ್ಥೂಲವಾಗಿ ಎರಡು ವಿಭಾಗ ಮಾಡಬಹುದು. ಕೆರೆ, ತೊರೆ ಮುಂತಾದ

ಒಳನಾಡಿನ ಜಲಾಶಯಗಳಲ್ಲಿ ಮೀನು ಸಾಕುವುದು ಹಾಗೂ ಮೀನು ಹಿಡಿಯುವುದು **ಒಳನಾಡಿನ ಮೀನುಗಾರಿಕೆಯು.** ತಾನೆತಾನಾಗಿ ಬೆಳೆದ ಮೀನುಗಳನ್ನು ಕಡಲಿನಿಂದ ಹಿಡಿದು ಅವುಗಳ ಉಪಯೋಗ ಮಾಡಿಕೊಳ್ಳುವುದು **ಕಡಲ ಮೀನುಗಾರಿಕೆಯು.**

ಮೀನಿನಿಂದ ಅನೇಕ ಬಗೆಯ ಖಾದ್ಯಗಳನ್ನು ತಯಾರಿಸುತ್ತಾರೆ. ಹಲವಾರು ಸೌಂದರ್ಯ ಸಾಧನ ಹಾಗೂ ಔಷಧಗಳ ತಯಾರಿಕೆಯಲ್ಲೂ ಮೀನುಗಳ ಉಪಯೋಗ ಇದೆ.

ಮೀನುಗಾರಿಕೆ ಒಂದು ಉದ್ಯಮ ಅಲ್ಲ; ಇದು ಅನೇಕ ಉದ್ಯಮಗಳ ಸಂಗಮ. ಇದು ಒಂದು ದೊಡ್ಡ ಕೈಗಾರಿಕೆಯಂತಿದ್ದು, ಇದಕ್ಕೆ ಸಂಬಂಧಿಸಿದ ಅನೇಕ ಉದ್ಯೋಗ ಗಳು ಅನೇಕ ಜನರಿಗೆ ಜೀವನಾಧಾರ ಗೃಹಕೈಗಾರಿಕೆಗಳಾಗಿವೆ. ಅಂತಹ ಕೆಲವು ಉದ್ಯೋಗಗಳು ಕೆಳಗಿನಂತಿವೆ:

ಬಲೆ (ಜಾಲ) ಕಟ್ಟುವಿಕೆ, ಬಲೆಗಳಿಗೆ ಬೇಕಾಗುವ ನೂಲು ತಯಾರಿಸುವಿಕೆ, ಕತ್ತದ (ತೆಂಗಿನ ನಾರಿನ) ಹಗ್ಗ ಹಾಗೂ ಬಂದಿಗಳನ್ನು ತಯಾರಿಸುವಿಕೆ, ಮೀನುಗಳನ್ನು ಸಂಸ್ಕರಣಗೊಳಿಸುವಿಕೆ, ಮೀನೆಣ್ಣೆ ತೆಗೆಯುವಿಕೆ, ಮೀನಿನ ಗೊಬ್ಬರ ಸಿದ್ಧಪಡಿಸುವಿಕೆ, ಮೀನುಗಳ ಪರೆ, ಚರ್ಮಗಳಿಂದ ತೆರತೆರನಾದ ನಕ್ಷೆ ಹಾಗೂ ಪಾಕೀಟು ಮುಂತಾದುವು ಗಳನ್ನು ತಯಾರಿಸುವಿಕೆ, ಕೆಂಡದ ಮೀನುಗಳಿಂದ ದೀಪಗಳನ್ನು ತಯಾರಿಸುವಿಕೆ ಮತ್ತು ದೋಣಿ, ಲಾಂಚು ಮೊದಲಾದವುಗಳನ್ನು ತಯಾರಿಸುವಿಕೆಗಳು ಅಂತಹ ಕೆಲವು ಉದ್ಯೋಗಗಳಾಗಿವೆ.

ಮೀನು ಹಿಡಿಯುವಿಕೆಯ ಸ್ಥೂಲ ಪರಿಚಯ

ಪ್ರಾಚೀನ ಮಾನವನಿಗೆ ತನ್ನ ಆಹಾರ, ವಾಸಗಳ ಬಗ್ಗೆ ಅರಿವು ಅಷ್ಟಾಗಿರಲಿಲ್ಲ. ಇತರ ಪ್ರಾಣಿಗಳಂತೆಯೇ ಅವನೂ ಕೂಡ ಕಾಡು, ಗುಹೆಗಳಲ್ಲಿ ಕಾಡುಮನುಷ್ಯನಾಗಿ ಜೀವನ ನಡೆಸುತ್ತಿದ್ದನು. ಕ್ರಮೇಣ ಅವನ ಜೀವನದಲ್ಲಿ ಮಾರ್ಪಾಟು ತಲೆದೋರಿದಂತೆ ಕಾಡು, ಗುಹೆಗಳಿಂದ ಹೊರಬಂದು ಕಡಲು, ನದಿ, ಹೊಳೆ, ಹಳ್ಳಗಳ ದಂಡೆಗಳಲ್ಲಿ ಹಾಗೂ ಬಯಲು ಪ್ರದೇಶಗಳಲ್ಲಿ ವಾಸಿಸಲು ಪ್ರಾರಂಭಿಸಿದನು. ಜಲಾಶಯಗಳ ಸನಿಯದರಲ್ಲಿ ವಾಸವಾಗಿದ್ದಾಗ ಹಸಿವನ್ನು ನೀಗಿಸಿಕೊಳ್ಳಲು ಜಲಚರ ಪ್ರಾಣಿಗಳತ್ತ ಅವನ ಲಕ್ಷ್ಯ ಹೋಗಿರಬೇಕು. ಜಲಾಶಯಗಳಲ್ಲಿನ ಮೀನುಗಳನ್ನು ಹಿಡಿದು ಅವು ಗಳನ್ನು ಆಹಾರವಾಗಿ ಉಪಯೋಗಿಸಿರಬೇಕು. ಪ್ರಾರಂಭದಲ್ಲಿ ಮೀನುಗಳನ್ನು ಕೈಯಿಂ ದಲೇ ಹಿಡಿಯಲು ಯತ್ನಿಸಿರಬೇಕು. ನಂತರ ಚೂಪಾದ ಕಲ್ಲಿನ ಆಯುಧಗಳನ್ನು ನೀರಿಗೆ ಬೀಸಿ, ಮೀನುಗಳನ್ನು ಕೊಲ್ಲುವ ಕ್ರಮವನ್ನು ಅನುಸರಿಸಿರಲೂ ಸಾಕು. ಇದರಿಂದ ಅವನಿಗೆ ಹಸಿವನ್ನು ನೀಗಿಸಿಕೊಳ್ಳುವಷ್ಟು ಮೀನುಗಳು ದೊರೆತಂತೆ ತೋರು ವುದಿಲ್ಲ. ಪರಿಣಾಮವಾಗಿ ಬೇರೆ ಹಲವು ವಿಧಾನಗಳನ್ನು ಅನುಸರಿಸಿ ಸಾಕಷ್ಟು ಸಂಖ್ಯೆ

ಯಲ್ಲಿ ಮೀನು ಹಿಡಿಯಲು ಹೆಣಗಿದಂತೆ ತೋರುತ್ತದೆ. ಆ ಕೆಲವು ವಿಧಾನಗಳ ವಿವರ ಇಲ್ಲಿ ಚರ್ಚಿಸಲಾಗಿದೆ.


(1) **ಉರ್ಲು ವಿಧಾನ:** ದಾರದಿಂದ ಉರ್ಲು ತಯಾರಿಸಿ ಅದರ ಸಹಾಯದಿಂದ ನೀರಿನಲ್ಲಿರುವ ಮೀನುಗಳನ್ನು ಹಿಡಿಯಲು ಯತ್ನಿಸಿದುದು ಮಾನವನ ಪ್ರಾರಂಭದ ಯತ್ನ. ಸಮುದ್ರದಲ್ಲಿ ನೀರಮೇಲ್ಪದರದಲ್ಲಿ ಈಜುವ ಮೀನುಗಳು, ನೀರಕೆಳಪದರದಲ್ಲಿ ಈಜುವ ಮೀನುಗಳು ಎಂಬುದಾಗಿ ಎರಡು ಗುಂಪುಗಳಿವೆ. ನೀರಮೇಲ್ಪದರದಲ್ಲಿ ಈಜುವ ಮೀನುಗಳು ಆಗಾಗ ದಡ ಇಲ್ಲವೆ ಮಧ್ಯದಲ್ಲಿನ ಬಂಡೆಕಲ್ಲುಗಳ ಸಮೀಪ ಬರುವುದುಂಟು. ಆ ಸಮಯವನ್ನು ಸಾಧಿಸಿ ತನ್ನಲ್ಲಿದ್ದ ದಾರಕ್ಕೆ ಸರಗಂಟಿನಿಂದ ಉರ್ಲು ತಯಾರಿಸಿ, ಮೀನುಗಳ ಹತ್ತಿರ ಒಯ್ದು ಮೀನುಗಳು ಉರ್ಲಲ್ಲಿ ಸೇರಿದಾಕ್ಷಣ ಒಮ್ಮೆಲೆ ದಾರವನ್ನು ಜಗ್ಗುತ್ತಿದ್ದನು. ಮೀನಿನ ದೇಹ, ತಲೆ ಇಲ್ಲವೆ ಬಾಲ ಈ ಸರಗಂಟಿನಲ್ಲಿ ಸಿಕ್ಕಿಬೀಳುತ್ತಿತ್ತು. ಆಗ ದಾರವನ್ನು ಮೇಲಕ್ಕೆ ಎಳೆದು ಮೀನುಗಳನ್ನು ಪಡೆಯುತ್ತಿದ್ದನು. ಕ್ರಮೇಣ ಉರ್ಲು ದಾರವನ್ನೇ ಬಡಿಗೆಗೆ ಕಟ್ಟಿ ದಂಡೆಯ ಮೇಲೆಯೇ ನಿಂತು ಒಂದೆರಡು ಮಾರು ಅಂತರದಲ್ಲಿ ಈಜುವ ಮೀನುಗಳನ್ನು ಹಿಡಿಯಲು ಪ್ರಾರಂಭಿಸಿದನು. ಈ ವಿಧಾನದಿಂದ ನೀರಿನ ಮೇಲ್ಪದರದಲ್ಲಿರುವ ಮೀನುಗಳನ್ನು ಮಾತ್ರ ಹಿಡಿಯಲು ಸಾಧ್ಯವಾಗುತ್ತಿತ್ತು. ನೀರಿನ ಕೆಳಪದರದಲ್ಲಿರುವ ಮೀನುಗಳನ್ನು ಹಿಡಿಯುವುದಕ್ಕೋಸ್ಕರ ಆ ದಾರಕ್ಕೆ ಒಂದು ಮೀನಿನ ತುಂಡನ್ನು ಕಟ್ಟಿ ನೀರಿನಲ್ಲಿ ಎಸೆದು ಅದನ್ನು ತಿನ್ನಬಂದ ಮೀನುಗಳನ್ನು ಒಮ್ಮೆಲೇ ದಾರವನ್ನು ಮೇಲಕ್ಕೆತ್ತಿ, ಹಿಡಿಯಲು ಹಂಚಿಕೆ ಹಾಕಿದನು.

(2) **ಅಡ್ಡಹಾಕುವ ವಿಧಾನ:** ಭರತಿ ವೇಳೆಯಲ್ಲಿ ಸಮುದ್ರಕ್ಕೆ ಕೂಡುವ ನದಿಗಳಲ್ಲಿ ನೀರು ಏರುವುದನ್ನು ಮತ್ತು ಓಹೋಟಿ ವೇಳೆಯಲ್ಲಿ ನೀರು ಇಳಿಯುವುದನ್ನು ಹಾಗೂ ಆಗ ಮೀನುಗಳು ದಂಡೆಗೆ ಬರುವುದನ್ನು ಗಮನಿಸಿ ಮಾನವನು ಅವುಗಳನ್ನು ಹಿಡಿಯುವ ಯೋಜನೆಯನ್ನು ಮಾಡಿದನು. ಪ್ರವಾಹಕ್ಕೆ ಗಿಡಮರಗಳ ತೊಗಟೆಯನ್ನೇ ಬಲೆಯಂತೆ ಅಡ್ಡಒಡ್ಡಿ, ಮೀನುಗಳನ್ನು ಹಿಡಿಯಲು ಹೆಣಗಿದನು. ನೀರು ಮಾತ್ರ ಬಸಿದುಹೋಗುವಂತೆ ಈ ಗಿಡಮರಗಳ ತೊಗಟೆಗಳಲ್ಲಿ ಛಿದ್ರಗಳನ್ನು ಕೊರೆಯಲಾಗುತ್ತಿತ್ತು. ಇದೇ ಕಲ್ಪನೆ, ಬಲೆಯ ತಯೊರಿಕೆಗೆ ಸುಳಿವು ಕೊಟ್ಟಿರಬೇಕು.

(3) **ಗಾಳವಿಧಾನ:** ಮೀನುಗಳನ್ನು ಹಿಡಿಯುವುದರಲ್ಲಿನ ಮುಂದಿನ ಹೆಜ್ಜೆ ಗಾಳಗಳನ್ನು ತಯಾರಿಸಿ, ಅವುಗಳ ನೆರವಿನಿಂದ ಮೀನುಗಳನ್ನು ಹಿಡಿಯಲು ಯತ್ನಿಸಿದ್ದು. ಇವುಗಳ ಬಗೆಗೆ ಪೂರ್ಣ ವಿವರಗಳನ್ನು ಅಧ್ಯಾಯ 2ರಲ್ಲಿ ಕೊಟ್ಟಿದೆ.

(4) **ಕುಳಿವಿಧಾನ:** ನೀರಿನ ಏರಿಳಿತಗಳ ಸಮಯದಲ್ಲಿ ಗಿಡಮರಗಳ ತೊಗಟೆಗಳನ್ನು ಅಡ್ಡಹಾಕುವುದಕ್ಕೆ ಬದಲಾಗಿ, ಕುಳಿಗಳನ್ನು ತಯಾರಿಸಿ ಹರಿಯುತ್ತಿರುವ

ಅಥವಾ ಧುಮುಕುತ್ತಿರುವ ನೀರಿಗೆ ಅಡ್ಡ ಹಾಕಿ ಮೀನು ಹಿಡಿಯುವುದನ್ನು ಪ್ರಾರಂಭಿಸಲಾಯಿತು. ತೆಂಗಿನ ಗರಿಯ ಕಡ್ಡಿ ಇಲ್ಲವೇ ಬಿದುರಿನ ಕಡ್ಡಿಗಳಿಂದ ಮೀನು ಹಿಡಿಯಲು ತಯಾರಿಸಿದ ಶಂಕುವಿನಾಕಾರದ ಒಂದು ಸಾಧನಕ್ಕೆ ಕುಳಿ ಎಂದು ಹೆಸರು. ಮಳೆಗಾಲದಲ್ಲಿ ನದಿ, ಕೆರೆಗಳು ತುಂಬಿ ಹರಿಯುವಾಗ ಸಣ್ಣಪುಟ್ಟ ಹಳ್ಳ, ಕಾಲುವೆ, ಗದ್ದೆಗಳಲ್ಲಿ ನೀರು ತುಂಬುವುದು ಸ್ವಾಭಾವಿಕ. ಆಗ ನದಿ, ಕೆರೆಗಳಲ್ಲಿರುವ ಮೀನುಗಳು ಪ್ರವಾಹದೊಂದಿಗೆ ಸಾಗಿ ಈ ಹಳ್ಳ ಕಾಲುವೆಗಳಲ್ಲಿ ಬಂದು ಸೇರುತ್ತವೆ. ಕುಳಿಗಳನ್ನು ಉಪಯೋಗಿಸಿ ಇವುಗಳಲ್ಲಿರುವ ಮೀನುಗಳನ್ನು ಹಿಡಿಯುವುದು ಗ್ರಾಮಗಳಲ್ಲಿ ಇಂದಿಗೂ ರೂಢಿಯಲ್ಲಿದೆ. ಸಾಮಾನ್ಯವಾಗಿ ಒಕ್ಕಲಿಗರು ತಮ್ಮ ಗದ್ದೆಯ ನೀರು ಇಳಿದು ಹೋಗುವಾಗ್ಗೆ ಕುಳಿಯನ್ನು ಅಡ್ಡವಾಗಿರಿಸಿ ಅವುಗಳಲ್ಲಿ ಸಿಕ್ಕುಬೀಳುವ ಮೀನು ಸಂಗ್ರಹಿಸುತ್ತಾರೆ.



ಚಿತ್ರ 1: ಕುಳಿಸಾಧಾನ

ಈ ಯಾವ ವಿಧಾನಗಳೂ ಸಮುದ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಮೀನುಗಳನ್ನು ಹಿಡಿಯಲು ಸಹಾಯಕಾರಿಯಾಗುವುದಿಲ್ಲ. ಈ ಕಾರ್ಯಕ್ಕೆ ಬಲೆಗಳೇ ಪರಿಣಾಮಕಾರಿ ಸಾಧನಗಳು. ಹಳೆಯ ಕಾಲದ ಬಲೆಗಳಿಂದ ಮೀನುಗಳನ್ನು ಹಿಡಿಯಬೇಕಾದರೆ ಆ ಬಲೆಗಳನ್ನು ನೀರಿನಲ್ಲಿ ಚೆಲ್ಲಿ ಅವುಗಳಲ್ಲಿ ಬಂದು ಸೇರುವ ಮೀನುಗಳ ಸಲುವಾಗಿ ಗಂಟೆಗಟ್ಟಲೆ ಕಾದಿರಬೇಕಾಗುತ್ತದೆ. ಈ ತೊಂದರೆಯನ್ನು ದೂರಮಾಡಲು ಬಲೆಗಳ ರಚನೆಯಲ್ಲಿ ಬಹುಬಗೆಯ ಸುಧಾರಣೆಗಳಾಗಿವೆ. ಈಗ ಬಲೆಹಾಕಿ ಗಂಟೆಗಟ್ಟಲೆ ಕಾಲ ಕಾಯಬೇಕಿಲ್ಲ. ಸಧ್ಯ ಪ್ರಚಲಿತವಿರುವ ರಂಪಣಿ ಮತ್ತು ಟ್ರೊಲ್ ಬಲೆಗಳು ಸುಧಾರಿಸಿದ ಬಲೆಗಳಲ್ಲಿನ ಕೆಲವು ದೃಷ್ಟಾಂತಗಳು.

ಅಧ್ಯಾಯ 2

ಮೀನು ಹಿಡಿಯುವ ಸಾಧನಗಳು

ಮೀನು ಹಿಡಿಯುವುದೂ ಒಂದು ಕಲೆ. ಮೀನು ಹಿಡಿಯಲು ಚಾಕಚಕ್ಯತೆ ಬೇಕು. ಚುರುಕಿನ ಪ್ರಾಣಿಗಳಾದ ಮೀನುಗಳು ಅಷ್ಟು ಸುಲಭವಾಗಿ ಕೈಗೆ ಸಿಗುವುದಿಲ್ಲ. ಆದ್ದರಿಂದ ಮಾನವನು ಅವುಗಳನ್ನು ಮೋಸಗೊಳಿಸಿ, ಅವು ಸುಲಭವಾಗಿ ಸಿಕ್ಕಿ ಬೀಳುವಂತೆ ಕೆಲವು ಸಾಧನಗಳನ್ನು ಅನುಭವಗಳಿಂದ ಸೃಷ್ಟಿಸಿಕೊಂಡಿರುತ್ತಾನೆ. ಈ ಸಾಧನಗಳಲ್ಲಿ ಎಷ್ಟೋ ಸುಧಾರಣೆಗಳಾಗಿ, ಅನೇಕ ಮಾರ್ಪಾಡುಗಳೂ ಆಗಿವೆ. ಮೀನುಗಳು ಮಾನವನ ಇಂಗಿತ ಮತ್ತು ಉದ್ದೇಶವನ್ನು ಅರಿತು ತಪ್ಪಿಸಿಕೊಂಡಷ್ಟೂ ಮಾನವನು ತನ್ನ ಸಾಧನಗಳಲ್ಲಿ ಬದಲಾವಣೆಗಳನ್ನೂ, ಮಾರ್ಪಾಡುಗಳನ್ನೂ ಮಾಡುತ್ತಬಂದಿದ್ದಾನೆ.

ಮೀನು ಹಿಡಿಯುವ ಸಾಧನಗಳನ್ನು ಮುಖ್ಯವಾಗಿ **ಗಾಳ** ಮತ್ತು **ಬಲೆ**ಗಳು — ಹೀಗೆ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಗಾಳಗಳು ಮತ್ತು ಬಲೆಗಳು ಅನೇಕ ಬಗೆಯವುಗಳಾಗಿವೆ.

ಗಾಳಗಳಲ್ಲಿ **ಛಡಿಗಾಳ, ಲಾಂಬೋರಿಗಾಳ, ವಾಲ್‌ಗಾಳ** ಹಾಗೂ **ಚಮಚೆಗಾಳ**ಗಳೆಂಬ ವಿವಿಧ ಬಗೆಗಳಿವೆ.


ಬಲೆಗಳಲ್ಲಿ **ಜಗ್ಗುವ ಬಲೆ, ತೇಲಾಡುವ ಮತ್ತು ಮುಳುಗುವ ಬಲೆ, ಬೀಸುವಬಲೆ, ಚೀಲದ ಬಲೆ**, ಹಾಗೂ **ಗಾಳಬಲೆ**ಗಳೆಂದು ವಿವಿಧ ಬಗೆಗಳಿರುತ್ತವೆ. ಜಗ್ಗುವ ಬಲೆಗಳಲ್ಲಿ **ಗೋರುವ ಬಲೆ, ರಂಪಣಿಬಲೆ, ಬಾಕ್ಸಿಬಲೆ, ಘೋಳಬಲೆ** ಹಾಗೂ **ಟ್ರಾಲ್‌ಬಲೆ**ಗಳೆಂದು ಕೆಲವು ವಿಧಗಳಿವೆ. ಗೋರುವ ಬಲೆಗಳಲ್ಲಿ **ಸಣ್ಣ ಇಲ್ಲವೆ ದೊಡ್ಡ ಕಣ್ಣುಗಳಗೋರುವ (ಗಾಬೆಲ್)** ಬಲೆಗಳು ಮತ್ತು ರಂಪಣಿ ಬಲೆಗಳಲ್ಲಿ **ಸಣ್ಣ** ಹಾಗೂ **ದೊಡ್ಡ** ಬಲೆಗಳೂ ಇರುತ್ತವೆ. ತೇಲಾಡುವ ಮತ್ತು ಮುಳುಗುವ ಬಲೆಗಳಲ್ಲಿ **ಬೀಡುಬಲೆ, ಕಾಂಟಲಿಬಲೆ, ಮುಡ್ಲೆ ಬಲೆ** ಹಾಗೂ **ಬಿಳಿ (ಬಂಗಡೆ)** ಬಲೆಗಳು ಕಂಡುಬರುತ್ತವೆ. ಬಂಗಡೆ ಬಲೆಗಳಲ್ಲಿ **ಬಂಗಡೆ ಪಟ್ಟೆಬಲೆ** ಹಾಗೂ **ಬುಡಿ ಬಲೆ** ಗಳೆಂದು ಎರಡು ವಿಧ. ಬೀಸುವ ಬಲೆಗಳಲ್ಲಿ **ಹೊಂಗಿ ಬಲೆ** ಹಾಗೂ **ನಿಂಗಿ ಬಲೆ** ಗಳೆಂದು ಎರಡು ತೆರನಾದ ಬಲೆಗಳು ಇವೆ.

1. ಗಾಳಗಳು

ಗಾಳ, ಮೀನು ಹಿಡಿಯುವ ಸಾಧನಗಳಲ್ಲೊಂದು. ಇದರ ತಯಾರಿಕೆ, ಉಪಯೋಗ ಹಾಗೂ ಪ್ರಯೋಗ ಸುಲಭ. ಅದರಲ್ಲೂ, ಸಣ್ಣಪುಟ್ಟ ಹಳ್ಳ ಮತ್ತು ನದಿ

ಅಥವಾ ಕಡಲ ತೀರಗಳಲ್ಲಿರುವ ಮೀನುಗಳನ್ನು ಸಣ್ಣ ಪ್ರಮಾಣದಲ್ಲಿ ಹಿಡಿಯಲು ಗಾಳ ಅತ್ಯಂತ ಉಪಯೋಗಕರ.

ನೀರಿನಲ್ಲಿ ಮೀನುಗಳ ಚಲನವಲನ ಚಿತ್ತಾಕರ್ಷಕ. ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ತಿನ್ನುತ್ತವೆ. ಏನನ್ನಾದರೂ ನೀರಿನಲ್ಲಿ ಚೆಲ್ಲಿದರೆ ಅದನ್ನು ತಿನ್ನಲು ಮೀನುಗಳ ಒಂದು ಗುಂಪೇ ನೆರೆಯುತ್ತದೆ. ಇದನ್ನು ನಿರೀಕ್ಷಿಸಿದ ಮನುಷ್ಯನಿಗೆ ಮೀನಿನ ಮಾಂಸದಿಂದಲೇ ಮೀನುಗಳನ್ನು ಹಿಡಿಯಬೇಕೆಂಬ ಆಲೋಚನೆ ಬಂದಿರಬೇಕು. ಪ್ರಾರಂಭದಲ್ಲಿ ತಂತಿಯ (ಸರಿಗೆ) ತುದಿಯನ್ನು ಕೊಕ್ಕೆಯಂತೆ ಬಗ್ಗಿಸಿ ಅದರ ತುದಿಗೆ ಮಾಂಸದ ಚೂರನ್ನು ಸಿಕ್ಕಿಸಿ, ದಾರಕ್ಕೆ ಕಟ್ಟಲಾಗುತ್ತಿತ್ತು. ಹಲವು ಮೀನುಗಳು ಸರಿಗೆಯ ಕೊಕ್ಕೆಯನ್ನೇ ಬಗ್ಗಿಸಿಕೊಂಡು ಹೋಗುತ್ತಿದ್ದವು. ಇದನ್ನು ತಪ್ಪಿಸಲು ಸಿಕ್ಕಿದ ಮೀನು ತಪ್ಪಿಸಿಕೊಂಡು ಹೋಗದಂತೆ ಸರಿಗೆಯ ಕೊಕ್ಕೆಯ ಮೊನೆಯನ್ನು ಬಾಣ ದಾಕಾರವಾಗಿ ಮಾಡಿರುತ್ತಾರೆ. ಈ ಬಾಣದಾಕಾರದ ಮೊನೆಯುಳ್ಳ ಸರಿಗೆಯ (ತಂತಿ) ಕೊಕ್ಕೆಯೇ **ಗಾಳ.** ಮಾನವನು ಬುದ್ಧಿವಂತಿಕೆಯಿಂದಲೂ ಅನುಭವದಿಂದಲೂ ಗಾಳ ವನ್ನು ನಿರ್ಮಿಸಿದ್ದಾನೆ. ಗಾಳಗಳು ಹಲವಾರು ಬಗೆಯುವುಗಳಾಗಿವೆ.



ಚಿತ್ರ 2: ಛಡಿಗಾಳ


(i) **ಛಡಿಗಾಳ:** ಇದನ್ನು ಬಿದಿರು ಕಡ್ಡಿಯಿಂದ ತಯಾರಿಸಿರುತ್ತಾರೆ. ಇದು 10–15 ಅಡಿ ಉದ್ದವಾಗಿದ್ದು ತುದಿಯು ತೆಳುವಾಗಿರುವುದು. ಈ ತೆಳುವಾದ

ತುದಿಗೆ ಭರಣಿ ಹುರಿ, ತೆಂಗಿನ ದಾರ ಇಲ್ಲವೆ ತಂತಿಗಳನ್ನು ಕಟ್ಟಿ ಅವುಗಳ ತುದಿಗೆ ಗಾಳ ಸಿಕ್ಕಿಸಿರುತ್ತಾರೆ. ಮೀನುಗಳನ್ನವಲಂಬಿಸಿ ಗಾಳವು ಸಣ್ಣದು ಅಥವಾ ದೊಡ್ಡದಿರ ಬಹುದು. ಗಾಳಕ್ಕೆ ಮೀನಿನ ತುಂಡು ಇಲ್ಲವೆ ಎರೆಹುಳವನ್ನು ಸಿಕ್ಕಿಸಿರುತ್ತಾರೆ. ನದಿಯ ದಂಡೆಯ ಮೇಲೆ ಇಲ್ಲವೆ ಸಮುದ್ರದಂಚಿನ ದೊಡ್ಡ ಬಂಡೆಗಲ್ಲುಗಳ ಮೇಲೆ ಕೂತು ಛಡಿಗಾಳದ ಸಹಾಯದಿಂದ ಮೀನುಗಳನ್ನು ಹಿಡಿಯುವುದು ವಾಡಿಕೆ.

(ii) **ಲಾಂಬೋರಿ (ಉದ್ದದಾರದ)ಗಾಳ:** ಲಾಂಬೋರಿ ಗಾಳ ಎಂಬ ಹೆಸರು ಕೊಂಕಣಿ ಭಾಷೆಯ ಲಾಂಬ್‌ದೋರಿ ಎಂಬ ಪದದಿಂದ ಬಂದಿದೆ. ಇದರ ಅರ್ಥವು 'ಉದ್ದದಾರ' ಎಂದು. ಇದನ್ನು ದಾರ ಇಲ್ಲವೆ ಭರಣಿ ಹುರಿಗಳನ್ನು ಕಟ್ಟಿ ತಯಾರಿಸಿರುತ್ತಾರೆ. ಇದು 20–30 ಗಜ ಉದ್ದ ಇರುವುದು. ಇದರ ಒಂದು ತುದಿ ಯಲ್ಲಿ $1'' \times \frac{1}{2}'' \times \frac{1}{5}''$ ಅಳತೆಯ ಸೀಸದ ತುಂಡು ಇರುತ್ತದೆ. ಸೀಸದ ತುಂಡಿನ ಮೇಲ್ಗಡೆಗೆ ಮೂರು ಇಲ್ಲವೆ ನಾಲ್ಕು ಗಾಳಗಳನ್ನು ಕಟ್ಟಿರುತ್ತಾರೆ. ಸೀಸದ ತುಂಡನ್ನು ಕಟ್ಟಿರುವುದರಿಂದ ಗಾಳವನ್ನು ದೂರದವರೆಗೆ ತೂರಲು ಅನುಕೂಲವಾಗುವುದಲ್ಲದೆ, ಸೀಸದ ತುಂಡಿನ ಭಾರದಿಂದಾಗಿ ಗಾಳಗಳು ನೀರಿನ ತಳಕ್ಕೆ ಹೋಗಲು ಸಹಾಯಕ ವಾಗುತ್ತದೆ. ಈ ಗಾಳವನ್ನು ಸುತ್ತಿ. ಒಂದೆಡೆಯಿಂದ ಇನ್ನೊಂದೆಡೆಗೆ ಕೊಂಡೊಯ್ಯ ಬಹುದು. ಮೀನನ್ನು ಹಿಡಿಯುವಾಗ ಸುತ್ತಿದ ದಾರವನ್ನು ಬಿಚ್ಚಿ, ಗಾಳಕ್ಕೆ ಮಾಂಸದ ತುಂಡನ್ನು ಹಚ್ಚಿ ಸಮುದ್ರದಲ್ಲಿ ಎಸೆಯುತ್ತಾರೆ. ಗಾಳದ ದಾರದ ಉದ್ದ, ಎಸೆಯುವವನ ಶಕ್ತಿಯ ಸಾಮರ್ಥ್ಯವನ್ನವಲಂಬಿಸಿ ಅದು ದೂರಕ್ಕೆ ಹೋಗಿ ಬೀಳುವುದು. ಹೀಗೆ ದೂರಕ್ಕೆ ಎಸೆದ ನಂತರ, ಮೀನುಗಾರನು ತನ್ನ ಬಲಗೈಯಲ್ಲಿ ಆಧಾರ (ಮರದ ಹಿಡಿ) ವನ್ನು ಹಿಡಿದು ಕುಳಿತುಕೊಳ್ಳುವನು. ಮೀನು ಗಾಳಕ್ಕೆ ಹಚ್ಚಿದ ಮಾಂಸದ ತುಂಡನ್ನು ನುಂಗುವಾಗ 'ಕುಟ್ ಕುಟ್' ಇಲ್ಲವೆ 'ಕರ್ ಕರ್' ಶಬ್ದ ಕೇಳಿ ಬರುವುದು; ಇಲ್ಲವೆ ದಾರ ಅಲುಗಾಡಿದ ಸಂಕೇತ ತೋರಿಬರುವುದು. ಕೂಡಲೇ ಆತನು ದಾರವನ್ನು ಒಮ್ಮೆಲೆ ತನ್ನ ಕಡೆಗೆ ಎಳೆದುಕೊಳ್ಳುವನು. ಒಮ್ಮೊಮ್ಮೆ ಮೀನುಗಳು ಮಾಂಸದ ತುಂಡನ್ನು ನುಂಗಿ ಗಾಳವನ್ನು ಬಲವಾಗಿ ಜಗ್ಗುತ್ತವೆ. ಈ ಗಾಳದಿಂದ ದಂಡೆಗೆ ಸನಿಯದ ರಲ್ಲಿಯ ಮೀನುಗಳನ್ನಷ್ಟೇ ಹಿಡಿಯಲು ಸಾಧ್ಯ. ದೋಣಿಯಲ್ಲಿ ಕುಳಿತು ಸಂಚಾರ ಮಾಡಿಯೂ ಈ ಗಾಳದಿಂದ ಮೀನು ಹಿಡಿಯಬಹುದು.

(iii) **ವಾಲ್‌ಗಾಳ:** ಇಪ್ಪತ್ತು ನಂಬರು ನೂಲಿನ 15, 20 ಎಳೆ ಕೂಡಿಸಿ, ದಪ್ಪ ದಾರಗಳನ್ನು ಸಿದ್ಧಪಡಿಸಿ, ಇಂಥ 3–4 ದಾರಗಳನ್ನು ಕೂಡಿಸಿ, ಹುರಿ ಹಾಕಿ, 2 ಇಲ್ಲವೆ 3 ಮಿಲಿಮೀಟರ್ ವ್ಯಾಸದಷ್ಟು ಗಾತ್ರದ 55–65 ಮೀಟರ್ ಉದ್ದದ ಗಡುತರ ದಾರವನ್ನು ತಯಾರಿಸುವರು. ಇದು ಒಂದು **ವಾಲಕಾಂಡ.** ಈ ವಾಲ ಕಾಂಡಕ್ಕೆ ಹುರಿ ಹಾಕಿ ಒಳ್ಳೆಯ ಬಿಗುಪು ತರಿಸಲು ಎರಡು ಮರಗಳಿಗೆ ಬಿಗಿಯಾಗಿ ಕಟ್ಟಿ ಒಂದೆರಡು ದಿನ ಇಡುವರು. ಅನಂತರ ಅದನ್ನು ತೆಗೆದು ಮುಂಡಗೆ ಸುತ್ತುವರು. ಹುರಿ ಬಿಚ್ಚಿಹೋಗದೆ ಶಾಶ್ವತವಾಗಿರಲು, ಹಾಗೂ ದಾರವು ಬಿರುಸಾಗಿ ಹೆಚ್ಚು ತಾಳಿಕೆ

ಬರಲು ಅದನ್ನು ತೆಂಬರಿಕಾಯಿಯ ರಸದಲ್ಲಿ ಹಾಕಿ ಒಣಗಿಸುವರು. ಇಂಥ 100, 200 ಇಲ್ಲವೆ 300 ವಾಲಕಾಂಡಗಳನ್ನು ಕೂಡಿಸಿ ಒಂದು **ವಾಲ್** ತಯಾರಿಸುವರು. ಈ ವಾಲ್‌ದ ಒಂದು ತುದಿಗೆ ನಾಲ್ಕು ಇಲ್ಲವೆ ಐದು ದೊಡ್ಡ ಆಕಾರದ ಗಾಳಗಳನ್ನು ಕಟ್ಟುವರು. ಈ ವಾಲ್‌ದ ಉದ್ದ 5500 ಮೀಟರ್ ಇರುವುದು. ಇದರ ಉದ್ದಕ್ಕೂ 1,000 ದಿಂದ 5,000 ಗಾಳಗಳನ್ನು ಕಟ್ಟುತ್ತಾರೆ. ಬಾಯಿ ಸೀಲ್‌ಮಾಡಿದ ಡಬ್ಬಗಳ ನೆರವಿನಿಂದ ವಾಲ್ ನೀರಿನಲ್ಲಿ ಕೆಲಅಡಿ ಕೆಳಗೆ ನೇತಾಡುತ್ತಿರುವಂತೆ ವ್ಯವಸ್ಥೆ ಇರುತ್ತದೆ. ವಾಲ್‌ದಲ್ಲಿ ಸುಮಾರು ಎರಡು ಮೀಟರ್ ಅಂತರಗಳಲ್ಲಿ ಒಂದೊಂದರಂತೆ ಚಿತ್ರ 3 ರಲ್ಲಿ ತೋರಿಸಿರುವಂತೆ ಹಲವು ಗಾಳಗಳನ್ನು ಕಟ್ಟಿರುತ್ತಾರೆ. ಗಾಳಗಳ ತುದಿಗೆ ಕೀಲಿಸಮೀನು ಇಲ್ಲವೆ ನುಚುಕಿಮೀನುಗಳ ತುಂಡುಗಳನ್ನು ಕಟ್ಟಿರುತ್ತಾರೆ. ಸಮುದ್ರ ದಂಡೆಯಿಂದ 10–15 ಮೈಲು ಒಳಸಾಗಿ. ವಾಲ್‌ಗಾಳವನ್ನು ದೂರದ ಆಳ ಸಮುದ್ರ ದಲ್ಲಿ ಹೋಗಿ ಹಾಕುತ್ತಾರೆ. ಈ ಬಲೆಯು ಪ್ರವಾಹದ ಸೆಳೆತಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋಗದಂತೆಯೂ, ದೊಡ್ಡ ಮೀನುಗಳು ಬಲೆಯನ್ನು ಜಗ್ಗಿಕೊಂಡು ಹೋಗದಂತೆಯೂ ಅದರ ಒಂದು ತುದಿಗೆ ಭಾರವಾದ ಕಲ್ಲು ಇಲ್ಲವೆ ಕಬ್ಬಿಣದ ತುಂಡುಗಳನ್ನು ಕಟ್ಟಿರುತ್ತಾರೆ. ಈ ಪ್ರಕಾರ ಕಟ್ಟಿದ ತರುವಾಯ ಸಾವಕಾಶವಾಗಿ ಒಂದರ ತರುವಾಯ ಒಂದು




ಚಿತ್ರ 3: ವಾಲ್‌ಗಾಳಗಳು

ಗಾಳದಂತೆ ಎರೆಯನ್ನು ಹಚ್ಚಿ ನೀರಿನಲ್ಲಿ ಬಿಡುತ್ತಾ ಸಾಗುತ್ತಾರೆ. ವಾಲ್‌ಗಾಳದಲ್ಲಿ ಮೀನುಗಳು ಸಿಕ್ಕಿ ಬೀಳುವವರೆಗೆ ಕಾಯದೆ, ಅದನ್ನು ಸಮುದ್ರದಲ್ಲಿಯೇ ಬಿಟ್ಟು ಮರುದಿನ ಮುಂಜಾವಿನಲ್ಲಿ ಬಲೆಹಾಕಿದ ಸ್ಥಳಕ್ಕೆ ಹೋಗಿ ಒಂದು ತುದಿಯಿಂದ ಜಗ್ಗುತ್ತ ವಾಲ್‌ಗಾಳವನ್ನು ಮೇಲಕ್ಕೆ ಎತ್ತುತ್ತಾರೆ. ಹೆಚ್ಚಾಗಿ ಈ ಗಾಳಬಲೆಯಿಂದ ಸೋರ, ತೊರ್ಕೆ, ಶೇಡೆ, ಗೊಬ್ಬರೆ, ಕಿಂಚಕಿ, ಝೋಳ, ಕೂರ್ಮ ಮುಂತಾದ ಮೀನು ಗಳನ್ನೇ ಹಿಡಿಯುತ್ತಾರೆ. ದೊಡ್ಡ ಹಾಗೂ ಬಲವುಳ್ಳ ಮೀನು ಈ ಬಲೆಯಲ್ಲಿ ಸಿಕ್ಕಿ

ಬಿದ್ದರೆ ಅದು ಪಾಲನ್ನು ಜಗ್ಗಿಕೊಂಡು ಹೋಗುವ ಸಂಭವವಿದೆ. ಸಮುದ್ರದ ಪ್ರವಾಹದ ಸೆಳೆತವು ಅತಿಯಾಗಿದ್ದಾಗಲೂ ಈ ಗಾಳ ಸ್ಥಳಾಂತರಗೊಳ್ಳುವ ಸಂಭವವಿದೆ. ಹೀಗೆ ಬಲೆಯು ಸ್ಥಳಾಂತರ ಹೊಂದಿದಾಗ ಮೀನುಗಾರರಿಗೆ ಬಲೆಯ ನಿರ್ದಿಷ್ಟ ಸ್ಥಳವು ಗೊತ್ತಾಗದೆ ಬಹಳ ತೊಂದರೆಯಾಗುವುದು. ಈ ಬಲೆಯನ್ನು ವಿಶೇಷವಾಗಿ ಅಕ್ಟೋಬರ್ ತಿಂಗಳಿಂದ ಮಾರ್ಚ್ ತಿಂಗಳವರೆಗೆ ಉಪಯೋಗಿಸುತ್ತಾರೆ. ಈ ಅವಧಿಯಲ್ಲಿಯೇ ಮೀನುಗಳು ಹೆಚ್ಚಾಗಿ ದೊರೆಯುವುದು.

(iv) **ಚಮಚೆಗಾಳ:** ಈ ಗಾಳದಲ್ಲಿ ಒಂದು ಹೊಳೆಯುವ ಚಮಚೆಯಂತಹ ಸಾಧನವಿರುತ್ತದೆ. ಮೀನುಗಳು ಹೊಳೆಯುತ್ತಿರುವ ಈ ಸಾಧನವನ್ನೇ ಆಹಾರವೆಂದು ಮೋಸಹೋಗಿ ಅದನ್ನು ತಿನ್ನಲು ಬಯಸಿ ಗಾಳದಲ್ಲಿ ಸಿಕ್ಕಿಬೀಳುತ್ತವೆ. ಮೀನುಗಳನ್ನು ಮೋಸಗೊಳಿಸಿ ಹಿಡಿಯುವುದೇ ಈ ಗಾಳದ ವೈಶಿಷ್ಟ್ಯ.



ಚಿತ್ರ 4: ಚಮಚೆಗಾಳಗಳು

(i) ಮುಂಬದಿಯ ನೋಟ (ii) ಹಿಂಬದಿಯ ನೋಟ

ಚಮಚೆಯಂಥ ಸಾಧನವನ್ನು ಯಾವದೊಂದು ಲೋಹದಿಂದ ತಯಾರಿಸಿ, ಅದಕ್ಕೆ ಬೆಳ್ಳಿಯಂತೆ ಹೊಳೆಯುವ ಗಿಲೀಟು ಮಾಡಿಸಿರುತ್ತಾರೆ. ಇದು ಆಕಾರದಲ್ಲಿ ಅಡುಗೆ ಚಮಚೆಯಂತೆಯೇ ಇದ್ದು, ಇದರ ಕೆಳಗಡೆ ಮೂರು ಗಾಳಗಳನ್ನು ಜೋಡಿಸಲಾಗಿರುತ್ತದೆ. ಚಮಚೆಗೆ ತಿರುಗುವುದರ ಸಲುವಾಗಿ ತಿರುಗಣೆಯ ವ್ಯವಸ್ಥೆ ಇರುತ್ತದೆ. ಈ ಗಾಳಕ್ಕೆ ಮೀನಿನ ಮಾಂಸದ ತುಂಡನ್ನು ಹಚ್ಚುವ ಆವಶ್ಯಕತೆ ಇರುವದಿಲ್ಲ. ಹವ್ಯಾಸಿಗಳೂ ಕೂಡ ಮನೋರಂಜನೆಗೆಂದು ಮೀನು ಹಿಡಿಯಲು ಈ ಸಾಧನವನ್ನು ಉಪಯೋಗಿಸುತ್ತಾರೆ. ಚಮಚೆಯ ಗಾಳವನ್ನು ಬಲವಾದ 100 ಇಲ್ಲವೆ 200 ಅಡಿ ಉದ್ದವಿರುವ ದಾರಕ್ಕೆ ಕಟ್ಟುತ್ತಾರೆ. ಈ ದಾರವನ್ನು ಟೇಪು ಸುತ್ತುವಂತಹ ಒಂದು ಚಕ್ರಕ್ಕೆ ಸುತ್ತುತ್ತಾರೆ. ಈ ಗಾಳಗಳಿಂದ ಮೀನು ಹಿಡಿಯಬೇಕಾದರೆ ದೋಣಿಯಲ್ಲಿ ಇಲ್ಲವೆ ಮೋಟಾರಲಾಂಚಿನಲ್ಲಿ ಕುಳಿತು ಹೋಗಬೇಕು. ಗಾಳವನ್ನು ನೀರಿಗೆ ಬಿಟ್ಟನಂತರ ಅದು ಮುಳುಗುವಾಗ ಮೇಲೆ ಕೆಳಗೆ ಆಗಿ ಹೊಳೆಯುತ್ತ ಕೆಳಕ್ಕೆ ಹೋಗುತ್ತದೆ. ಅದು ಕೆಳಕ್ಕೆ ಹೋಗುತ್ತಿದ್ದಂತೆ ದಾರವನ್ನೂ ಬಿಡುತ್ತ ಹೋಗಬೇಕು. 50–60 ಅಡಿ ಉದ್ದ ದಾರ ಬಿಟ್ಟನಂತರ ದೋಣಿಯನ್ನು ಹುಟ್ಟುಹಾಕುತ್ತ ನಿಧಾನವಾಗಿ ಮುಂದಕ್ಕೆ ಒಯ್ಯಬೇಕು. ದೋಣಿಯು ಮುಂದೆ ಮುಂದೆ ಸಾಗುತ್ತಿದ್ದಂತೆ ಆ ಚಮಚೆಗಾಳವು ತಿರುಗಣೆಯ ಮೂಲಕ ಗರಗರ ತಿರುಗುತ್ತದೆ. ಗರಗರ ತಿರುಗುತ್ತಿರುವ ಚಮಚೆಯು ನೀರಿನಲ್ಲಿ ದೊಡ್ಡದಾಗಿಯೂ, ಬೆಳ್ಳಗೆ ಹೊಳೆಯುತ್ತಿರುವಂತೆಯೂ ಕಾಣುವುದರಿಂದ ಮೀನುಗಳು ಇದನ್ನು ಯಾವುದೋ ಒಂದು ಆಹಾರವಸ್ತುವೆಂದೇ ತಿಳಿದು ಮೋಸಹೋಗಿ ನುಂಗಿಬಿಡುತ್ತವೆ. ಆಗ ಗಾಳಗಳು ಮೀನುಗಳ ಬಾಯಿಗಳಿಗೆ ಬಲವಾಗಿ ಚುಚ್ಚುತ್ತವೆ. ಗಾಬರಿಯಾದ ಮೀನುಗಳು ಗಾಳವನ್ನೇ ಜಗ್ಗಿ ಮುಂದಕ್ಕೊಯ್ಯಲು ಯತ್ನಿಸುತ್ತವೆ. ಆಗ ಉಳಿದ ದಾರವನ್ನು ನಿಧಾನವಾಗಿ ಬಿಡುತ್ತ ದಾರ ಸಾಗುವ ದಿಕ್ಕಿಗೆ ದೋಣಿಯನ್ನು ಒಯ್ಯಬೇಕಾಗುವುದು. ಮೀನು ದಣಿದಾಗ ಮೀನಿನ ಜಗ್ಗಾಟವು ಕಡಮೆಯಾಗುತ್ತದೆ. ಆಗ ಗಾಳದ ದಾರವನ್ನು ನಿಧಾನವಾಗಿ ಸುತ್ತಲು ಪ್ರಾರಂಭಿಸಬೇಕು. ಮೀನು ಮೇಲಕ್ಕೆ ಬಂದನಂತರ, ಅದನ್ನು ಎತ್ತಿ ದೋಣಿಯಲ್ಲಿ ಹಾಕಿಕೊಳ್ಳುತ್ತಾರೆ. ಕೆಲವೊಂದು ದೊಡ್ಡ ಮೀನುಗಳು ದಾರವನ್ನು ಹರಿದು ಚಮಚೆಗಾಳ ಸಹಿತ ಮಾಯವಾಗಿ ಬಿಡುವುದೂ ಉಂಟು.

ಚಮಚೆಗಾಳದಿಂದ ಸಾಮಾನ್ಯವಾಗಿ ನವೆಂಬರ್, ಡಿಸೆಂಬರ್, ಜನವರಿ ಮತ್ತು ಫೆಬ್ರುವರಿ ತಿಂಗಳುಗಳಲ್ಲಿ ಮೀನುಗಳನ್ನು ಹಿಡಿಯುತ್ತಾರೆ. ಈ ಅವಧಿಯಲ್ಲಿ ಸಮುದ್ರದ ನೀರು ಮಂದವಿರುತ್ತದೆ ಮತ್ತು ಮೇಲಿನ ನೀರು ಬೆಚ್ಚಗಿದ್ದು ಕೆಳಗಿನ ನೀರು ತಣ್ಣಗಿರುವುದರಿಂದ ಮೀನುಗಳು ವಿಪುಲವಾಗಿ ದೊರೆಯುತ್ತವೆ. ಈ ಗಾಳದಿಂದ ವಿಶೇಷವಾಗಿ ರಾಂವುಸ್, ಸೊರ, ಘೋಳ, ದಾಯಣಿ (ಹಲ್‌ಮೀನು) ಈಸ್ವಣ, ಗೊಬ್ಬರ ಮುಂತಾದ ಮೀನುಗಳನ್ನು ಹಿಡಿಯುತ್ತಾರೆ.

ಹಿರಿಯರು ಗಾಳಗಳಿಂದ ಮೀನು ಹಿಡಿಯುವುದನ್ನು ಆಗಾಗ ನೋಡುತ್ತಿರುವ ಮೀನುಗಾರರ ಮಕ್ಕಳೂ ತಮ್ಮದೇ ಆದ ರೀತಿಗಳಲ್ಲಿ ಮೀನುಗಳನ್ನು ಹಿಡಿಯುವ

ದೃಶ್ಯ ಕಡಲ ತೀರಗಳಲ್ಲಿ ಮೋಜಿನದಾಗಿರುತ್ತದೆ. ಸಮುದ್ರದಂಡೆಯಲ್ಲಿರುವ ಸಣ್ಣ, ದೊಡ್ಡ ಹಳ್ಳಗಳು ಭರತಿ ವೇಳೆಗಳಲ್ಲಿ ನೀರಿನಿಂದ ತುಂಬಿ ಎಲ್ಲೆಲ್ಲಿಯೂ ನೀರೇ ಗೋಚರ ವಾಗುತ್ತದೆ. ಓಹೋಟಿ (ಇಳಿತದ) ವೇಳೆಗಳಲ್ಲಿ ಮಾತ್ರ ಈ ಹಳ್ಳಗಳನ್ನು ಗುರುತಿಸ ಬಹುದು. ಮೀನುಗಾರರ ಮಕ್ಕಳು ಆಗ ಹಿಂಡು ಕಟ್ಟಿಕೊಂಡು ಹೋಗಿ ಅವುಗಳಲ್ಲಿನ ಮರಿ ಮೀನುಗಳನ್ನು ಹಿಡಿಯುತ್ತಾರೆ. ಅವರು ತಮ್ಮ ತಲೆಯಲ್ಲಿನ ಒಂದು ಅಡಿಗಿಂತ ಉದ್ದವಾದ ಕೂದಲೊಂದನ್ನು ಕಿತ್ತು ಅದರ ತುದಿಗೆ ಮೀನಿನ ಸಣ್ಣ ತುಂಡನ್ನೂ, ಇನ್ನೊಂದು ತುದಿಗೆ 1–2 ಅಂಗುಲ ಉದ್ದವಾದ ತೆಳುವಾದ ಬಿದುರಿನ ಕಡ್ಡಿಯನ್ನೂ ಕಟ್ಟಿ, ಹಳ್ಳಗಳಲ್ಲಿರುವ ನೀರಿನಲ್ಲಿ ಬಿಡುತ್ತಾರೆ. ಅದು ನೀರ ಮೇಲೆ ತೇಲುತ್ತ ಹೋಗು ತ್ತದೆ. ಆಗ ನೀರಿನಲ್ಲಿರುವ ಮರಿ ಮೀನುಗಳು ಬಂದು ಈ ಮಾಂಸದ ತುಂಡನ್ನು ನುಂಗಿ ಓಡತೊಡಗುತ್ತವೆ. ಅವು ಹಾಗೆ ಓಡುವಾಗ ಕೂದಲಿಗೆ ಕಟ್ಟಿರುವ ಬಿದುರು ಕಡ್ಡಿಯು ಕೂಡ ಅವುಗಳ ಜೊತೆಗೆ ನೀರ ಮೇಲೆ ಸರಿಯಲನುವಾಗುತ್ತದೆ. ಕಡ್ಡಿಯ ಸಾಗುವಿಕೆಯನ್ನೇ ನೋಡುತ್ತ ನಿಂತ ಹುಡುಗರು ಆ ಕಡ್ಡಿಯ ಹತ್ತಿರಕ್ಕೆ ಓಡಿಹೋಗಿ ಅದನ್ನು ಮೇಲಕ್ಕೆತ್ತುತ್ತಾರೆ. ಮಾಂಸದ ತುಂಡು, ಮರಿಮೀನಿನ ಗಂಟಲನಾಳದೊಳಗೆ ಹೋಗಿರುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೆ ಆ ಮರಿಮೀನು ಸುಲಭವಾಗಿ ಸಿಕ್ಕಿಬೀಳುತ್ತದೆ. ಈ ರೀತಿ ಮೀನುಗಾರರ ಮಕ್ಕಳು ಮೀನು ಹಿಡಿಯುವ ಮೋಜಿನ ಆಟ ಸಮುದ್ರ ತೀರದಲ್ಲಿ ತೀರ ಸಾಮಾನ್ಯ.


2. ಬಲೆಗಳು

ಬಲೆಗಳು ಮೀನುಗಳನ್ನು ಹಿಡಿಯಲು ಉಪಯೋಗಿಸುವ ಇನ್ನೊಂದು ಬಗೆಯ ಸಾಧನಗಳು. ಬಲೆಗಳಲ್ಲಿ ಅನೇಕ ಬಗೆಗಳಿವೆ. ಸಮುದ್ರದಲ್ಲಿರುವ ನಾನಾ ಜಾತಿಯ ಮೀನುಗಳನ್ನು ಹಿಡಿಯಲು ಬೇರೆ ಬೇರೆ ತೆರನಾದ ಬಲೆಗಳನ್ನು ಉಪಯೋಗಿಸ ಬೇಕಾಗುತ್ತದೆ. ಒಂದೇ ವಿಧದ ಬಲೆಯನ್ನು ಉಪಯೋಗಿಸಿ ಎಲ್ಲ ಬಗೆಯ ಮೀನು ಗಳನ್ನು ಹಿಡಿಯಲು ಸಾಧ್ಯವಿಲ್ಲ. ಮೀನುಗಾರರು ವಿವಿಧ ಮೀನುಗಳ ಸ್ವಭಾವ ಅರಿತು. ಅವುಗಳನ್ನು ಹಿಡಿಯಲು ಹಲವಾರು ತೆರನಾದ ಬಲೆಗಳನ್ನು ಬಳಸುತ್ತಾರೆ.

(i) **ಜಗ್ಗುವ ಬಲೆ:** ಕೆಲ ಸಂದರ್ಭಗಳಲ್ಲಿ ಮೀನುಗಾರನು ಒಬ್ಬನೇ ಬಲೆ ಯನ್ನು ಹಾಕಿ ಮೀನುಗಳನ್ನು ಹಿಡಿಯುತ್ತಾನೆ. ಇನ್ನು ಕೆಲವು ವೇಳೆ 10–15 ಜನರು ಸೇರಿ ಬಲೆಗಳನ್ನು ಹಾಕಿ, ಜಗ್ಗಿ, ಮೀನುಗಳನ್ನು ಹಿಡಿಯುತ್ತಾರೆ. ಜಗ್ಗಿ ಎಳೆಯುವ ಬಲೆಗಳಿಗೆ ಜಗ್ಗುವಬಲೆಗಳೆಂದೆನ್ನುತ್ತಾರೆ. ಇಂತಹ ಬಲೆಗಳಿಗೆ ಜನ ಹೆಚ್ಚಿದ್ದಷ್ಟೂ ಒಳ್ಳೆಯದು. ಇದರಿಂದ ಬಲೆಗಳನ್ನು ಜಗ್ಗಲು ಸುಲಭವಾಗುವುದಲ್ಲದೆ, ಹೆಚ್ಚಿನ ಪ್ರಮಾಣದಲ್ಲಿ ಮೀನುಗಳನ್ನು ಹಿಡಿಯಲು ಸಾಧ್ಯವಾಗುತ್ತದೆ. ಈ ಬಲೆಗಳಲ್ಲಿ ಗೋರುವ ಬಲೆ, ರಂಪಣಿ ಬಲೆ, ಬಾಕ್ಸಿ ಬಲೆ, ಘೋಳ ಬಲೆ ಮತ್ತು ಟ್ರಾಲ್ ಬಲೆಗಳು ಸಮಾವೇಶವಾಗುತ್ತವೆ. ಮೀನುಗಳಿಗಾಗಿ ಕಾಯುತ್ತ ನಿಲ್ಲದೆ, ಮೀನುಗಳಿದ್ದತ್ತ ಈ

ಬಲೆಗಳನ್ನು ಜಗ್ಗುತ್ತ ಹೋಗಬೇಕಾಗುತ್ತದೆ. ಈ ಬಲೆಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಮೀನುಗಳು ಹಿಡಿಯುವುದು ಸಾಧ್ಯ.

(ಅ) **ಗೋರುವ ಬಲೆ:** ಗೋರುವ ಬಲೆಗಳಿಂದ ಸಮುದ್ರ ಅಥವಾ ನದಿಯ ದಂಡೆಯಲ್ಲಿರುವ ಮೀನುಗಳನ್ನಲ್ಲದೆ ಕೆರೆ, ಕೊಳ, ಇಲ್ಲವೆ ಕಡಮೆ ಆಳದ ಜಲಾಶಯ ಗಳಲ್ಲಿನ ಮೀನುಗಳನ್ನು ಹಿಡಿಯಬಹುದು. ಈ ಬಲೆಗಳಲ್ಲಿ ಸಣ್ಣ ಕಣ್ಣುಗಳ ಗೋರುವಬಲೆ (ಗಾಬೆ ಬಲೆ, ಮರಿ ಶೆಟ್ಲೆ ಬಲೆ ಅಥವಾ ದೊಡ್ಡ ಕಣ್ಣುಗಳ ಗೋರುವ ಬಲೆ (ಏಳ ಬಲೆ) ಎಂಬ ಎರಡು ತೆರನಾದ ಬಲೆಗಳಿವೆ. ಇವುಗಳೆಲ್ಲದರ ಮಾದರಿ ಒಂದೇ ಬಗೆಯಾಗಿರುತ್ತದೆ. ಆದರೆ ಕಣ್ಣುಗಳಲ್ಲಿ ಮಾತ್ರ ವ್ಯತ್ಯಾಸವಿರುತ್ತದೆ. ಬಲೆಹಾಕುವುದು ಹಾಗೂ ಜಗ್ಗುವುದು



ಚಿತ್ರ 5: ಗೋರುವ ಬಲೆಯ ಒಂದು ರೇಖಾಚಿತ್ರ

ಒಂದೇ ವಿಧಾನ ವಾಗಿರುತ್ತದೆ. ಬಲೆಗಳ ಕಣ್ಣುಗಳ ಪ್ರಮಾಣಕ್ಕನುಸಾರವಾಗಿ ಅವುಗಳಲ್ಲಿ ಸಣ್ಣ, ದೊಡ್ಡ ಮೀನುಗಳು ಬೀಳುತ್ತವೆ. ಇವುಗಳನ್ನು ಸಮುದ್ರ ಇಲ್ಲವೆ, ನದಿಗಳ ತೀರ ದಲ್ಲಿಯೇ ಹಾಕುವುದರಿಂದ ದಂಡೆಯುದ್ದಕ್ಕೂ ನೀರಿನಲ್ಲಿ ವಾಸಿಸುವ ಪಡಿ, ಜಾಲಿ, ತೊರ್ಕೆ, ನೋಗ್ಲಿ, ಬೈಗೆ, ಬೆಳುಂಜೆ, ದಣಸೆ ಮುಂತಾದ ಮೀನುಗಳನ್ನು ಹಿಡಿಯಬಹುದು. ಅಕ್ಟೋಬರ್ ಹಾಗೂ ನವಂಬರ್ ತಿಂಗಳಲ್ಲಿ ಸಮುದ್ರದ ತೀರದಲ್ಲಿ ಕಂಡಲಿ ಮತ್ತು ತೋರಿ (ಭೂತಯಿ) ಮೀನುಗಳು ಗುಂಪುಗುಂಪಾಗಿ ಬರುತ್ತವೆ. ಈ ಎರಡು ತಿಂಗಳು ಗಳು ಮೀನುಗಳನ್ನು ಹಿಡಿಯುವವರಿಗೆ ಸುಗ್ಗಿಯ ಕಾಲ. ಈ ಕಾಲದಲ್ಲಿ ಈ ಬಲೆ ಬೀಸಿ, ದೋಣಿಗಟ್ಟಲೆ ಮೀನುಗಳನ್ನು ಹಿಡಿಯುತ್ತಾರೆ. ಮಳೆಗಾಲದಲ್ಲಿ ಸಮುದ್ರದಲ್ಲಿ ಬಿರುಗಾಳಿ ತಲೆದೋರಿ ಸಮುದ್ರದ ನೀರೆಲ್ಲ ಕದಡಿ ಅಲ್ಲಿ ವಾಸಿಸುವ ಮೀನುಗಳೆಲ್ಲ ಕೊಳ ಹಾಗೂ ಹಳ್ಳಗಳಿಗೆ ಬಂದು ಸೇರುವುದರಿಂದಲೂ ಮಳೆಯ ನೀರು ಸಮುದ್ರದ ನೀರಿನೊಡನೆ ಕೂಡುವಾಗ ಕುರುಡಿ, ರಾಂವ್ಸ್ ಮುಂತಾದ ಮೀನುಗಳು ಸಮುದ್ರ ಇಲ್ಲವೆ ನದಿ ದಡಗಳ ಸಮೀಪ ಬರುವುದರಿಂದಲೂ ಆ ಕಾಲಗಳಲ್ಲಿ ಗೋರುವ ಬಲೆಗಳನ್ನು ಹಾಕಿ ಮೀನುಗಳನ್ನು ಹಿಡಿಯುತ್ತಾರೆ.

ಗೋರುವ ಬಲೆಗಳಿಂದ ಮೀನು ಹಿಡಿಯುವುದು ಒಂದು ಭಾರೀ **ಕೆಲಸವೇ.** ಎರಡೂ ಅಂಚುಗಳಲ್ಲಿ ದಂಡಿಗೆ (ದೊಣ್ಣೆ) ಕಟ್ಟಿದ ಬಲೆಯನ್ನು ಇಬ್ಬರು ಹೊತ್ತೊಯ್ದು ಸಮುದ್ರದಲ್ಲಿ ಹಾಕುತ್ತಾರೆ. ಒಂದು ಅಂಚಿನಲ್ಲಿನ ದೊಣ್ಣೆಯನ್ನು ಒಬ್ಬನು ಗಟ್ಟಿಯಾಗಿ ಹಿಡಿಯುತ್ತಾನೆ. ಇನ್ನೊಬ್ಬನು ಇನ್ನೊಂದು ಅಂಚಿನಲ್ಲಿನ ದೊಣ್ಣೆ ಹಾಗೂ ಬಲೆಯನ್ನು ತನ್ನ ಕೈತೋಳಿನಲ್ಲಿ ಹಿಡಿದು ಮೀನುಗಳ ತೆಪ್ಪೆಗಳನ್ನು ಸುತ್ತುಗಟ್ಟುವಂತೆ ಬಲೆಯನ್ನು ಹಾಕುತ್ತಾನೆ. ಈ ರೀತಿ ಬಲೆಯನ್ನು ಹಾಕಿದ ನಂತರ ಅವರಿಬ್ಬರು ಬಲೆಯನ್ನು ದಂಡೆಯತ್ತ ಜಗ್ಗುತ್ತಾರೆ.

ಗಾಬೆ (ಶೆಟ್ಲಮರಿ) ಮೀನುಗಳನ್ನು ಹಿಡಿಯುವ ಗೋರುವ ಬಲೆಯು ತೀರ ಸಣ್ಣದಾದ ಕಣ್ಣು (0.3 ಅಂಗುಲ)ಗಳಿಂದ ಕೂಡಿರುತ್ತದೆ. ಇದಕ್ಕೆ ಬೆಂಡು ಮತ್ತು ಸೀಸವನ್ನು ಕಟ್ಟುವುದಿಲ್ಲ. ಇದು ಸುಮಾರು 6 ರಿಂದ 10 ಅಡಿ ಉದ್ದ, ಸುಮಾರು 4 ರಿಂದ 5 ಅಡಿ ಅಗಲ ಇರುತ್ತದೆ. ಇದರ ಸಹಾಯದಿಂದ ಶೆಟ್ಲೆಮರಿಗಳನ್ನು ಹಿಡಿಯುತ್ತಾರೆ. ನೀರನ್ನು ಸೋಸಿ ಮೀನುಗಳನ್ನಷ್ಟೇ ಹಿಡಿಯುವುದರಿಂದ ಇದಕ್ಕೆ ಗೋರುವ ಬಲೆಯೆಂದು ಕರೆಯುತ್ತಾರೆ. ವಾಸ್ತವವಾಗಿ ಇದು ಎಳೆಯುವ ಬಲೆ. ಈ ಬಲೆಯಲ್ಲಿನ ಪ್ರತಿಕಣ್ಣು 0.3–0.6 ಅಂಗುಲ ಚೌರಸಾಕಾರವುಳ್ಳದ್ದಾಗಿರುತ್ತದೆ. ಒಂದೊಂದು ತುಂಡು ಇಂಥ 300 ಕಣ್ಣುಗಳನ್ನು ಒಳಗೊಂಡಿರುತ್ತದೆ. 15–20 ತುಂಡುಗಳು ಸೇರಿ ಒಂದು ಬಲೆಯಾಗುತ್ತದೆ. ಪ್ರತಿಯೊಂದು ತುಂಡು ಬಲೆಯು ನೀರಿನಲ್ಲಿ ಸಮತೋಲನದಲ್ಲಿ ನಿಲ್ಲುವಂತೆ, ಅದಕ್ಕೆ ಮೇಲುಗಡೆ ಬೆಂಡುಗಳನ್ನು, ಕೆಳಗಡೆ ಸೀಸದ ಮಣಿಗಳನ್ನು ಸೂತ್ರದ ಪ್ರಕಾರ ಹೊಂದಿಸಿರುತ್ತಾರೆ. ಗೋರುವ ಬಲೆಯು ಎರಡೂ ತುದಿಗಳಲ್ಲಿ 6 ರಿಂದ 7 ಅಡಿ ಉದ್ದವಾದ ದಂಡಿಗೆ ಇಲ್ಲವೆ ಲಾಠಿ ಕಟ್ಟಿರುತ್ತಾರೆ.

(ಆ) **ರಂಪಣಿ ಬಲೆ (ಪಾಯವಾಡ):** ಈ ಬಲೆಯಲ್ಲಿ ಸಣ್ಣ ರಂಪಣಿ (ಕೈರಂಪಣಿ ಅಥವಾ ಪಂಡಿರಂಪಣಿ), ದೊಡ್ಡ ರಂಪಣಿ ಎಂದು ಎರಡು ರೀತಿಗಳಿವೆ. ಸಣ್ಣ ರಂಪಣಿಯನ್ನು ವರ್ಷಾದ್ಯಂತ ಉಪಯೋಗಿಸುತ್ತಾರೆ. ಆದರೆ ದೊಡ್ಡ ರಂಪಣಿಯನ್ನು ಹಂಗಾಮಿನ ವೇಳೆಯಲ್ಲಿ ಮಾತ್ರ ಉಪಯೋಗಿಸುತ್ತಾರೆ. ಒಂದು ತುಂಡು ರಂಪಣಿ ಬಲೆಯು 20 ಅಡಿ ಉದ್ದ 9 ರಿಂದ 15 ಅಡಿ ಅಗಲ. ಇದರಲ್ಲಿ 300 ಸಣ್ಣ ಸಣ್ಣ ಕಣ್ಣುಗಳು ಇರುತ್ತವೆ. ಇಂಥ ನಲ್ವತ್ತರಿಂದ ಐವತ್ತು ತುಂಡು ಬಲೆಗಳನ್ನು ಒಂದಕ್ಕೊಂದು ಕೂಡಿಸಿ ದೊಡ್ಡ ರಂಪಣಿಯನ್ನು ತಯಾರಿಸುತ್ತಾರೆ.

ಗೋರುವ ಬಲೆಗಳಂತೆಯೇ ಇದಕ್ಕೂ ಬೆಂಡು ಮತ್ತು ಭಾರವಾದ ವಸ್ತುಗಳನ್ನು ಕಟ್ಟುತ್ತಾರೆ. ಈ ಬಲೆಯು ಆಸರೆಯ ಹಗ್ಗ (ಆಧಾರದ ಹಗ್ಗ) ಗಡುತರವಾಗಿರಬೇಕು. ಈ ಬಲೆಯ ಉದ್ದ ಸುಮಾರು 150 ರಿಂದ 200 ಗಜ, ಅಗಲ 12 ರಿಂದ 15 ಅಡಿಗಳು.

ಈ ಬಲೆಗಳಿಂದ ಬಾಂಗಡೆ, ತೋರಿ. ಬಣಸು, ಹೆಸಡಿ, ವೈಂತಲಿ, ಪಚಕೆ, ಗುರ್ಕುರ್, ಬಾಲಚಕಿ ಮೊದಲಾದ ಸಣ್ಣದೊಡ್ಡ ಮೀನುಗಳನ್ನು ಹಿಡಿಯುತ್ತಾರೆ. ಈ


ಬಲೆಗಳಿಂದ ಲಕ್ಷಗಟ್ಟಲೆ ಮೀನುಗಳನ್ನು ಹಿಡಿಯಬಹುದು. ಸಣ್ಣ, ದೊಡ್ಡ ಮೀನುಗಳ ಋತುಮಾನಕ್ಕನುಸಾರವಾಗಿ ಸಣ್ಣ ರಂಪಣಿ ಇಲ್ಲವೆ, ದೊಡ್ಡ ರಂಪಣಿಗಳನ್ನು ಉಪ ಯೋಗಿಸುತ್ತಾರೆ.

ಗೋರುವ ಬಲೆಯಂತೆ ರಂಪಣಿ ಬಲೆಗೆ ಎರಡು ಬದಿಗಳಿಗೆ ದಂಡವನ್ನು ಕಟ್ಟಿ ಅದಕ್ಕೆ ಪಗ್ಗವನ್ನು ನೇತುಬಿಟ್ಟಿರುತ್ತಾರೆ. ಇದರಿಂದ ಆಳ ನೀರಿನಲ್ಲಿ ಕೂಡ ಬಲೆಗಳನ್ನು ಹಾಕಲು ಬರುತ್ತದೆ. ಈ ಬಲೆಗಳನ್ನು ದೋಣಿಯಲ್ಲಿ ಹಾಕಿ ಸಮುದ್ರದಲ್ಲಿ ದಂಡೆಯಿಂದ ದೂರಸಾಗಿ ನೀರಿನಲ್ಲಿ ಮೀನುಗಳ ತೆಪ್ಪೆಗಳನ್ನು ನೋಡಿ, ಇಲ್ಲವೆ ಮೀನುಗಳು ಇರುವ ಸ್ಥಳವನ್ನು ಹುಡುಕಿ, ಸುತ್ತುಗಟ್ಟಿ ಬಲೆ ಹಾಕುತ್ತಾರೆ. ಬಲೆಯ ಒಂದು ತುದಿಯಲ್ಲಿಯ ನೇತಾಡುವ ಸೆರಗನ್ನು ದಂಡಿಯ ಮೇಲಿನ ಗೂಟಕ್ಕೆ ಕೊಟ್ಟಿರುತ್ತಾರೆ. ಸಮುದ್ರದಲ್ಲಿ ಬಲೆಯನ್ನು ಹಾಕಿದ ಕೆಲಸಮಯದ ನಂತರ ದಂಡೆಯ ಮೇಲಿನಿಂದ ನೇತಾಡುವ ಸೆರಗನ್ನು ಜಗ್ಗುತ್ತಾರೆ. ಒಂದೊಂದು ರಂಪಣಿಯಲ್ಲೂ ಮೀನು ಹಿಡಿಯುವ ಕಾರ್ಯಕ್ಕೆ ಹತ್ತುಹನ್ನೆರಡು ಮಂದಿ ಬೇಕಾಗುತ್ತಾರೆ. ಈ ಬಲೆಯಿಂದ ಸಮುದ್ರ ತೀರಕ್ಕೆ ಬರುವ, ಇಲ್ಲವೆ ವಾಸಿಸುವ ಮೀನುಗಳನ್ನು ಮಾತ್ರ ಹಿಡಿಯಲು ಸಾಧ್ಯ. ಮಳೆಗಾಲದಲ್ಲಿ ಮೀನುಗಾರರು ಕೈರಂಪಣಿ ಬಲೆಯಿಂದಲೇ ಮೀನುಗಳನ್ನು ಹಿಡಿಯುತ್ತಾರೆ.

ದೊಡ್ಡ ರಂಪಣಿ ಬಲೆ ಕೂಡ ಗೋರುವ ಬಲೆ, ಕೈರಂಪಣಿ ಬಲೆಗಳಂತೆಯೇ ಇರುತ್ತದೆ. ಇದರಲ್ಲಿನ ಚಿಕ್ಕ ಚಿಕ್ಕ ಬಲೆಗಳ ಸಂಖ್ಯೆ, ಉದ್ದಳತೆ, ಬಲೆಗಳ ಕಣ್ಣುಗಳ ಪ್ರಮಾಣ ಭಿನ್ನವಾಗಿರುತ್ತದೆ. ಇದೊಂದು ದೊಡ್ಡ ಬಲೆ. ಇದು ಅನೇಕ ಸಂದರ್ಭ ಗಳಲ್ಲಿ ಸುಮಾರು $1-1\frac{1}{2}$ ಮೈಲುಗಳಷ್ಟು ಉದ್ದವಿರುತ್ತದೆ. ಇದರ ಮಧ್ಯಭಾಗದಲ್ಲಿನ ಕಣ್ಣುಗಳು $\frac{1}{2}$ ಚದರ ಅಂಗುಲದಷ್ಟು ಸಣ್ಣವಿರುತ್ತವೆ. ಅಂಚಿನಲ್ಲಿರುವ ಕಣ್ಣುಗಳು 1 ಚದರ ಅಂಗುಲದಷ್ಟು ದೊಡ್ಡವಿರುತ್ತವೆ. ಈ ಬಲೆಯು ಮಧ್ಯಭಾಗದಲ್ಲಿ ಅಗಲ ವಾಗಿದ್ದು ಅಂಚಿನಲ್ಲಿ ಸಂಕುಚಿತವಾಗಿರುತ್ತದೆ. ಬಲೆಯ ಮೇಲ್ಭಾಗದಲ್ಲಿ ಬೆಂಡುಗಳೂ, ಕೆಳಭಾಗದಲ್ಲಿ ಭಾರಗಳೂ ಇರುತ್ತವೆ. ಇದರಿಂದ ಬಲೆ ಸಮುದ್ರ ನೀರಿನಲ್ಲಿ ಹೊಯ್ದಾಡದೆ ಸಮವಾಗಿ ನಿಲ್ಲುತ್ತದೆ.

ಸಮುದ್ರದಡದ ಒಂದು ಭಾಗದಿಂದ ಪ್ರಾರಂಭಿಸಿ ದೋಣಿಯ ಸಹಾಯದಿಂದ ಬಲೆಯನ್ನು ಒಂದು ವಿಶಾಲವಾದ ಅರ್ಧದೀರ್ಘ ವರ್ತುಲಾಕಾರವಾಗಿ ಹಾಕುತ್ತ ಸಮುದ್ರದಡದ ಇನ್ನೊಂದು ಭಾಗಕ್ಕೆ ತರುತ್ತಾರೆ. ಒಂದೊಂದು ತುದಿಯಲ್ಲಿ ಮೂವತ್ತು ನಾಲ್ವತ್ತು ಜನ ಸೇರಿ ದಂಡಕ್ಕೆ ಸೊಂಟ ಕೊಟ್ಟು ಈ ಬಲೆಯನ್ನು ಜಗ್ಗುತ್ತಾರೆ. ಈ ಪ್ರಕಾರ ಬಲೆಯನ್ನು ಉಪಯೋಗಿಸಿ ಸಮುದ್ರದ ದಡದಿಂದ 7 ರಿಂದ 8 ಫರ್ಲಾಂಗ್ ಅಂತರದಲ್ಲಿನ ಮೀನುಗಳ ಹಿಂಡುಗಳನ್ನು ಹಿಡಿಯಬಹುದು. ಇದು ಆಕಾರದಲ್ಲಿ ದೊಡ್ಡದಾಗಿರುವುದರಿಂದ ಇದರಲ್ಲಿ ಬಹಳ ಮೀನುಗಳು ಸಿಗುತ್ತವೆ. ಈ ಬಲೆಯನ್ನು ಹಂಗಾಮಿನ ವೇಳೆಯಲ್ಲಿ ಅಂದರೆ ಅಕ್ಟೋಬರ್‌ನಿಂದ ಫೆಬ್ರುವರಿ ತಿಂಗಳವರೆಗೆ ಮಾತ್ರ

ಹಾಕುತ್ತಾರೆ. ಬಂಗಡೆ. ಹೆಸಡಿ, ತೋರಿ, ಕಳಗೆ, ಈಸ್ವಣ ಮುಂತಾದ ಮೀನುಗಳು ಸಿಗುವ ಕಾಲವದು. ಎರಡು ಬದಿಯಿಂದ ಎಳೆಯುತ್ತ ದಡದ ಸಮೀಪಕ್ಕೆ ತಂದು ಈ ಬಲೆಯನ್ನು ನೀರಿನಲ್ಲಿಯೇ ಕಟ್ಟಿಹಾಕುವರು. ಬಲೆಯಲ್ಲಿ ಸಿಕ್ಕಿಬಿದ್ದ ಮೀನುಗಳನ್ನು ಸಣ್ಣ ಸಣ್ಣ ಏಂಡಿ (ಹಿಂಡಿ) ಬಲೆಗಳಿಂದ ಹಿಡಿದು ದೋಣಿಗಳಿಂದ ದಂಡೆಗೆ ತಂದು ನಂತರ ಮಾರಾಟಕ್ಕೆ ಅಥವಾ ಹದಗೊಳಿಸಲೋ ಇಲ್ಲವೆ ಖಾರೋಣಿ ಮಾಡಲೋ ಉಪಯೋಗಿಸುತ್ತಾರೆ. ಹೀಗೆ ಬಲೆಯಲ್ಲಿ ಬಿದ್ದ ಮೀನುಗಳನ್ನು ತೆಗೆದು ಹಾಕಿದ ಮೇಲೆ ಆ ಬಲೆಯನ್ನು ಮೇಲಕ್ಕೆ ಜಗ್ಗಿ ದಡದಲ್ಲಿ ಒಣಹಾಕುತ್ತಾರೆ. ಬಲೆ ಹರಿದಿದ್ದರೆ ಸರಿಪಡಿಸಿಕೊಂಡು ಪುನಃ ಅದನ್ನು ದೋಣಿಯಲ್ಲಿ ತುಂಬುತ್ತಾರೆ.




ಚಿತ್ರ 6: ರಂಪಣಿ ಬಲೆಯನ್ನು ಸಮುದ್ರದಲ್ಲಿ ಹಾಕುತ್ತ ನಡೆದಿರುವ ದೃಶ್ಯ

ಪೂರ್ವೇತಿಹಾಸ: ರಂಪಣಿ ಬಲೆಯನ್ನು ಕೆಲವೊಂದು ಪ್ರದೇಶದ ಕರಾವಳಿಯಲ್ಲಿ ಮಾತ್ರ ಉಪಯೋಗಿಸುತ್ತಾರೆ. ಅರವತ್ತು ವರ್ಷಗಳ ಹಿಂದೆ ಈ ಬಲೆಯನ್ನು ಗೋವದಿಂದ ತಂದು ಕಾರವಾರ ಕರಾವಳಿಯಲ್ಲಿ ಉಪಯೋಗಿಸಲು ಆರಂಭಿಸಿದರು. ಗೋವ ಪೋರ್ಚುಗೀಸರ ವಶದಲ್ಲಿದ್ದಾಗ ಚೀನಾ, ಮಲಯ, ಜಪಾನ್ ಮುಂತಾದ ಪರದೇಶಗಳಿಂದ ಬಂದ ಜನರು ಇಂತಹ ಬಲೆಗಳನ್ನು ತಂದು ಮಾರಾಟ ಮಾಡುತ್ತಿದ್ದರು. ಮುಂದೆ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳ ಇತರ ಕರಾವಳಿ ಪ್ರದೇಶ

ಗಳಲ್ಲಿಯೂ ಕ್ರಮೇಣ ಈ ಬಲೆಯಿಂದ ಮೀನು ಹಿಡಿಯುವಿಕೆ ಪ್ರಾರಂಭ ವಾಯಿತು.

'ರಂಪೋ' ಎಂಬ ಪೋರ್ಚುಗೀಸ್ ಯಾತ್ರಿಕನು ಗೋವೆಯಲ್ಲಿ ಇದನ್ನು ಪ್ರಥಮತಃ ಉಪಯೋಗಿಸಿದ್ದರಿಂದ ಇದಕ್ಕೆ 'ರಂಪೋ'ಜಾಳ ಎಂಬ ಹೆಸರು ಬಂತು. ಕ್ರಮೇಣ ಇದಕ್ಕೆ ರಂಪಣ ಜಾಲ್, ರಂಪಣಿ ಬಲೆ ಎಂದು ಕರೆಯುವ ವಾಡಿಕೆಯಾಯಿತು.

(ಇ) **ಬಾಕ್ಸಿಬಲೆ:** ಇದು ಚೀಲದ ಆಕಾರದಲ್ಲಿದ್ದು ಇದರ ಬಾಯಿಯು ವರ್ತುಲಾಕಾರವಾಗಿರುತ್ತದೆ. ಇದರ ವ್ಯಾಸ ಸುಮಾರು 10ರಿಂದ 12 ಅಡಿಗಳು. ಕೆಲವು ಸಣ್ಣ ಪ್ರಮಾಣದ ಬಲೆಗಳ ಬಾಯಿ ಸುತ್ತಳತೆ 4 ಅಡಿಗಳೂ ಉದ್ದ 4ರಿಂದ 6 ಅಡಿಗಳೂ ಇರುತ್ತದೆ. ಇದರ ಬಾಯಿಗೆ ಗಡುತರವಾದ ಕಬ್ಬಿಣದ ಸರಿಗೆ ಇರುತ್ತದೆ. ಹಗ್ಗವನ್ನು ಕಟ್ಟಲು ಅನುಕೂಲವಾಗಿರುವಂತೆ ಅದಕ್ಕೆ ನಾಲ್ಕು ಉಂಗುರ ಗಳಿರುತ್ತವೆ. ದೋಣಿಯಲ್ಲಿ ಜಲಾಶಯದ ಒಳಕ್ಕೆ ಸಾಗಿ ಈ ಬಲೆ ಉಪಯೋಗಿಸಿ ಮೀನು ಹಿಡಿಯುತ್ತಾರೆ. ನದಿಗಳಲ್ಲಿ ಈ ಬಲೆಗಳ ಉಪಯೋಗ ಹೆಚ್ಚು. ಈ ಬಲೆಯಿಂದ ಕೊಳ್ಳಶೆಟ್ಲ, ಕಾಯಿಶೆಟ್ಲ, ಬಿಳಿಶೆಟ್ಲ, ಮಡ್ಲೆ, ಕುರುಡಿ. ಸೇತುಕಾ ಮುಂತಾದ ಮೀನು ಗಳನ್ನು ಈ ಬಲೆಯಿಂದ ಹಿಡಿಯುತ್ತಾರೆ.




ಚಿತ್ರ 7: ಬಾಕ್ಸಿಬಲೆ

(ಈ) **ಟ್ರಾಲ್ ಬಲೆ:** ಇದೂ ಒಂದು ಜಗ್ಗುವ ಬಲೆಯೇ. ಈಗೀಗ ಇದರ ಬಳಕೆ ಸಾಮಾನ್ಯವಾಗಿದೆ.

(ಉ) **ಫೋಳ (ವೂರಿ) ಬಲೆ:** ಇದು ಒಂದು ರೀತಿಯ ಬೇಟೆಯ ಬಲೆ. ಅಡವಿಯೊಳಗೆ ಬೇಟೆಗಾರನು ಸುತ್ತಲೂ ಬಲೆಯನ್ನು ಹಾಕಿ ವನ್ಯಮೃಗಗಳನ್ನು ಹಿಡಿಯುವಂತೆ ಈ ಬಲೆಯನ್ನು ಸುತ್ತಲೂ ಕಟ್ಟಿ ಫೋಳ ಮೀನುಗಳನ್ನು ಹಿಡಿಯು

ತ್ತಾರೆ. ಈ ಬಲೆಯಿಂದ ಘೋಳ ಮೀನುಗಳನ್ನು ಹೆಚ್ಚಾಗಿ ಹಿಡಿಯುತ್ತಾರೆ. ಈ ಮೀನುಗಳನ್ನು ಈ ಬಲೆಗಳಿಂದಲೇ ಹಿಡಿಯಬೇಕಲ್ಲದೆ ಇನ್ನಾವ ಬಲೆಯಿಂದಲೂ ಸಾಧ್ಯವಿಲ್ಲ. ಈ ಕಾರಣದಿಂದಾಗಿ ಇದಕ್ಕೆ 'ಘೋಳ ಬಲೆ' ಎಂದು ಹೆಸರು ಬಂದಿದೆ. ದಕ್ಷಿಣ ಕನ್ನಡದಲ್ಲಿ ಇದನ್ನು 'ಮಾರಿಬಲೆ'ಯೆಂದೂ ಕರೆಯುವುದುಂಟು. ಈ ಬಲೆಯ ದಾರಗಳು ಗಡುತರ



ಚಿತ್ರ 8: ಘೋಳ ಬಲೆ


ವಾಗಿದ್ದು ಇದನ್ನು ವಿಸ್ತಾರವಾಗಿ ಹರಡಿದಾಗ ಭಯಾನಕವಾಗಿ ಕಾಣುತ್ತದೆ. ಇದರಿಂದ ಈ ಬಲೆಗೆ 'ಮಾರಿಬಲೆ'ಯೆಂದು ಅವರು ಕರೆಯುತ್ತಿರಬೇಕು. ಈ ಬಲೆಯಿಂದ ಶೇಡೆ, ತೊರ್ಕೆ ಮುಂತಾದ ಇತರ ಮೀನುಗಳನ್ನೂ ಹಿಡಿಯುತ್ತಾರೆ. ಘೋಳ ಬಲೆಯನ್ನು ಹಾಕಲು ಎರಡು ದೋಣಿಗಳು, ಹಾಗೂ ಅದಕ್ಕೆ ಪೂರಕವಾಗಿ ಜೋಡಿಸಿದ ಮತ್ತೆರಡು ದೋಣಿಗಳು ಬೇಕು. ಅಲ್ಲದೆ ಮೀನುಗಳ ತೆಪ್ಪೆಗಳನ್ನು ಶೋಧಿಸಲು ಇನ್ನೂ ಎರಡು ದೋಣಿಗಳು ಬೇಕಾಗಿರುತ್ತವೆ.

(ii) **ತೇಲಾಡುವ ಮತ್ತು ಮುಳುಗುವ ಬಲೆಗಳು:** ತೇಲಾಡುವ ಮತ್ತು ಮುಳುಗುವ ಬಲೆಗಳನ್ನು ಉಪಯೋಗಿಸುವಾಗ ಮೀನುಗಳ ಸಲುವಾಗಿ ಕಾಯುತ್ತ ನಿಲ್ಲಬೇಕಾಗುತ್ತದೆ. ಇವುಗಳನ್ನು ಸಮುದ್ರತೀರದಲ್ಲಿ ಉಪಯೋಗಿಸದೆ, ನಡುಸಮುದ್ರದಲ್ಲಿ ಉಪಯೋಗಿಸುತ್ತಾರೆ. ಇವುಗಳ ಮೇಲ್ಭಾಗಕ್ಕೆ ನೀರ ಮೇಲೆ ತೇಲಾಡಲು ಅನುಕೂಲವಾಗುವಂತೆ ಬೆಂಡು(ಕಳಿ)ಗಳನ್ನು ಕಟ್ಟುತ್ತಾರೆ. ಈ ಗುಂಪಿನ ಬಲೆಗಳಲ್ಲಿ ಬೇರೆ ಬೇರೆ ತೆರನಾದ, ಬೇರೆ ಬೇರೆ ಹೆಸರುಳ್ಳ ಬಲೆಗಳು ಇವೆ. ಈ ಬಲೆಗಳ ಕಣ್ಣುಗಳು ವಿವಿಧ ಅಳತೆಯವಿರುತ್ತವೆ. ಈ ಬಲೆಗಳನ್ನು ದೋಣಿಯ ಸಹಾಯದಿಂದ ಸಮುದ್ರದಲ್ಲಿ ಒಯ್ದು ಹಾಕಬೇಕಾಗುತ್ತದೆ. ಮೀನುಗಳನ್ನು ಹಿಡಿಯಲು ನಡು ಸಮುದ್ರಕ್ಕೆ ಬರುವ ಪೂರ್ವದಲ್ಲಿಯೇ ಬಲೆಗೆ ಬೇಕಾಗುವ ಎಲ್ಲ ಸಾಧನಗಳನ್ನು ಕಟ್ಟಿ ಸಜ್ಜುಗೊಳಿಸುತ್ತಾರೆ. ಬಲೆಯ ಒಂದು ಭಾಗಕ್ಕೆ ಹಗ್ಗವನ್ನು ಕಟ್ಟಿ ಆ ಹಗ್ಗದ ಇನ್ನೊಂದು ತುದಿಯನ್ನು ದೋಣಿಗೆ ಕಟ್ಟುತ್ತಾರೆ. ಬಲೆಯ ಮತ್ತೊಂದು ಭಾಗವು ಜೋತಾಡುತ್ತಿರುತ್ತದೆ. ಒಂದೊಂದು ಬಲೆಯು 50–60 ಗಜಗಳಷ್ಟು ಉದ್ದವಿದ್ದು, 10–12 ಅಡಿ ಅಗಲವಿರುತ್ತದೆ. ಇವುಗಳನ್ನು ಸೂರ್ಯಾಸ್ತ ಇಲ್ಲವೇ ರಾತ್ರಿಯ ಸಮಯದಲ್ಲಿ ಸಮುದ್ರದಲ್ಲಿ ಹಾಕಿ. ನಡುರಾತ್ರಿಯಲ್ಲಾಗಲೀ, ಮರುದಿನ ಮುಂಜಾನೆಯಲ್ಲಾಗಲೀ, ನೀರಿನಿಂದ ಮೇಲಕ್ಕೆತ್ತುತ್ತಾರೆ. ಈ ಬಲೆಗಳಲ್ಲಿ ಸಿಕ್ಕಿಬೀಳುವ ಮೀನುಗಳ ಗಾತ್ರವು ಬಲೆಯ ಕಣ್ಣುಗಳ ಅಳತೆಯನ್ನು ಅವಲಂಬಿಸಿರುತ್ತದೆ. ಆಶ್ವೀಜ, ಕಾರ್ತೀಕ, ಮಾರ್ಗಶಿರ ಮಾಸಗಳ ಕೃಷ್ಣಪಕ್ಷದಲ್ಲಿ ಈ ಬಲೆಯ ಸಹಾಯದಿಂದ ಹೆಚ್ಚಿನ ಪ್ರಮಾಣದಲ್ಲಿ ಮೀನುಗಳನ್ನು ಹಿಡಿಯುತ್ತಾರೆ. ಏಕೆಂದರೆ ಈ ಕಾಲದಲ್ಲಿ ಆಕಾಶವು ಶುಭ್ರವಾಗಿದ್ದು, ಅಂತರಿಕ್ಷದ ತುಂಬ ಚುಕ್ಕೆಗಳು ಜಾಲದಂತೆ ಪ್ರಕಾಶಿಸುತ್ತಿರುತ್ತವೆ. ಕಗ್ಗತ್ತಲೆಯ ಸಮಯದಲ್ಲಿ ನೀರು ರೇಡಿಯಮ್‌ನಂತೆ ಹೊಳೆಯುವುದರಿಂದ ಮೀನುಗಳ ಕಣ್ಣುಗಳು ಮಂಕಾಗಿ ಅವುಗಳಿಗೆ ಬಲೆಗಳು ಕಾಣುವುದಿಲ್ಲ. ಆಗ ನೀರಿನಲ್ಲಿ ತೇಲಾಡುತ್ತಿರುವ ಬಲೆಗಳ ಕಣ್ಣುಗಳಲ್ಲಿ ಸಿಕ್ಕಿಬೀಳುತ್ತವೆ. ಶುಕ್ಲಪಕ್ಷದ ರಾತ್ರಿಗಳಲ್ಲಿ ಚಂದ್ರನು ಪ್ರಕಾಶಿಸುತ್ತಿರುತ್ತಾನೆ. ಬೆಳದಿಂಗಳು ಎಲ್ಲೆಡೆಯಲ್ಲಿಯೂ ಹರಡಿರುವುದರಿಂದ ಆಗ ಚುಕ್ಕೆಗಳ ಪ್ರಕಾಶವು ಮಂದವಾಗಿರುವಂತೆ ತೋರಿಬರುತ್ತದೆ. ಮೀನಿನ ಕಣ್ಣು ಕುಕ್ಕುವ ಪರಿಸ್ಥಿತಿ ಆಗಿರುವುದಿಲ್ಲ. ಮೀನುಗಳಿಗೆ ಬಲೆಗಳ ಕಣ್ಣುಗಳು ಸ್ಪಷ್ಟವಾಗಿ ಕಾಣಿಸುತ್ತಿರುತ್ತವೆ. ಕೆಳಪದರದ ನೀರಿನಲ್ಲಿರುವ ಮೀನು ಮೇಲ್ಪದರದ ನೀರಿಗೆ ಆಗ ಬರುವುದೂ ಇಲ್ಲ. ಆದುದರಿಂದ ಆ ಅವಧಿಯಲ್ಲಿ ಕಡಮೆ ಪ್ರಮಾಣದಲ್ಲಿ ಮೀನುಗಳು ದೊರೆಯುತ್ತವೆ. ಹುಣ್ಣಿಮೆ ದಿವಸವಂತೂ ಅತಿಕಡಮೆ ಮೀನುಗಳು ದೊರೆಯುತ್ತವೆ. ಆದ್ದರಿಂದ ಮೀನುಗಾರರು ಆ ದಿನ ಮೀನು ಹಿಡಿಯಲು ಹೋಗುವುದೇ ಇಲ್ಲ.

ತೇಲಾಡುವ ಬಲೆಗಳಲ್ಲಿ ಬೀಡುಬಲೆ, ಕಾಂಟಲಬಲೆ, ಮಡ್ಲೆಬಲೆ, ಬಿಳಿಬಲೆ (ಪಟ್ಟೆಬಲೆ), ಬಂಗಡೆಪಟ್ಟೆಬಲೆ, ಬುಡಿಬಲೆ ಮುಂತಾದ ಪ್ರಕಾರಗಳಿವೆ.

(ಅ) **ಬೀಡುಬಲೆ:** ಮೀನುಗಾರರು ರಾತ್ರಿ, ಸಮುದ್ರದಲ್ಲಿ ಮೀನು ಹಿಡಿಯುವುದಕ್ಕಾಗಿ ಬೀಡು ಬಿಡುತ್ತಿದ್ದು, ಮೀನು ಹಿಡಿಯುವ ಕೆಲಸ ಸಂಪೂರ್ಣವಾಗಿ ಮುಗಿಯದ

ಹೊರತು ಹಿಂತಿರುಗುವುದಿಲ್ಲ. ಇಂಥ ಸಮಯಗಳಲ್ಲಿ ಈ ಬಲೆಯನ್ನು ಉಪಯೋಗಿಸುವುದರಿಂದ ಈ ಬಲೆಗೆ ಬೀಡುಬಲೆ ಎಂದು ಹೆಸರು ಬಂದಿರಬೇಕು. ಬೀಡುಬಲೆಯನ್ನು ಸಣಬಿನ ದಾರದಿಂದ ತಯಾರಿಸುತ್ತಾರೆ. ಇದರ ಕಣ್ಣುಗಳು 2 ಅಂಗುಲ ಚದುರಾಕಾರವಾಗಿರುತ್ತವೆ. ಒಂದು ಬೀಡುಬಲೆಯನ್ನು 20 ರಿಂದ 25 ತುಂಡುಬಲೆಗಳನ್ನು ಜೋಡಿಸಿ ತಯಾರಿಸುತ್ತಾರೆ. ಪ್ರತಿಯೊಂದು ತುಂಡುಬಲೆಯೂ ಸಾಧಾರಣವಾಗಿ 180–240 ಅಡಿ ಉದ್ದ ಹಾಗೂ 12–15 ಅಡಿ ಅಗಲ ಇರುತ್ತದೆ. ಈ ಬಲೆಯನ್ನು ದೋಣಿಯಲ್ಲಿ ಹೇರಿಕೊಂಡು ಹೋಗಿ ಸಮುದ್ರದಲ್ಲಿ ಹಾಕಬೇಕಾಗುತ್ತದೆ. ಬಲೆ ಹಾಕುವಾಗ ಬಲೆಯ ಒಂದು ತುದಿಗೆ ಕಟ್ಟಿದ ಹಗ್ಗವನ್ನು ದೋಣಿಗೆ ಬಿಗಿದು



ಚಿತ್ರ 9: ಬೀಡು ಬಲೆ

ಉಳಿದ ಬಲೆಯು ನೀರಿನಲ್ಲಿ ಜೋತಾಡುತ್ತಿರುವಂತೆ ಬಿಟ್ಟಿರುತ್ತಾರೆ. ಬಲೆಯನ್ನು ಹಿಂದಿನ ದಿನ ಸಾಯಂಕಾಲ ಹಾಕಿ ಮರುದಿನ ಬೆಳಿಗ್ಗೆ ಮೇಲಕ್ಕೆ ತೆಗೆಯುತ್ತಾರೆ. ಈ ಬಲೆಯನ್ನು ನವೆಂಬರ್–ಫೆಬ್ರವರಿ ಅವಧಿಯಲ್ಲಿ ಹೆಚ್ಚಾಗಿ ಉಪಯೋಗಿಸುತ್ತಾರೆ.

(ಆ) **ಕಾಂಟೆಲಿಬಲೆ:** ಈ ಬಲೆಯು ಬೀಡುಬಲೆಯಂತೆಯೇ ಇರುತ್ತದೆ. ಆದರೆ ಇದರ ತಳಕ್ಕೆ ಕಲ್ಲುಗುಂಡು ಇಲ್ಲವೆ ಸಣ್ಣ ಸಣ್ಣ ಸೀಸದ ಗುಂಡುಗಳನ್ನು ಕಟ್ಟಿರುತ್ತಾರೆ. ಇದರಿಂದಾಗಿ ಬಲೆಯು ನೀರಿನ ತಳಕ್ಕೆ ಹೋಗುತ್ತದೆ. ಈ ಬಲೆಯನ್ನು ಹಾಕಿದ ಸ್ಥಳವನ್ನು ಗುರುತಿಸುವುದಕ್ಕಾಗಿ ಉದ್ದವಾದ ದಾರದ ಒಂದು ತುದಿಗೆ ದೊಡ್ಡದೊಂದು ಬೆಂಡು ಕಟ್ಟಿ ಅದರ ಇನ್ನೊಂದು ತುದಿಯನ್ನು ಬಲೆಗೆ ಕಟ್ಟಿರುತ್ತಾರೆ. ಈ ಬೆಂಡು

ನೀರಮೇಲೆ ತೇಲುತ್ತಿರುತ್ತದೆ. ಈ ಬಲೆಯ ಕಣ್ಣುಗಳ ಅಳತೆ ಬೀಡುಬಲೆಯಂತೆಯೇ ಇರುತ್ತದೆ. ಮೀನುಗಳು ಹೆಚ್ಚಾಗಿ ಓಡಾಡುವ ಸ್ಥಳವನ್ನು ಮೀನುಗಾರರು ಅಂದಾಜಿನಿಂದಲೂ, ಅನುಭವದಿಂದಲೂ ಕಂಡುಹಿಡಿದು ಈ ಬಲೆಯನ್ನು ಹಾಕಿಬರುತ್ತಾರೆ. ಸಂಜೆ ಬಲೆಯನ್ನು ನೀರಿನಲ್ಲಿ ಹಾಕಿ ಮರುದಿನ ಮುಂಜಾವಿನಲ್ಲಿ ದೋಣಿಯನ್ನು ತೆಗೆದುಕೊಂಡು ಹೋಗಿ ಬಲೆಹಾಕಿದ್ದ ಸ್ಥಳವನ್ನು ಹುಡುಕಿ, ಬಲೆಯ ಕಣ್ಣುಗಳಲ್ಲಿ ಸಿಕ್ಕಿಬಿದ್ದ ಮೀನುಗಳನ್ನು ದೋಣಿಗಳಲ್ಲಿ ತುಂಬಿಕೊಳ್ಳುತ್ತಾರೆ. ಬಲೆಯು ತಳದ ತನಕವೂ ಹೋಗಿ ತಾಕುವುದರಿಂದ ಆಳನೀರಿನಲ್ಲಿ ಓಡಾಡುವ ಸೊರ, ಪಡಿ, ಕೊಂಬು, ಶೆಟ್ಲಿ, ತೊರ್ಕೆ, ಶೇಡೆ, ರಾಂವ್ರಸ, ಕುರುಚಿ ಮುಂತಾದ ಮೀನುಗಳು ಈ ಬಲೆಗೆ ಬೀಳುತ್ತವೆ. ಈ ಬಲೆಯನ್ನು ಮಳೆಗಾಲ ಹಾಗೂ ಚಳಿಗಾಲಗಳೆರಡೂ ಋತುಗಳಲ್ಲಿಯೂ ಉಪಯೋಗಿಸಬಹುದು.

(೯) **ಮಡ್ಲೆ ಬಲೆ**: ಈಬಲೆಯನ್ನು ಅತಿ ಜಿನುಗಾದ 40 ನಂಬರಿನ ನೂಲಿನಿಂದ ತಯಾರಿಸುತ್ತಾರೆ. ಇದು ಬಿಳಿ ಬಣ್ಣದ್ದಾಗಿರುತ್ತದೆ. ಇದಕ್ಕೆ ಮತ್ತಿಚೆಲ್ಲಿಯ ತೊಗರ(ರಸ)ನ್ನು ಹಾಕುವುದಿಲ್ಲ. ಬಲೆಯು ಬೇಗ ಹರಿಯದೆ ಹೆಚ್ಚು ತಾಳಿಕೆ ಬರುವಂತೆ ಮಾಡಲು ತೆಂಗಿನಕಾಯಿಯ ರಸಕ್ಕೆ ಗಂಜಿ ಸೇರಿಸಿ ಕುದಿಸಿದ ರಸದಲ್ಲಿ ಈ ಬಲೆಯನ್ನು ಅದ್ದಿ ಒಣಗಿಸುತ್ತಾರೆ. ಬಲೆಯ ಕಣ್ಣುಗಳು ಒಂದು ಅಂಗುಲ ಚೌಕಾಕಾರವಿದ್ದು, ಅಂತಹ 300 ಕಣ್ಣುಗಳುಳ್ಳ ಎಂಟು ತುಂಡು ಬಲೆಗಳನ್ನು ಕೂಡಿಸಿ ಒಂದು ದೊಡ್ಡ ಮಡ್ಲೆಬಲೆಯನ್ನು ತಯಾರಿಸುತ್ತಾರೆ. ಈ ಬಲೆಯು 100 ರಿಂದ 150 ಗಜಗಳಷ್ಟು ಉದ್ದವಿದ್ದು, 6 ರಿಂದ 7 ಅಡಿ ಅಗಲವಿರುತ್ತದೆ. ಬಲೆಯು ತೇಲಾಡುವ ಸಲುವಾಗಿ ಮೇಲ್ಗಡೆಗೆ ತೆಳುವಾದ 3–4 ಅಡಿ ಉದ್ದದ ಬೆಂಡು ಹಾಗೂ ತಳದಲ್ಲಿ ಬಲೆ ಲಂಬವಾಗಿ ನಿಲ್ಲಲು ಸಾಧ್ಯವಾಗುವಂತೆ ಸೀಸದ ಗುಂಡು ಕಟ್ಟಿರುತ್ತಾರೆ. ಮಡ್ಲೆ ಮೀನು ಗುಂಪುಗುಂಪಾಗಿರುವ ಸ್ಥಳವನ್ನು ಹುಡುಕಿ. ಆ ಸ್ಥಳಕ್ಕೆ ಮುತ್ತಿಗೆ ಹಾಕಿದಂತೆ ಬಲೆಯನ್ನು ಹಾಕುತ್ತಾರೆ. ನಂತರ ಗುಂಪಿನ ಸಮೀಪಕ್ಕೆ ಹೋಗಿ ಮೀನುಗಳನ್ನು ಎಬ್ಬಿಸುತ್ತಾರೆ. ಹೀಗೆ ಮಾಡಿದಾಗ ಅವು ತಮ್ಮ ಜೀವ ರಕ್ಷಣೆಗಾಗಿ ಅತ್ತಿತ್ತ ಓಡಲು ಪ್ರಾರಂಭಿಸುತ್ತವೆ. ತೀರ ಜಿನುಗು ನೂಲಿನಿಂದ ತಯಾರಿಸಲ್ಪಟ್ಟಿರುವ ಈ ಬಲೆಯು ಮೀನುಗಳ ಕಣ್ಣುಗಳಿಗೆ ಕಾಣಿಸುವುದಿಲ್ಲ. ಆಗ ಬಲೆಯ ಕಣ್ಣುಗಳಲ್ಲಿ ಅವು ಸಿಕ್ಕಿ ಚಡಪಡಿಸುತ್ತವೆ. ಕೆಲವು, ಬಲೆಯಿಂದ ಜಿಗಿದು ಪಾರಾಗಿ ಹೋಗಲೂ ಸಾಧ್ಯವಿದೆ. ಈ ಮೀನುಗಳನ್ನು ಹಿಡಿಯುವುದು ಬಹಳ ಕಷ್ಟದ ಕೆಲಸ. ಇನ್ನಾವ ಬಲೆಯನ್ನು ಉಪಯೋಗಿಸಿದರೂ ಈ ಮೀನುಗಳು ದೊರೆಯುವುದು ಅಸಾಧ್ಯ. ಈ ಬಲೆಯ ಸಹಾಯದಿಂದ ಸಮುದ್ರ ಇಲ್ಲವೆ ನದಿಯ ದಂಡೆಯ ಸಮೀಪಕ್ಕೆ ಬರುವ ಮಡ್ಲೆ ಮೀನುಗಳನ್ನು ಮಾತ್ರ ಹಿಡಿಯಲು ಸಾಧ್ಯ. ಚಳಿಗಾಲದಲ್ಲಿ ಮಡ್ಲೆ ಮೀನುಗಳು ದಂಡೆಯ ಸಮೀಪಕ್ಕೆ ಹೆಚ್ಚಾಗಿ ಬರುವುದರಿಂದ, ಆಗ ಕಡಲಿನಲ್ಲಿ ಮೀನು ಹಿಡಿಯಲು ಇದನ್ನು ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಆಗ ಮೂಡಣ ಗಾಳಿಯು ಬೀಸುವುದರಿಂದ ಸಮುದ್ರವು ಸ್ವಲ್ಪ ಮಂದವಾಗಿರುತ್ತದೆ. ಆದುದರಿಂದ ಮೀನುಗಳು ಸಮುದ್ರ ದಂಡೆಯ ಸಮೀಪದ

ಕೊಳ್ಳಗಳಲ್ಲಿಯೂ ಬಂದು ವಾಸಿಸುತ್ತವೆ. ಅಂಥ ಕೊಳ್ಳಗಳಲ್ಲಿಯ ಮೀನುಗಳನ್ನು ಹಿಡಿಯಲೂ ಈ ಬಲೆಯನ್ನು ಉಪಯೋಗಿಸುವರು.

ಮಳೆಗಾಲದಲ್ಲಿ ಸಮುದ್ರದಲ್ಲಿ ಬಿರುಗಾಳಿ ಎದ್ದು ನೀರು ಕದಡಿರುತ್ತದೆ. ಆಗ ಮೀನುಗಳು ಶಾಂತವಾದ ನೀರನ್ನರಸುತ್ತಾ ನದಿಗಳಿಗೆ ಬಂದು ಅಲ್ಲಿ ವಾಸಿಸುತ್ತವೆ. ಈ ಸಮಯದಲ್ಲಿ ಮಡ್ಲೆ ಬಲೆಯುನ್ನುಪಯೋಗಿಸಿ ನದಿಗಳಲ್ಲಿ ಮೀನು ಹಿಡಿಯಲಾಗುತ್ತದೆ.

(ಈ) **ಬಿಳಿ (ಬಂಗಡೆ) ಬಲೆ:** ಈ ಬಲೆಯನ್ನು ಹತ್ತಿಯ ನೂಲಿನಿಂದ ಹೆಣೆದು ತೆಂಗಿನ ರಸದಲ್ಲಿ ಹಾಕಿ ಹದಗೊಳಿಸುತ್ತಾರೆ. ಬಲೆಯು ಬೆಳ್ಳಗೆ ಕಾಣುವುದರಿಂದ ಇದನ್ನು 'ಬಿಳಿಬಲೆ' ಎನ್ನುತ್ತಾರೆ. ಈ ಬಲೆಯನ್ನು ವಿಶೇಷವಾಗಿ ಬಂಗಡೆ ಮೀನುಗಳನ್ನು ಹಿಡಿಯಲು ಉಪಯೋಗಿಸುವುದರಿಂದ ಇದಕ್ಕೆ 'ಬಂಗಡೆ ಬಲೆ' ಎಂದೂ ಹೆಸರುಂಟು. ಬಿಳಿಬಲೆಯನ್ನು 20×6 ನಂಬರಿನ ನೂಲಿನಿಂದ ತಯಾರಿಸುತ್ತಾರೆ. ಇದರ ಕಣ್ಣುಗಳು ಒಂದು ಅಂಗುಲ ಚದರಾಕಾರದವಿರುತ್ತವೆ. ಈ ಬಲೆಯನ್ನು 300 ಕಣ್ಣುಗಳುಳ್ಳ ನಲವತ್ತು ಇಲ್ಲವೆ ಐವತ್ತು ತುಂಡು ಬಲೆಗಳನ್ನು ಜೋಡಿಸಿ ತಯಾರಿಸುತ್ತಾರೆ. ಇದು 400 ರಿಂದ 500 ಗಜ ಉದ್ದ, 35 ರಿಂದ 40 ಅಡಿ ಅಗಲ ಇರುತ್ತದೆ. ನೀರಿನಲ್ಲಿ ಈ ಬಲೆಯು ಮುಳುಗುವಂತಾಗಲು ತಳಕ್ಕೆ ಭಾರವಾದ ಕಲ್ಲು ಗುಂಡುಗಳನ್ನೂ, ತೇಲಾಡುವುದಕ್ಕೋಸ್ಕರ ಮೇಲ್ಭಾಗದಲ್ಲಿ 6–8 ಅಡಿ ಉದ್ದವಾದ ಬೆಂಡುಗಳನ್ನೂ ಕಟ್ಟಿರುತ್ತಾರೆ.

ಸಮುದ್ರದಲ್ಲಿ ಸಂಚರಿಸುವ ಬಂಗಡೆ, ಮಾಂಜ, ಶೆಟ್ಲೆ, ಹೆಸಡಿ ಮೀನುಗಳ ಗುಂಪನ್ನು ಕಂಡುಹಿಡಿದು ಅವುಗಳನ್ನು ಸುತ್ತುಗಟ್ಟಿ ದೋಣಿಯಲ್ಲಿ ಸಾಗಿ, ಬಲೆಯನ್ನು ಬೀಸುತ್ತಾರೆ. ಮೀನುಗಳ ಗುಂಪು ಬಲೆಯ ಮಧ್ಯಕ್ಕೆ ಬಂದಾಗ ದೋಣಿಯನ್ನು ಅವುಗಳ ಸಮೀಪಕ್ಕೆ ತಂದು 'ಕಟ್‌ಕಟ್' ಎಂದು ಸಪ್ಪಳವಾಗುವಂತೆ ದೋಣಿಗೆ ದೊಣ್ಣೆ (ಹುಟ್ಟಿನ ಅನಿಕೆ)ಯಿಂದ ಬಡಿಯುತ್ತಾರೆ. ಈ ಸಪ್ಪಳವನ್ನಾಲಿಸಿದ ಮೀನುಗಳು ಚದುರಿ ಅತ್ತಿತ್ತ ಓಡಾಡತೊಡಗುತ್ತವೆ. ಸುತ್ತಲೂ ಬಲೆ ಇರುವುದರಿಂದ ಬಲೆಯ ಕಣ್ಣುಗಳಿಂದ ನುಸುಳಿ ಹೊರಕ್ಕೆ ಹೋಗಲು ಪ್ರಯತ್ನಿಸುವಾಗ ದೊಡ್ಡ ಮೀನುಗಳ ತಲೆ ಸಿಕ್ಕಿಬೀಳುವುವು. ನಂತರ ಮೀನುಗಾರರು ಬಲೆಯನ್ನು ಮೇಲಕ್ಕೆತ್ತಿ ದೋಣಿಯಲ್ಲಿ ಹಾಕಿಕೊಳ್ಳುತ್ತಾರೆ. ಈ ಬಲೆಯಲ್ಲಿ ಒಮ್ಮೊಮ್ಮೆ ಒಂದು ಇಲ್ಲವೆ ಎರಡು ದೋಣಿ ತುಂಬುವಷ್ಟು ಮೀನು ಬೀಳುತ್ತವೆ. ಈ ಬಲೆಗಳಿಂದ ಹೆಚ್ಚಾಗಿ ಬಂಗಡೆ ಮೀನು ಹಿಡಿಯುತ್ತಾರೆ. ಈ ಬಲೆಯಿಂದ ಮೀನು ಹಿಡಿಯುವಾಗ ಜಗ್ಗುವ ಬಲೆಗಳಂತೆ, ಇದನ್ನು ಜಗ್ಗಬೇಕಾದ ಆವಶ್ಯಕತೆ ಇಲ್ಲದ್ದರಿಂದ ಇದನ್ನು ಬೇಕಾದ ಸ್ಥಳದಲ್ಲಿ ಅಂದರೆ ಆಳವಾದ ನೀರಿನಲ್ಲಾಗಲಿ, ಕೆಸರು ಹಾಗೂ ಬಂಡೆಗಲ್ಲು ಇರುವ ಸ್ಥಳಗಳಲ್ಲಾಗಲಿ ಉಪಯೋಗಿಸಬಹುದು. ರಂಪಣಿಯನ್ನು ಬಿಡಲು ಯೋಗ್ಯವಲ್ಲದ ಸಮುದ್ರದಡದಲ್ಲಿ ಬಂಗಡೆ ಮೀನುಗಳನ್ನು ಹಿಡಿಯಲು ಈ ಬಲೆಯನ್ನು ಉಪಯೋಗಿಸುತ್ತಾರೆ.

(ಉ) **ಬಂಗಡೆ ಪಟ್ಟೆಬಲೆ:** ಈ ಬಲೆಯ ಆಕಾರ, ರಚನಾಪದ್ಧತಿ ಬಿಳಿಬಲೆಯಂತೆಯೇ ಇರುತ್ತವೆ. ಆದರೆ ಈ ಬಲೆಯನ್ನು ಹತ್ತಿಯ ನೂಲಿಗೆ ಬದಲಾಗಿ ಸಣಬಿನ ನೂಲಿನಿಂದ ತಯಾರಿಸುತ್ತಾರೆ. ಅಲ್ಲದೆ, ಈ ಬಲೆಗೆ ಮತ್ತಿಚೆಲ್ಲಿಯ ತೊಗರನ್ನು ಹಾಕುತ್ತಾರೆ. ಇದರಿಂದಾಗಿ ಈ ಬಲೆಯು ಕಪ್ಪಾಗಿ ಕಾಣಿಸುತ್ತದೆ ಮತ್ತು ನೂಲು ಬಿರುಸಾಗಿರುತ್ತದೆ. ಹಿಂದಿನ ಕಾಲದಲ್ಲಿ ಮೀನುಗಾರರು ಈ ಬಲೆಯಿಂದಲೇ ಬಂಗಡೆ ಮೀನುಗಳನ್ನು ಹಿಡಿಯುತ್ತಿದ್ದುದರಿಂದ ಇದಕ್ಕೆ ಬಂಗಡೆ ಪಟ್ಟೆಬಲೆ ಎಂದು ಹೆಸರು ಬಂದಿದೆ.


(ಊ) **ಬುಡಿಬಲೆ:** ದೋಣಿಯಲ್ಲಿ ತುಂಬಿಕೊಂಡು ಹೋಗಿ ಆಳವಾದ ಸಮುದ್ರ ನೀರಿನಲ್ಲಿ ಹಾಕಿ ದೊಡ್ಡ ದೊಡ್ಡ ಸೊರ, ಕಿಂಚಕಿ (ಗರಗಸ), ಹೊಳ, ಘೋಳ ಕೊರ್ಮ ಮುಂತಾದ ಬಲಶಾಲಿ ಮೀನುಗಳನ್ನು ಹಿಡಿಯುವ ಬಲೆಇದು. ಬೆಳಗ್ಗೆ 7 ಘಂಟೆಯ ಸುಮಾರಿಗೆ ಮೀನುಗಾರರು ಮೂಡಣ ಗಾಳಿಯ ಕೂಡ ತಮ್ಮ ದೋಣಿಯನ್ನು ನಡೆಸುತ್ತ ಸಮುದ್ರ ದಂಡೆಯಿಂದ 8–10 ಮೈಲು ದೂರ, ಆಳದ ಸಮುದ್ರಕ್ಕೆ ಹೋಗಿ, ಮೀನುಗಳು ಅತಿಹೆಚ್ಚಾಗಿ ಓಡಾಡುವ ಸ್ಥಳವನ್ನು ಗುರುತಿಸಿ ಅಲ್ಲಿ ಬುಡಿಬಲೆಯನ್ನು ಹಾಕುತ್ತಾರೆ. ಬಲೆಹಾಕಿದ ಜಾಗದಲ್ಲಿ ಗುರುತಿನ ಸಲುವಾಗಿ ನಿಶಾನೆಗಳನ್ನು ತೇಲಾಡುವಂತೆ ಬಿಟ್ಟಿರುತ್ತಾರೆ. ಈ ಬಲೆ ಸಂಜೆಯ ತನಕ ಅಲ್ಲಿಯೇ ಇರುತ್ತದೆ. ಸಾಯಂಕಾಲ ಬಲೆಯನ್ನು ಮೇಲೆ ಎತ್ತಿ, ದೋಣಿಯಲ್ಲಿ ಹಾಕಿಕೊಂಡು ಸಂಜೆಯ ಪಡುವಣ ಗಾಳಿಯು ಬೀಸುವಾಗ ಹಿಂದಿರುಗುತ್ತಾರೆ. ಈ ಬಲೆಯಲ್ಲಿ 8 ರಿಂದ 15 ಅಡಿ ಉದ್ದದ ಮೀನುಗಳೂ ಸಹ ಒಮ್ಮೊಮ್ಮೆ ದೊರೆಯುವುವು.

ಬುಡಿಬಲೆಯನ್ನು ಸಣಬಿನ ನಾರಿನ ಗಡುತರ ದಾರದಿಂದ ತಯಾರಿಸುತ್ತಾರೆ. ಇದರ ಕಣ್ಣುಗಳು 9 ರಿಂದ 10 ಅಂಗುಲ ಚೌಕಾಕಾರವಾಗಿರುತ್ತವೆ. ಒಂದೊಂದರಲ್ಲಿ 300 ಕಣ್ಣುಗಳುಳ್ಳ 20 ರಿಂದ 25 ತುಂಡುಗಳನ್ನು ಜೋಡಿಸಿ, ಒಂದು ಬಲೆ ತಯಾರಿಸುತ್ತಾರೆ. ಈ ಬಲೆಯು 800 ರಿಂದ 900 ಗಜ ಉದ್ದ ಹಾಗೂ 10 ರಿಂದ 12 ಅಡಿ ಅಗಲವಾಗಿರುತ್ತದೆ. ಇದರ ಮೇಲುಗಡೆಗೆ ಬೆಂಡು ಹಾಗೂ ಕೆಳಗಡೆಗೆ ಕಲ್ಲುಗುಂಡು ಕಟ್ಟಿರುತ್ತಾರೆ. ಪರಿಣಾಮವಾಗಿ ಅತಿ ಆಳವಾದ ಸಮುದ್ರದಲ್ಲಿ ಈ ಬಲೆಯನ್ನು ಹಾಕಿದಾಗ ಬಲೆಯು ನೀರಿನಲ್ಲಿ ಮುಳುಗಿದ್ದರೂ ಅದರ ಮೇಲ್ಭಾದಿಯು ತೇಲಾಡುತ್ತಿರುತ್ತದೆ.

(iii) **ಬೀಸುವ ಬಲೆ:** ಈ ಬಲೆಗಳ ತಯಾರಿಕೆ ಸುಲಭ; ಹೆಚ್ಚು ಹಣ, ಶ್ರಮ, ಇಲ್ಲವೆ ಬುದ್ಧಿಶಕ್ತಿ ಬೇಕಾಗಿಲ್ಲ. ಇವುಗಳಲ್ಲಿ ಹಲವು ಬಗೆ. ಇವುಗಳಲ್ಲಿ ಹೊಂಗಿ ಹಾಗೂ ನಿಂಗಿ ಬಲೆಗಳು ಪ್ರಾಮುಖ್ಯವಾದುವು.

(ಅ) **ಹೊಂಗಿಬಲೆ:** ಇದು ಹಳೆಯದಾದ ಒಂದು ಬೀಸುವ ಬಲೆ. ಇದನ್ನು ತಯಾರಿಸಲು ಪ್ರಾರಂಭದಲ್ಲಿ 88 ಕಣ್ಣುಗಳನ್ನು ಸಿದ್ಧಪಡಿಸಬೇಕು. ತರುವಾಯ ಅವು

ಗಳಿಗೆ ಅಂಥವೇ 44 ಕಣ್ಣುಗಳನ್ನು ಸೇರಿಸಬೇಕು. ಆಗ ಒಂದು 'ಹೋಲ್' ಸಿದ್ಧವಾಗುತ್ತದೆ. ಇಂಥ ಹಲವಾರು 'ಹೋಲ್'ಗಳನ್ನು ಸೇರಿಸಿ ಬೇಕಾದಷ್ಟು ಅಳತೆಯ ಬಲೆಯನ್ನು ತಯಾರಿಸುತ್ತಾರೆ. ಸಾಧಾರಣವಾದ ಒಂದು ಹೊಂಗಿಬಲೆಯ ಉದ್ದ 9 ರಿಂದ 12 ಅಡಿ ಇರುತ್ತದೆ. ಈ ಬಲೆಯ ತಳದಲ್ಲಿ ಸುತ್ತಲು 10 ರಿಂದ 15 ಕಣ್ಣುಗಳಿಗೊಂದ



ಚಿತ್ರ 10: ಹೊಂಗಿ ಬಲೆ


ರಂತೆ, ಒಂದೊಂದು ಸೀಸದ ಗುಂಡನ್ನು ಆಸರೆದಾರದ ನೆರವಿನಿಂದ ಪೋಣಿಸುತ್ತಾರೆ. ಈ ಗುಂಡುಗಳ ಸಹಾಯದಿಂದ ಬಲೆಗೆ ನೀರಿನಲ್ಲಿರುವಾಗ ಸಮತೋಲನದಲ್ಲಿರಲು ಹಾಗೂ ಬೀಸಿದಾಗ ವರ್ತುಲಾಕಾರವಾಗಲೂ ಸಾಧ್ಯವಾಗುತ್ತದೆ. ಆಸರೆದಾರ ಬಲೆಯನ್ನು ಸಮತೋಲದಲ್ಲಿ ಉಳಿಯಗೊಟ್ಟು ಹರಿದುಹೋಗದಂತೆ ರಕ್ಷಿಸುತ್ತದೆ. ಮೇಲೆ ಕಟ್ಟಿದ ಹಗ್ಗವನ್ನು ಜಗ್ಗಿದ ಕೂಡಲೆ ಬಲೆಯು ಮೇಲೆ ಬರುತ್ತದೆ; ಆಗ ಸುತ್ತಲೂ ಮಡಚಿದಂತಹ ಭಾಗದ ಬಾಯಿಯು ತೆರೆದು ಚೀಲದಂತೆ ಆಗುತ್ತದೆ. ಆಗ ಈ ಬಲೆಗೆ ಬಿದ್ದ ಮೀನುಗಳೆಲ್ಲ, ಈ ಚೀಲದಲ್ಲಿ ಬಂದು ಸೇರುತ್ತವೆ.

ಈ ಬಲೆಯಿಂದ ಮಡ್ಲೆ, ಗುರ್ಕು, ಶೇಡೆ, ಗೊಬ್ಬರೆ, ಪರಿಶೆಟ್ಲೆ ಮೀನುಗಳನ್ನು ಹಿಡಿಯುತ್ತಾರೆ. ನೀರಿನಡಿಯಲ್ಲಿರುವ ಕಲ್ಲು ಭಾಗಕ್ಕೆ ಬೀಸಿದರೂ ಈ ಬಲೆಗೆ ಯಾವುದೇ ತೆರನಾದ ಅಪಾಯವಾಗುವುದಿಲ್ಲ. ಈ ಬಲೆಗಳು ವಿವಿಧ ಅಳತೆಯ ಸಣ್ಣ ಮತ್ತು ದೊಡ್ಡ ಕಣ್ಣುಗಳ ಜಾಲಗಳುಳ್ಳವುಗಳಾಗಿವೆ. ನದಿ, ಕೆರೆಗಳಲ್ಲಿಯೂ ಮೀನುಗಳನ್ನು ಹಿಡಿಯಲು ಈ ಬಲೆಯು ಉಪಯೋಗ ಬೀಳುತ್ತದೆ.

(ಆ) **ನಿಂಗಿಬಲೆ:** ಈ ಬಲೆಯು ಹೊಂಗಿಬಲೆಯಂತೆಯೇ ಇರುತ್ತದೆ. ಇದನ್ನು ಸಿದ್ಧಪಡಿಸಲು ಮೊದಲು ಪ್ರಾರಂಭದ ಕಣ್ಣುಗಳನ್ನು ತಯಾರಿಸಬೇಕಾಗುತ್ತದೆ. ಇದಕ್ಕೆ

ರೂಢಿಯಲ್ಲಿ 'ಕಾಲಹಾಕುವುದು' ಎಂದು ಹೆಸರು. ಈ ಬಲೆಯ ಕಣ್ಣುಗಳ ಅಳತೆ ಹೊಂಗಿಬಲೆಯ ಕಣ್ಣುಗಳಿಗಿಂತ ಭಿನ್ನವಾಗಿರುತ್ತದೆ. ಈ ಬಲೆಗಳ ಕಣ್ಣುಗಳು 0.2, 0.4, 0.6, 0.8 ಇಲ್ಲವೆ 1.0 ಅಂಗುಲ ಚೌರಸಾಕಾರದವಾಗಿರುತ್ತವೆ. ಬೇಕಾದ ಅಳತೆಯ ಕಣ್ಣುಗಳನ್ನು ನಿರ್ಧರಿಸಿ, ಹೋಲ್‌ಗಳನ್ನು ತಯಾರಿಸಿ, ಬಲೆಯನ್ನು ಬೆಳೆಸುತ್ತ ಹೋಗುತ್ತಾರೆ. ನಿಂಗಿಬಲೆಯು ಅತೀ ಹೆಚ್ಚೆಂದರೆ ಆರು ಮೀಟರ್ ಉದ್ದವಿರುತ್ತದೆ. ಇದಕ್ಕಿಂತ ಹೆಚ್ಚು ಉದ್ದವಿದ್ದರೆ ಬಲೆಯನ್ನು ಬೀಸಲು ಸಾಧ್ಯವಾಗುವುದಿಲ್ಲ. ಬಲೆಯನ್ನು ಹಿಡಿಯುವ ರೀತಿ ಹಾಗೂ ಬೀಸಿದಾಗ ಸಮುದ್ರದಲ್ಲಿ ಅದು ವರ್ತುಲಾಕಾರವಾಗಿ ಬೀಳುವಿಕೆಗಳು ಚಾಣಾಕ್ಷತೆಯ ಸಂಗತಿಗಳಾಗಿವೆ. ನಾವೆಯ ಮುಂಭಾಗದಲ್ಲಿ ನಿಂತು ಬಲೆಯನ್ನು ನೀರಿನಲ್ಲಿ ಬೀಸಬೇಕಾಗುತ್ತದೆ. ಆಗ ಜೋಲಿ ತಪ್ಪಿ ನೀರಿಗೆ ಬೀಳುವ ಸಂಭವವಿರುತ್ತದೆ. ಅಂತೆಯೇ ದಕ್ಷತೆವಹಿಸಬೇಕಾಗುತ್ತದೆ. ನೀರಿನಲ್ಲಿ ಈ ಬಲೆಯು ವರ್ತುಲಾಕಾರವಾಗಿ ಬಿದ್ದರೆ ಮಾತ್ರ ಮೀನುಗಳನ್ನು ಹಿಡಿಯಲು ಸಾಧ್ಯ. ಅಭ್ಯಾಸಿಗಳಿಗೆ ಮಾತ್ರ ಈ ಬಲೆ ಬೀಸುವುದು ಹಾಗೂ ಇದರಿಂದ ಮೀನು ಹಿಡಿಯುವುದು ಸಾಧ್ಯ.

ಈ ಬಲೆಯ ಕೆಳಭಾಗಕ್ಕೆ ಭಾರವನ್ನು ಕಟ್ಟಿರುತ್ತಾರೆ. ಮೇಲಿಂದ ಕೆಳಗಿನವರೆಗೆ 22 ದಾರ; ಪುನಃ ಒಂದೊಂದಕ್ಕೆ ಕವಲು; ಒಟ್ಟಿನಲ್ಲಿ 44 ದಾರಗಳನ್ನು ಕಟ್ಟಿರುತ್ತಾರೆ.



ಚಿತ್ರ 11: ನಿಂಗಿ ಬಲೆ

(ಅ) ನೀರಿನಲ್ಲಿ ಬೀಸಿದಾಗಿನ ಸ್ಥಿತಿ (ಆ) ಸಾದಾಸ್ಥಿತಿ


ಕೆಲವು 14 ಇಲ್ಲವೆ 15 ದಾರಗಳುಳ್ಳ ಬಲೆಗಳೂ ಇರುತ್ತವೆ. ಈ ಬಲೆಯು ಮೇಲುಗಡೆಗೆ 1 ಅಡಿ ವ್ಯಾಸ ಹಾಗೂ $1\frac{1}{2}$ ಅಡಿ ಉದ್ದ ಚಿಗರೆಯ (ಜಿಂಕೆಯ) ಕೋಡಿನ ಇಲ್ಲವೆ ಬಿರುಸು ಕಟ್ಟಿಗೆಯ ಉಂಗುರವಿರುತ್ತದೆ. ಉಂಗುರದ ಸುತ್ತಲೂ ಬಲೆಯ ಪ್ರಾರಂಭದ ಕಣ್ಣುಗಳೆಲ್ಲ ಹೊಂದಿಕೊಂಡಿರುತ್ತವೆ. ಬಲೆಯ ದಾರಗಳು ಉಂಗುರದ ಒಳಗಡೆ ಇರುತ್ತವೆ. ಬಲೆಯನ್ನು ಮಡುಚಿಟ್ಟಾಗ ದಾರಗಳೆಲ್ಲ ಮೇಲ್ಗಡೆಗೆ ಕೂಡಿ ಬೀಳುತ್ತವೆ. ಒಂದು ಉದ್ದವಾದ ಸಪೂರ ಹಗ್ಗಕ್ಕೆ ಈ ದಾರಗಳೆಲ್ಲ ಜೋಡಣೆಗೊಂಡಿರುತ್ತವೆ. ಹಗ್ಗದ ಉದ್ದವು ಮೀನು ಹಿಡಿಯಬೇಕಾಗಿರುವ ನೀರಿನ ಆಳವನ್ನು ಅವಲಂಬಿಸಿರುತ್ತದೆ. ಆಳನೀರಿನಲ್ಲಿ ಬೀಸುವ ಬಲೆಯ ಹಗ್ಗವು ಸುಮಾರು 8 ರಿಂದ 9 ಮೀಟರ್ ಉದ್ದವಿರುತ್ತದೆ. ಬಲೆಯನ್ನು ಬೀಸುವಾಗ್ಗೆ ಉಂಗುರಕ್ಕೆ ಕಟ್ಟಿದ ನೂಲನ್ನು ಬಿಚ್ಚಿಕೊಳ್ಳುತ್ತಾರೆ. ಬಲೆಯು ನೀರಿನಲ್ಲಿ ತಳಕ್ಕೆ ಹೋದೊಡನೆ ಮೀನುಗಾರನು ತನ್ನ ಕೈಯಿಂದ ಹಗ್ಗವನ್ನು ಜಗ್ಗುತ್ತಾನೆ. ಉಂಗುರವು ಕೆಳಕ್ಕೆ ಜಾರುತ್ತ ಆಸರೆಯ ಮಣಿಗಳ ಕಡೆಗೆ ಬರುತ್ತದೆ. ಬಲೆಯ ಮಧ್ಯದ ಭಾಗವು ಆಗ ಚೀಲದಂತೆ ಆಗುತ್ತದೆ. ಈ ಚೀಲದಲ್ಲಿಯೇ ಮೀನುಗಳು ಬಂದು ಬೀಳುತ್ತವೆ. ಈ ಬಲೆಯಿಂದ ಸಣ್ಣ ಹಾಗೂ ದೊಡ್ಡ ಮೀನುಗಳೆರಡನ್ನೂ ಹಿಡಿಯಬಹುದು. ಇದು ಬಲೆಯ ಕಣ್ಣುಗಳ ಅಳತೆಯನ್ನು ಅವಲಂಬಿಸುತ್ತದೆ. ಹೆಚ್ಚಾಗಿ ಸಣ್ಣ ಶೆಟ್ಲೆ, ದಣಸೆ. ಬೆಳುಂಜೆ, ತೋರಿ, ಹೆಸಡಿ, ಬುರಾಟೆ, ಮಾಂಜ, ಬಂಗಡೆ, ಗುರ್ಕು, ಕೊಕ್ಕರೆ ಮೀನುಗಳನ್ನು ಈ ಬಲೆಯಿಂದ ಹಿಡಿಯುತ್ತಾರೆ.

ಅಧ್ಯಾಯ 3

ಬಲೆಗಳ ತಯಾರಿಕೆ

ಮೀನುಬಲೆ ಹೆಣೆಯುವುದೊಂದು ಕಲೆ. ಅದರಲ್ಲಿ ಪರಿಣಿತರಾದ ಜನರು ಮಾತ್ರ ಈ ಕೆಲಸ ಮಾಡಬಲ್ಲರು. ಬಲೆ ನಿರ್ಮಾಣಕ್ಕೆ ಹಲವಾರು ವಸ್ತುಗಳು ಬೇಕಾಗುತ್ತವೆ. ಸಣಬಿನ ಇಲ್ಲವೆ ಹತ್ತಿ ದಾರ, ಚಿಗಲಿ, ಹಗರು ಇವು ಬಲೆಗಳ ತಯಾರಿಕೆಯಲ್ಲಿನ ಮುಖ್ಯ ಸಾಧನಗಳು. ಒಂದೊಂದಾಗಿ ಮುಖ್ಯವಾದ ಈ ಕೆಲವನ್ನು ಪರಿಶೀಲಿಸೋಣ.

(1) **ಚಿಗಲಿ:** ಬಿದುರಿನ ಸಿಗುರನ್ನು ತೆಳುವಾಗಿ ಸೀಳಿ ಚಾಕುವಿನಿಂದ ನುಣುಪಾಗುವಂತೆ ಕೆತ್ತಿದ ಸಾಧನವಿದು. ಅದರ ತುದಿಯ ಎರಡು ಬದಿಗಳಲ್ಲಿ ದಾರ ತುಂಬುವುದರ ಸಲುವಾಗಿ 'U' ಆಕಾರದ ಕಚ್ಚುಗಳಿರುತ್ತವೆ. ಬೇರೆ ಬೇರೆ ಅಳತೆಯ ಕಣ್ಣುಗಳುಳ್ಳ ಬಲೆಗಳನ್ನು ತಯಾರಿಸುವಾಗ ಬೇರೆ ಬೇರೆ ಉದ್ದಳತೆಯ ಚಿಗಲಿಗಳನ್ನು ಉಪಯೋಗಿಸುತ್ತಾರೆ. ಸಣ್ಣ ಕಣ್ಣುಗಳುಳ್ಳ ಬಲೆ (ಗಾಬಿ ಬಲೆ) ಯನ್ನು ತಯಾರಿಸ




ಚಿತ್ರ 12: ಚಿಗಲಿ

(ಅ) ಖಾಲಿ (ಆ) ದಾರತುಂಬಿದ್ದು

ಬೇಕಾದರೆ ತೆಂಗಿನ ಗರಿ ಕಡ್ಡಿಯನ್ನು ಇಲ್ಲವೇ ಅಷ್ಟೇ ಜಿನುಗಾದ ಬಿದುರಿನ ಕಡ್ಡಿಯಿಂದ ಮಾಡಿದ ಚಿಗಲಿಯನ್ನು ಉಪಯೋಗಿಸುತ್ತಾರೆ. ಏಂಡಿ (ರಂಪಣಿ) ಬಲೆಯ ರಚನೆಯಲ್ಲಿ 6 ರಿಂದ 7 ಅಂಗುಲ ಉದ್ದ, 0.3 ರಿಂದ 0.4 ಅಂಗುಲ ಅಗಲ ಹಾಗೂ 0.1 ಅಂಗುಲ ದಪ್ಪದ ಚಿಗಲಿ ಉಪಯೋಗಿಸುತ್ತಾರೆ. ಬುಡಿಬಲೆಯ ರಚನೆಯಲ್ಲಿ ಚಿಗಲಿಯ ಆಕಾರವು ದೊಡ್ಡದಾಗಿರುತ್ತದೆ. ಚಿಗಲಿಗಳನ್ನು ಎಷ್ಟೇ ನುಣುಪಾಗಿ ಕೆತ್ತಿ ತೋಡಿದರೂ ಕೂಡ ಬಲೆಗಳ ಕಣ್ಣುಗಳಲ್ಲಿ ಸೇರಿಸಿ ಕಣ್ಣುಗಳನ್ನು ಬೆಳೆಸುವ ಸಮಯದಲ್ಲಿ ಅಡಚಣೆ ಯುಂಟಾಗಿ ರಚನೆಯ ವೇಗವು ಕಡಮೆಯಾಗುತ್ತದೆ. ಇದನ್ನು ಪರಿಹರಿಸಲು ಚಿಗಲಿಗಳ ತುದಿಗಳನ್ನು ಕೆಂಡದ ಮೇಲೆ ಇಟ್ಟು ಸುಡುತ್ತಾರೆ. ಈ ರೀತಿ ತುದಿ ಸುಟ್ಟು ನುಣುಪು ಮಾಡಿದ ಚಿಗಲಿಗಳಿಂದ ಬಲೆ ಹೆಣೆಯಲು ಅನುಕೂಲವಾವುದಲ್ಲದೆ, ವೇಗವೂ ಹೆಚ್ಚುತ್ತದೆ. ಚಿಗಲಿಯ ತುದಿಯನ್ನು 'U' ಆಕಾರದಲ್ಲಿ ತೋಡುವುದರಿಂದ ದಾರವನ್ನು ಬಲೆಯ ಕಣ್ಣುಗಳ ಗಾತ್ರದಷ್ಟು ತುಂಬಲು ಸಾಧ್ಯವಾಗುತ್ತದೆ. ಅಲ್ಲದೆ, ತುಂಬಿದ ದಾರವನ್ನು ಬಲೆ ಹೆಣೆಯುವ ಕಾಲಕ್ಕೆ ಕ್ರಮವಾಗಿ ಬಿಡಲು ಅನುಕೂಲವಾಗುವುದಲ್ಲದೆ. ಕಣ್ಣುಗಳ ಮೂಲಕ ಪೋಣಿಸಲು ಸಾಧ್ಯವಾಗುತ್ತದೆ.

(2) **ಹಗರು:** ಬಿದುರಿನ ಸಿಗುರನ್ನು ಬಲೆಯ ಕಣ್ಣುಗಳ ಅಳತೆಯಷ್ಟೆ ಕೆತ್ತಿ ನುಣುಪು ಮಾಡಿ, ಎರಡು ಅಂಚುಗಳನ್ನು ಸ್ವಲ್ಪ ಇಳಿಜಾರಾಗಿ ಕೆತ್ತುತ್ತಾರೆ. ಹೀಗೆ ಮಾಡಿದ ಸಿಗುರಿನ ತುದಿಗೆ 'ಹಗರು' ಎಂದು ಕರೆಯುವ ವಾಡಿಕೆ ಇದೆ. ಈ



ಚಿತ್ರ 13: ಹಗರು

(ಅ) ಓರೆನೋಟ (ಆ) ಎದುರು ನೋಟ

ಹಗರು ನುಣುಪಾದಷ್ಟೂ ಉತ್ತಮ. ಏಕೆಂದರೆ ಬಲೆಯನ್ನು ಹೆಣೆಯುವಾಗ ಬಲೆಯ ಕಣ್ಣುಗಳ ಗಂಟುಗಳನ್ನು ಇದಕ್ಕೆ ಹೊಂದಿಸಿ ಹಾಕುತ್ತಾರೆ. ಹಗರು ಪೂರ್ಣ ತುಂಬಿದ ಮೇಲೆ ಇದಕ್ಕೆ ಹೊಂದಿಸಿದ ಗಂಟುಗಳನ್ನು ಮೇಲೆ ಸರಿಸುತ್ತಾರೆ. ಹಗರಿನ ಎರಡು


ಅಂಚುಗಳು ಸಮಾಂತರವಾಗಿರುವಂತೆ ಕೆತ್ತಿ, ನುಣುಪಾಗಿರಿಸಿ, ಇಳಿಜಾರು ಮಾಡಿರುವುದರಿಂದ ಸುಲಭವಾಗಿ ಗಂಟುಗಳನ್ನು ನುಸುಳಿಸಲು ಸಾಧ್ಯವಾಗುತ್ತದೆ. ಅವು ಒರಟಾ(ಪುರುಬುರುಕಾ)ಗಿದ್ದರೆ ಬಲೆಯ ಕಣ್ಣುಗಳು ಅಸಮವಾಗಿ. ಗಂಟನ್ನು ಸರಿಸಲು ಸುಲಭವಾಗಿ ಸಾಧ್ಯವಾಗುವುದಿಲ್ಲ. ಈ ಅಡೆತಡೆಯಿಂದ ಬಲೆಯನ್ನು ಹೆಣೆಯುವ ವೇಗವು ಕಡಮೆಯಾಗುತ್ತದೆ. ಅಲ್ಲದೆ, ನುಸುಳಿಸುವಾಗ ಘರ್ಷಣೆಯ ಮೂಲಕ ಜಿನಗು ನೂಲು ಹರಿಯುವ ಸಂಭವವಿರುತ್ತದೆ. ಆದ್ದರಿಂದ ಹಗರನ್ನು ತಯಾರಿಸುವಾಗ ಕುಶಲತೆಯಿಂದ ಕೆತ್ತಬೇಕಾಗುತ್ತದೆ. ಹಗರಿನ ಮೇಲ್ಬದಿ ಹಾಗೂ ಕೆಳಬದಿ ಮೊನೆಯಾಕಾರವಾಗಿದ್ದು ಮಧ್ಯಭಾಗ ಗಡುತರವಾಗಿರುತ್ತದೆ. ಹಾಗಿರದಿದ್ದರೆ, ಬಲೆಯ ಕಣ್ಣು ಸಮಅಳತೆಯವಾಗದೆ ಬೇರೆ ಬೇರೆ ಅಳತೆಯವಾಗುತ್ತವೆ. ಹಗರು ಸಾಧಾರಣವಾಗಿ ನಾಲ್ಕೈದು ಅಂಗುಲ ಉದ್ದ ಇರುತ್ತದೆ: ಅಗಲ, ಬಲೆಗಳ ಕಣ್ಣುಗಳ ಅಳತೆಯನ್ನು ಅವಲಂಬಿಸಿರುತ್ತದೆ. ಬುಡಿಬಲೆಯ ಹಗರು 6 ಅಂಗುಲ ಉದ್ದ, 9 ರಿಂದ 10 ಅಂಗುಲ ಅಗಲ ಹಾಗೂ ¾ ಅಂಗುಲ ದಪ್ಪವಿರುತ್ತದೆ.

ಬಿದಿರು ಪೊಳ್ಳಾಗಿದ್ದು ಅತಿ ಮೆತ್ತಗೆ ಇರುವುದರಿಂದ ಚಾಕುವಿನಿಂದ ಸುಲಭವಾಗಿ ಬೇಕಾದ ಹಾಗೆ ನುಣುಪು ಮಾಡಬಹುದಾದುದರಿಂದ ಹಗರು ಮತ್ತು ಚಿಗಲಿ ತಯಾರಿಕೆಗೆ ಮೀನುಗಾರರು ಬಿದಿರನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ. ಕೆಲವರು ಬಿದಿರಿನ ಬದಲು ಇತರ ಕಟ್ಟಿಗೆಗಳನ್ನೂ ಉಪಯೋಗಿಸುವುದುಂಟು: ಆದರೆ ಇವುಗಳ ಬಳಕೆ ಅಷ್ಟಿಲ್ಲ. ಏಕೆಂದರೆ ಕಟ್ಟಿಗೆಯನ್ನು ಕೆತ್ತಿ ನುಣುಪು ಮಾಡಲು ಹದವಾದ ಚಾಕು (ಚೂರಿ) ಹಾಗೂ ಉಳಿಗಳು ಬೇಕಾಗುತ್ತವೆ. ಅಲ್ಲದೆ, ಕಟ್ಟಿಗೆಯು ಬಿರುಸಾಗಿರುವುದರಿಂದ ಹಗರು ಇಲ್ಲವೆ ಚಿಗಲಿಗಳಿಗೆ ಸರಿಯಾದ ಆಕಾರ ತರಲು ಕಷ್ಟವಾಗುತ್ತದೆ ಮತ್ತು ಹೆಚ್ಚು ಸಮಯ ತಗಲುವುದು. ಆದ್ದರಿಂದ ಬಿದಿರಿನ ಸಿಗುರಿನಿಂದಲೇ ಇವುಗಳನ್ನು ಸಾಮಾನ್ಯವಾಗಿ ತಯಾರಿಸುತ್ತಾರೆ.

ಬಲೆ ಹೆಣೆಯುವ ಪದ್ಧತಿ:

ಚಿಗಲಿ ಹಾಗೂ ಹಗರು ಸಾಧನಗಳನ್ನು ಸಿದ್ಧಪಡಿಸಿಟ್ಟುಕೊಂಡಾದ ಮೇಲೆ, ಚಿಗಲಿಯನ್ನು ದಾರದಿಂದ ತುಂಬಿಟ್ಟುಕೊಳ್ಳಬೇಕು. ನಂತರ, ತುಂಬಿದ ಚಿಗುಲಿಯ ದಾರದ ತುದಿಯನ್ನು ಹಗರಿಗೆ ಎರಡು ಸುತ್ತು ಹಾಕಿ, ಬಿಗಿದು ಕಟ್ಟಬೇಕು. ಮೇಲೆ ಕಟ್ಟಿದ ದಾರವನ್ನು ಹಗರಿನಿಂದ ಸರಿಸಿ, ಕಳಚಬೇಕು. ಕಳಚಿದ ನಂತರ ಅದು ಚೌಕೋನಾಕಾರವಾಗುತ್ತದೆ. ಈ ಚೌಕೋನಾಕಾರವೇ ಬಲೆಯ ಪ್ರಾರಂಭದ ಕಣ್ಣು. ಈ ಕಣ್ಣಿನಲ್ಲಿ ಬೇರೆ ದಾರವನ್ನು ಪೋಣಿಸಿ, ನಂಬರ್ ಒಂದ(1)ರಲ್ಲಿ ಬರುವಂತೆ ಇಟ್ಟು, ನಂಬರ್ ನಾಲ್ಕರ (4)ಲ್ಲಿದ್ದ ಚಿಗಲಿಯ ದಾರವನ್ನು ಹಗರಿಗೆ ಸುತ್ತಿ, ಈ ಕಣ್ಣುಗಳಲ್ಲಿ ಇನ್ನೊಮ್ಮೆ ಪೋಣಿಸಿ, ನಂಬರ್ ಮೂರ (3)ರಲ್ಲಿ ಹಗರಿನಿಂದ ಕಳಚಬೇಕು. ಈ ರೀತಿ ಸರಿಸುತ್ತ ಮುಂದುವರೆಸಿ, ಬೇಕಾದಷ್ಟು ಕಣ್ಣುಗಳನ್ನು ಹೆಣೆಯುತ್ತ ಹೋಗಬಹುದು. ಹೀಗೆ ಬೇಕಾದಷ್ಟು ಕಣ್ಣುಗಳು ತಯಾರಾದ ನಂತರ ಬಲೆಯ ಕಣ್ಣನ್ನು ಅಗಲಮಾಡಿಕೊಳ್ಳ

ಬೇಕು. ಇದರಲ್ಲಿ ಚಿಗಲಿಯ ನೂಲು ಇದ್ದ ಭಾಗವನ್ನು ಕೆಳಕ್ಕೆ ಮಾಡಿ, ಅದರ ವಿರುದ್ಧ ಇರುವ ಭಾಗವನ್ನು ಮೇಲಕ್ಕೆ ಬರುವಂತೆ ಗಡುತರ ದಾರದಿಂದ ಮೇಲ್ಭಾಗದ ಕಣ್ಣುಗಳನ್ನು ಪೋಣಿಸುತ್ತ ಹೋಗಿ ಅದು ಪೂರ್ಣವಾದ ತರುವಾಯ ತಯಾರಕನು



ಚಿತ್ರ 14: ಬಲೆ ಹೆಣೆಯುವ ವಿಧಾನ
ವಿವಿಧ ಹಂತಗಳು 1, 2, 3. 4, 5

ಕಾಲಿನ ಹೆಬ್ಬೆಟ್ಟಿಗೋ, ಕಂಬಕ್ಕೋ ಇಲ್ಲವೆ ಗೂಟಕ್ಕೋ ಕಟ್ಟುತ್ತಾನೆ. ಈ ಪ್ರಕಾರ ಮಾಡಿದ ಮೇಲೆ ಒಂದೊಂದೇ ಕಣ್ಣನ್ನು ಆರಿಸುತ್ತ ಹಗರಿನ ಸಹಾಯದಿಂದ ಹೆಣೆಯುತ್ತ ಹೋಗುತ್ತಾನೆ. ಕಣ್ಣುಗಳು ಪೂರ್ಣ ಮುಗಿದ ನಂತರ ಮತ್ತೊಮ್ಮೆ ಹೆಣೆಯುತ್ತಾನೆ. ಇದೇ ಪ್ರಕಾರ ಮುಂದುವರೆಯುತ್ತ ಬೇಕಾದಷ್ಟು ಉದ್ದ ಬೆಳೆಯಿಸಿಕೊಳ್ಳುತ್ತಾನೆ.

ಈ ಪದ್ಧತಿಯಿಂದ ಗೋರುವ ಬಲೆ, ರಂಪಣಿಬಲೆ, ಪಟ್ಟೆಬಲೆ ಹಾಗೂ ಬೀಡುಬಲೆಗಳನ್ನು ಹೆಣೆಯುತ್ತಾರೆ. ಪಟ್ಟೆ ಹಾಗೂ ಬೀಡುಬಲೆಗಳಲ್ಲಿ ಗೋರುವ ಹಾಗೂ ರಂಪಣಿ

ಬಲೆಗಳಷ್ಟು ಉದ್ದವಾದ ಕಣ್ಣುಗಳು ಇರುವುದಿಲ್ಲ. ಬಲೆಯ ಅಗಲವನ್ನು ಅನುಸರಿಸಿ, ಉದ್ದ ಕಣ್ಣುಗಳನ್ನು ಬೆಳೆಯಿಸಿಕೊಂಡು ಆಮೇಲೆ ಬಲೆಗೆ ಕಣ್ಣುಗಳು ಎಷ್ಟು ಆವಶ್ಯಕವೋ ಅಷ್ಟರವರೆಗೆ ಬೆಳೆಯಿಸುತ್ತಾರೆ. ಸಾಮಾನ್ಯವಾಗಿ ಒಂದೊಂದು ಬಲೆಗೆ 300 ಕಣ್ಣುಗಳು ಇರುತ್ತವೆ. ಬಲೆಯ ಕಣ್ಣುಗಳು ಪೂರ್ಣವಾದಾಗ ಕಣ್ಣುಗಳನ್ನು ಎಳೆದು ಅಗಲ ಮಾಡುತ್ತಾರೆ. ಹೀಗೆ ಮಾಡುವುದಕ್ಕೆ ಒಂದು ಕಾರಣವಿದೆ. ನೀರಿನಲ್ಲಿ ಬಲೆಯನ್ನು ಹಾಕಿದಾಗ ಬಲೆಯ ಕಣ್ಣುಗಳು ತೆರೆದಿರಬೇಕಾಗುತ್ತದೆ. ಅಂದರೇನೇ ಕಣ್ಣುಗಳಲ್ಲಿ ಮೀನುಗಳು ಸಿಕ್ಕಿಬೀಳುತ್ತವೆ. ತೇಲಾಡುವ ಬಲೆಗಳೆಲ್ಲವನ್ನು ಈ ಪದ್ಧತಿಯಿಂದ ಹೆಣೆಯುತ್ತಾರೆ.

ಬೀಸುವ ಬಲೆಯ ರಚನೆಯಲ್ಲಿ ಪ್ರಾರಂಭದಲ್ಲಿ ಎಂಭತ್ತೆಂಟು (88) ಕಾಲುಗಳನ್ನು ಹೆಣೆದುಕೊಳ್ಳಬೇಕು. (ರೂಢಿಯಲ್ಲಿ ಪ್ರಾರಂಭದ ಕಣ್ಣುಗಳಿಗೆ 'ಕಾಲು' ಎಂದು ಕರೆಯುವುದು ವಾಡಿಕೆ). ಬಲೆ ಹೆಣಿಕೆಗಾರ ಪ್ರಾರಂಭದಲ್ಲಿ ತನ್ನ ಕಾಲಿನ ಹೆಬ್ಬೆಟ್ಟಿಗೆ ಒಂದು ಚಿಕ್ಕ ದಾರವನ್ನು ದುಂಡಗೆ ಕಟ್ಟಿಕೊಳ್ಳುತ್ತಾನೆ. ನಂತರ ಆ ದಾರಕ್ಕೆ ಬಿಗಲಿಯ ದಾರವನ್ನು ಕಟ್ಟಿ ಹಗರಿನ ಮೇಲಿಂದ ಈ ದಾರವನ್ನು ಹಾಯಿಸಿ, ಹಗರಿನ ಹಿಂಬದಿಯಿಂದ ದಾರವನ್ನು ಒಯ್ದು ದುಂಡಗಾದ ದಾರದಲ್ಲಿ ಸೇರಿಸಿ, ದಾರದಿಂದ ಪೋಣಿಸುತ್ತ ಬಲೆಯ ಕಣ್ಣುಗಳನ್ನು ಗಂಟಿನಿಂದ ಹೆಣೆಯುತ್ತ ಸಾಗುತ್ತಾನೆ. ಈ ರೀತಿ ಹೆಣೆದಾದ ಬಲೆಯ ವರ್ಗಕ್ಕನುಸಾರವಾಗಿ ಕಣ್ಣುಗಳು ಸಣ್ಣ ಅಥವಾ ದೊಡ್ಡವಾಗುತ್ತವೆ. ಐದು ಇಲ್ಲವೆ ಹತ್ತು ಸಾಲಿನ ಕಣ್ಣುಗಳನ್ನು ಹೆಣೆದ ನಂತರ ಹೋಲಿ ಹಾಕಲು ಪ್ರಾರಂಭಿಸುತ್ತಾರೆ. ಹೀಗೆ ಹೋಲಿ ಹಾಕುವ ಕೆಲಸ ಪೂರ್ಣವಾದ ತರುವಾಯ 2ರಿಂದ 3, ಇಲ್ಲವೆ 5 ಸಾಲುಗಳಲ್ಲಿ ಕಣ್ಣುಗಳನ್ನು ಹೆಣೆದು ಪುನಃ ಹೋಲಿಯ ಕಣ್ಣುಗಳನ್ನು ಹೆಣೆಯುತ್ತಾರೆ. ಪ್ರತಿಯೊಂದು ಬಲೆಗೆ 44 ಹೋಲಿ ಕಣ್ಣುಗಳು ಇರುತ್ತವೆ. ಇನ್ನೊಮ್ಮೆ ಹೋಲಿ ಹಾಕುವುದಕ್ಕಾಗಿ ಈಗಾಗಲೇ ಇದ್ದ ಹೋಲಿ ಕಣ್ಣುಗಳ ಕೆಳಕ್ಕೆ ಸರಿಯಾಗಿ ಗುರುತು ಮಾಡಿಕೊಳ್ಳುವರು. ಹೀಗೆ ಪೂರ್ಣ ಗುರುತು ಮಾಡಿಕೊಂಡ ತರುವಾಯ ಈ ಸ್ಥಳಗಳಲ್ಲೆ ಹೋಲಿ ಹಾಕುತ್ತಾರೆ. ಮೊದಲನೆಯ ಸರತಿಗೆ ಎರಡು ಕಣ್ಣುಗಳಿಗೆ, ಎರಡನೆಯ ಸರತಿಗೆ ಮೂರು ಕಣ್ಣುಗಳಿಗೆ, ಮೂರನೆಯ ಸರತಿಗೆ ನಾಲ್ಕು ಕಣ್ಣುಗಳಿಗೆ ಈ ಪ್ರಮಾಣದಲ್ಲಿ ಹೋಲಿಕಣ್ಣುಗಳ ರಚನೆಯು ಮುಂದುವರಿಯುತ್ತದೆ. ಈ ತೆರನಾಗಿ ಹೋಲಿಕಣ್ಣುಗಳನ್ನು ಹೆಣೆಯುವುದರಿಂದ ಬಲೆಯನ್ನು ಬೀಸಿದಾಗ ಅದು ನೀರಿನಲ್ಲಿ ವರ್ತುಲಾಕಾರವಾಗಿ ಬೀಳುತ್ತದೆ. ಈ ಬಲೆಯನ್ನು ಒಂದು ಅಡಿ ಹೆಣೆದ ತರುವಾಯ ವರ್ತುಲಾಕಾರವಾಗುವಂತೆ ಕೂಡಿಸುತ್ತಾರೆ. ಬೇಕಾದಷ್ಟು ಉದ್ದ ಬಲೆಯನ್ನು ತಯಾರಿಸಿದ ತರುವಾಯ ಮೇಲುಗಡೆಗೆ $1\frac{1}{2}$ ಅಂಗುಲ ವ್ಯಾಸ ಹಾಗೂ 2 ಅಂಗುಲ ಉದ್ದ ಸಿಸಂ ಕಟ್ಟಿಗೆಯ ತುಂಡನ್ನು ತೆಗೆದುಕೊಂಡು ಅದನ್ನು ನಳಿಗೆಯಂತೆ ತೋಡುತ್ತಾರೆ. ಇಲ್ಲವೆ 2 ಅಂಗುಲ ಉದ್ದದ ಜಿಂಕೆಯ ಕೋಡನ್ನು ತಂದು ನಳಿಗೆಯಂತೆ ತೋಡುತ್ತಾರೆ. ಇದಕ್ಕೆ 'ಉಂಗುರ' ಇಲ್ಲವೆ 'ಕರಮಲ್' ಎಂದು ಹೆಸರು. ಈ ಉಂಗುರದ 88 ಪ್ರಾರಂಭದ ಕಣ್ಣುಗಳನ್ನು ಒಂದು ಬಿರುಸಾದ ದಾರಕ್ಕೆ ಪೋಣಿಸಿ ಬಿಗಿದು

ಕಟ್ಟುತ್ತಾರೆ. ಕೆಳಭಾಗಕ್ಕೆ ಭಾರದ ಸಲುವಾಗಿ 3 ಇಲ್ಲವೆ 5 ಕಣ್ಣುಗಳಿಗೊಂದರಂತೆ ಸೀಸದ ಮಣಿಯನ್ನು ಕಟ್ಟುತ್ತಾರೆ. ಮಣಿಗಳನ್ನು ಕಟ್ಟಿದ ತರುವಾಯ ಬಿರುಸಾದ, ಗಟ್ಟಿಯಾದ ಮತ್ತು ಗಡುತರ ದಾರವನ್ನು ಮಣಿ ಹಾಗೂ ಬಲೆಯ ಕಣ್ಣುಗಳೊಳಗಿಂದ ಪೋಣಿಸುತ್ತಾರೆ. ದಾರದ ಉದ್ದ ಬಲೆಯ ವ್ಯಾಸವನ್ನು ಅವಲಂಬಿಸಿರುತ್ತದೆ. ಹೊಂಗಿ ಬಲೆಗೆ ಉಂಗುರವಿರುವುದಿಲ್ಲ. ಇದರ ಪ್ರಾರಂಭದ ಕಣ್ಣುಗಳನ್ನು ಬಿರುಸಾದ ದಾರಕ್ಕೆ ಪೋಣಿಸಿ, ಹಗ್ಗವೊಂದಕ್ಕೆ ಕಟ್ಟಿ ಅದನ್ನು ಕೈಗೆ ಕಟ್ಟಿಕೊಳ್ಳುತ್ತಾರೆ. ಬಲೆಯನ್ನು ಬೀಸುವ ನೀರಿನ ಆಳವನ್ನು ಅವಲಂಬಿಸಿ ಬಲೆಯ ಹಗ್ಗದ ಉದ್ದವನ್ನು ನಿರ್ಧರಿಸಬೇಕಾಗುತ್ತದೆ. ಈ ಬಲೆಯ ಕೆಳಗಡೆ ಮೀನುಗಳು ಜೀಳುವ ಹಾಗೆ ಚೀಲದ ವ್ಯವಸ್ಥೆ ಇರುತ್ತದೆ (ವಿವರಗಳಿಗಾಗಿ ಚಿತ್ರ 14 ನೋಡಿರಿ).


ನಿಂಗಿಬಲೆಯ ಮೇಲುಗಡೆಗೆ ಉಂಗುರವಿರುತ್ತದೆ. ಇದರ ಒಳ ಬದಿಗೆ ಬಲೆಯ ಮಧ್ಯದಷ್ಟೇ ಬಿರುಸಾದ ಹಾಗೂ ಗಡುತರವಾದ 22 ದಾರವನ್ನು ಹಾಕುತ್ತಾರೆ. ಈ ಒಂದೊಂದು ದಾರಕ್ಕೆ ಒಂದು, ಇಲ್ಲವೆ ಎರಡು ಕವಲು ದಾರಗಳನ್ನು ಕೂಡಿಸಿರುತ್ತಾರೆ. ಸಣ್ಣ ಬಲೆಗಳಿಗೆ ಒಂದೊಂದೇ ಕವಲು ದಾರವನ್ನು ಹಾಕುವ ಪದ್ಧತಿ ಇದೆ. ಈ ಇಪ್ಪತ್ತೆರಡೂ ದಾರಗಳನ್ನು ಉಂಗುರದಲ್ಲಿಂದ ಹಾಯಿಸಿ, ಮೇಲೆ ಕೈಹಗ್ಗಕ್ಕೆ ಕಟ್ಟುತ್ತಾರೆ.

ಚೀಲದ (ಕಿಂಡಿ)ಬಲೆಯನ್ನು ಗಡುತರವಾದ ನೂಲಿನಿಂದ ಹೆಣೆದಿರುತ್ತಾರೆ. 6 ರಿಂದ 8 ಅಂಗುಲ ಅಳತೆಯ 'ಕಾಲು'ಗಳನ್ನು ಕತ್ತದ ದಾರದಿಂದ ಹೆಣೆದುಕೊಳ್ಳುತ್ತಾರೆ. ಹೆಣೆಯುವಿಕೆ ಮುಂದುವರೆದಂತೆ ವಿವಿಧ ಗಾತ್ರಗಳ ಹಗರನ್ನು ಉಪಯೋಗಿಸುತ್ತಾರೆ. ಪ್ರಾರಂಭದಲ್ಲಿ 16 ರಿಂದ 18 ಅಡಿ ಉದ್ದದವರೆಗೆ, 30 ರಿಂದ 40 ಕಣ್ಣುಗಳನ್ನು ಹಾಕುತ್ತಾರೆ. ಇಂತಹ ನಾಲ್ಕು ತುಂಡು ಬಲೆಗಳನ್ನು ಬೇರೆ ದಾರಗಳಿಂದ ಜೋಡಿಸಿ ಚೌಕೋನಾಕಾರದ ಬಲೆಯನ್ನು ತಯಾರಿಸುತ್ತಾರೆ. ತುದಿಯಲ್ಲಿಯ ಬಲೆಯ ಕಣ್ಣುಗಳನ್ನು ಜೋಡಿಸಿ ಹೊಲಿಯಬೇಕು. ಹೀಗೆ ತಯಾರಾದ ಬಲೆಯು ಚೀಲದಾಕಾರವಾಗಿ ಕಾಣಿಸುತ್ತದೆ. ಬಲೆಯ ಬಾಯಿಗೆ (ಮುಖ) ಕಣ್ಣುಗಳೊಳಗಿಂದ ಹಾದುಹೋಗುವ ನಾಲ್ಕು ಬದಿಗಳಿಗೆ ಗಡುತರವಾದ ಕತ್ತದ ದಾರವನ್ನು ಕಟ್ಟಿರುತ್ತಾರೆ. ಈ ದಾರವು ಬಲೆಯ ಬಾಯಿಯ ತುದಿಯ ನಾಲ್ಕು ಮೂಲೆಗಳಲ್ಲಿ ಉಂಗುರಾಕಾರವಾಗಿ ಇರುವ ಹಾಗೆ ವ್ಯವಸ್ಥೆ ಇರುತ್ತದೆ.

ಗಂಟುಗಳು

ಮಧ್ಯದಲ್ಲಿ ಎಲ್ಲಿಯೂ ಗಂಟುಗಳನ್ನು ಹಾಕದೆ ಸಾಮಾನ್ಯವಾಗಿ ಬಲೆಗಳನ್ನು ಒಂದೇ ದಾರದಿಂದ ರಚಿಸುವುದು ಸಾಧ್ಯವಿಲ್ಲ. ಸಾಮಾನ್ಯವಾಗಿ ಪ್ರತಿಯೊಂದು ಬಲೆಯಲ್ಲೂ ಕಣ್ಣುಗಳಿದ್ದು ಆ ಕಣ್ಣುಗಳನ್ನು ಅತಿ ಕಡಮೆಯೆಂದರೆ ನಾಲ್ಕು ಗಂಟುಗಳನ್ನಾದರೂ ಹಾಕಿ ಹೆಣೆಯಲಾಗಿರುತ್ತದೆ. ರಂಪಣಿ ಮತ್ತು ಬೀಡುಬಲೆಗಳು ದೊಡ್ಡ

ಆಕಾರದ ಬಲೆಗಳಾಗಿದ್ದು ಅವುಗಳನ್ನು ಅನೇಕ ತುಂಡುಬಲೆಗಳನ್ನು ಜೋಡಿಸಿ ತಯಾರಿಸಲಾಗುತ್ತದೆ. ತುಂಡುಬಲೆಗಳನ್ನು ಕೂಡಿಸುವಾಗ ಗಂಟುಗಳನ್ನು ಹಾಕಲೇಬೇಕಾಗುತ್ತದೆ. ನೀರಿನಲ್ಲಿ ಕಲ್ಲುಮೀನು (ಕಾಲ್ವಾ), ನೀಲೆಕಲ್ಲು, ಮುಳ್ಳುಗೆರೆ ಮುಂತಾದವುಗಳಿರುವುದರಿಂದ ಬಲೆಯನ್ನು ಬೀಸಿ, ಜಗ್ಗುವಾಗ ಇವುಗಳಿಗೆ ಸಿಕ್ಕಿಕೊಂಡರೆ ಬಲೆಯು ಹರಿಯುವ ಸಂಭವ ಹೆಚ್ಚು. ಮೀನುಗಾರನು ಈ ಬಲೆಯ ನಿರ್ಮಾಣದಲ್ಲಿ ಅಪಾರ ಶ್ರಮ, ವೇಳೆ ಮತ್ತು ಹಣವನ್ನೂ ವ್ಯಯಿಸಿರುತ್ತಾರೆ. ದಿನನಿತ್ಯ ಬಲೆಯ ಸುಸ್ಥಿತಿಯನ್ನೇ ಅವರ ಉಪಜೀವನ ಮಾರ್ಗ ಅವಲಂಬಿಸಿರುತ್ತದೆ. ಬಲೆ ಹಾಳಾದಾಗೆಲ್ಲ ಹೊಸ ಬಲೆಯ ರಚನೆ ಸಾಧ್ಯವಾಗುವುದಿಲ್ಲ. ಇಂಥ ಪ್ರಸಂಗದಲ್ಲಿ ಹರಿದ ಬಲೆಯನ್ನು ಗಂಟು ಹಾಕಿ ಜೋಡಿಸಿ ಅದನ್ನೇ ಉಪಯೋಗಿಸದೇ ಗತ್ಯಂತರವಿರುವುದಿಲ್ಲ.



ಚಿತ್ರ 15: ಗಂಟುಗಳು (1–9)

ಬಲೆ ಹೆಣಿಗೆ, ಇಲ್ಲವೆ ದುರಸ್ತಿಯಲ್ಲಿ ಉಪಯೋಗಿಸುವ ಗಂಟುಗಳು ಹಲವಾರು ತೆರನಾಗಿರುತ್ತವೆ. ಅವುಗಳೆಂದರೆ: (1) ಸರಿಗಂಟು (2) ಸರಗಂಟು (3) ಬಲೆಗಳ

ಗಂಟು (4) ಗೂಟ ಗಂಟು (5) ಸರಿಗೆ ಗಂಟು (6) ಒಂದು ಪೂರ್ಣ ಸುತ್ತು ಎರಡು ಅರ್ಧ ಸುತ್ತಿನ ಗಂಟು (7) ಹುಟ್ಟಿನ ಗಂಟು (8) ಕವಲು ಗಂಟು, (9) ಜೋಡಿ ಗಂಟು, ಇತ್ಯಾದಿ.

(1) **ಸರಿಗಂಟು (ರೀಫ್‌ನಾಟ್):** ಇದಕ್ಕೆ 'ಗಂಡಸರ ಗಂಟು' 'ಬಿರಸು ಗಂಟು' ಎಂದೂ ಹೆಸರುಗಳಿವೆ. ಮೀನುಗಾರರು ತಮ್ಮ ತುಂಡು ಬಲೆಗಳನ್ನು ಒಂದ ಕ್ಕೊಂದು ಕೂಡಿಸುವಾಗ ಅದಿ, ಕಳಿಗಳ ಆಸರೆಯ ದಾರದಲ್ಲಿ ಈ ಗಂಟನ್ನು ಉಪ ಯೋಗಿಸುತ್ತಾರೆ. ಈ ಗಂಟು ಜಗ್ಗಿದಷ್ಟು ಬಿಗುವಾಗುವುದೇ ಹೊರತು ಬಿಚ್ಚಿಹೋಗು ವುದಿಲ್ಲ. ಪ್ರಸಂಗಬಿದ್ದಾಗ ಕೂಡಲೆ ಬಿಡಿಸಲು ಸಹ ಬರುತ್ತದೆ. ಆದುದರಿಂದ ಸಾಮಾನ್ಯ ವಾಗಿ ಈ ಗಂಟನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ [ಚಿತ್ರ 15(1)].

(2) **ಸರಗಂಟು:** ಈ ಗಂಟನ್ನು ತಾತ್ಕಾಲಿಕ ಹಾಗೂ ಬೇಗನೆ ಬಿಚ್ಚಬೇಕಾದ ಪ್ರಸಂಗಗಳಲ್ಲಿ ಉಪಯೋಗಿಸುತ್ತಾರೆ. ಮೀನುಗಾರರು ರಂಪಣಿಬಲೆಯನ್ನು ಜಗ್ಗು ವಾಗ ಹಗ್ಗವು ಹರಿದರೆ ಬಲೆಯನ್ನು ಸಮುದ್ರದಿಂದ ದಂಡೆಗೆ ತರಲು ತಾತ್ಕಾ ಲಿಕವಾಗಿ ಇಂತಹ ಸರಿಗಂಟನ್ನು ಹಾಕುತ್ತಾರೆ. ಈ ಗಂಟು. ಚಿತ್ರ 15(2) ಗುರುತಿಸಿದ ದಾರದ ತುದಿಯನ್ನು ಜಗ್ಗಿದರೆ ಗಂಟು ಬಿಚ್ಚಿಹೋಗುವುದು. ಈ ಗಂಟು ಸರಿಗಂಟಿನ ಹಾಗೆಯೇ ಇದ್ದು ಬೇಗನೆ ಬಿಚ್ಚಲು ಬರುವಂತೆ ವ್ಯವಸ್ಥೆ ಇರುವುದರಿಂದ ಇದಕ್ಕೆ ಸರಗಂಟು ಎಂದು ಹೆಸರು ಬಂದಿದೆ.

(3) **ಬಲೆಗಂಟು (ಜಾಲದ ಗಂಟು):** ಬಲೆಗಂಟುಗಳನ್ನು ಬಲೆಹೆಣೆಯು ವಾಗ ಮಾತ್ರ ಉಪಯೋಗಿಸಲಾಗುತ್ತದೆ. ಬಲೆಯ ಕಣ್ಣುಗಳಿಗೆ ಈ ತೆರನಾದ ಗಂಟನ್ನು ಹಾಕಬೇಕಾದರೆ ಹಗರನ್ನು ಉಪಯೋಗಿಸಬೇಕಾಗುತ್ತದೆ. ಇದೇ ಬಗೆಯ ಗಂಟನ್ನು ಭಿನ್ನ ಭಿನ್ನ ಗಾತ್ರದ ತುಂಡು ಬಲೆಗಳನ್ನು ಜೋಡಿಸಲು ಉಪಯೋಗಿಸುತ್ತಾರೆ. ಈ ತೆರನಾದ ಗಂಟಿಗೆ ಇಂಗ್ಲಿಷಿನಲ್ಲಿ 'ಷೀಟ್ ಬೆಂಡ್' ಅನ್ನುತ್ತಾರೆ. ಸಾಮಾನ್ಯವಾಗಿ ಬಲೆಯನ್ನು ಹೆಣೆಯುವಾಗ ಬಲೆಗಂಟನ್ನೇ ಉಪಯೋಗಿಸುತ್ತಾರೆ [ಚಿತ್ರ 15(3)].

(4) **ಗೂಟದ ಗಂಟು (ಕ್ಲೋವ್ ಹಿಚ್):** ದನಕರುಗಳನ್ನು ಗೂಟಕ್ಕೆ ಕಟ್ಟುವಾಗ ಇಲ್ಲವೆ, ಗಿಡಮರಗಳನ್ನು ಎಳೆದುಕೊಂಡು ಹೋಗುವಾಗ ಹಾಕುವ ಗಂಟಿದು [ಚಿತ್ರ 15(4)]. ಮೀನುಗಾರರು ರಂಪಣಿ ಬಲೆಯ ಎರಡು ಮಗ್ಗಲಿಗೆ ಕಟ್ಟುವ ದಂಡಿಗೆಗೆ ಈ ಗಂಟನ್ನು ಹಾಕುತ್ತಾರೆ. ಈ ದಂಡಿಗೆಯ ಮಧ್ಯದಲ್ಲಿ ಹಗ್ಗ ಕಟ್ಟುವಾಗಲೂ, ದೋಣಿಗೆ ಲಂಗರು ಕಟ್ಟುವಾಗಲೂ ಈ ಗಂಟನ್ನೇ ಉಪಯೋಗಿ ಸುತ್ತಾರೆ. ಬಲೆಯನ್ನು ಜಗ್ಗಿದಂತೆ ಗಂಟು ಗಟ್ಟಿಯಾಗಿ ಕೂಡುತ್ತದೆ. ಬಲೆಯು ಹರಿದರೂ, ದಂಡಿಗೆಯು ಮುರಿದರೂ ಇದಕ್ಕೆ ಕಟ್ಟಿದ ಗಂಟು ಮಾತ್ರ ಬಿಚ್ಚುವುದಿಲ್ಲ.

(5) **ಸರಿಗೆಗಂಟು:** ಇದನ್ನು 'ತಂತಿಯ ಗಂಟು' ಎಂದೂ ಕರೆಯುತ್ತಾರೆ [ಚಿತ್ರ 15(5)]. ತಂತಿ ಇಲಾಖೆಯವರು ತಂತಿಗಳನ್ನು ಕೂಡಿಸುವಾಗ ಈ ತೆರನಾದ ಗಂಟನ್ನು ಉಪಯೋಗಿಸುತ್ತಾರೆ. ಅದಲ್ಲದೆ. ತೇಗಿಸ, ಬಯಣಿ ಮುಂತಾದವುಗಳನ್ನು ಒಂದಕ್ಕೊಂದು ಕೂಡಿಸುವಾಗಲೂ ಈ ಗಂಟನ್ನು ಹಾಕುತ್ತಾರೆ.

(6) **ಒಂದು ಪೂರ್ಣ ಸುತ್ತು ಎರಡು ಅರ್ಧ ಸುತ್ತಿನ ಗಂಟು (ಒನ್ ರೌಂಡ್ ಟರ್ನ್ ಅಂಡ್ ಟೂ ಹಾಫ್ ಹಿಚ್ಚಿಸ್):** ಇದನ್ನು ಕೆಲವರು 'ಮರ ಗಂಟು' ಎನ್ನುತ್ತಾರೆ [ಚಿತ್ರ 15(6)]. ವಿಶೇಷವಾಗಿ ಕಡಿಯುವ ಮರಗಳಿಗೆ ಕಟ್ಟುವಾಗ ಇಲ್ಲವೆ ತಂಬು(ಡೇರೆ)ಗಳನ್ನು ನಿಲ್ಲಿಸುವಾಗ ಉಪಯೋಗಿಸುವ ಗಂಟಿದು. ಮೀನುಗಾರರು ತಮ್ಮ ದೋಣಿಗಳಿಗೆ ಲಂಗರು ಕಟ್ಟುವಾಗ ಮತ್ತು ದೋಣಿಯನ್ನು ಗೂಟಕ್ಕೆ ಕಟ್ಟು ವಾಗ ಈ ಪ್ರಕಾರದ ಗಂಟುಗಳನ್ನು ಹಾಕುತ್ತಾರೆ. ಇದು ಸುಲಭವಾಗಿ ಕಟ್ಟಲೂ ಬಿಚ್ಚಲೂ ಬರುವಂತಿರುತ್ತದೆ. ಆದುದರಿಂದ ವೇಳೆಯ ಉಳಿತಾಯದ ದೃಷ್ಟಿಯಲ್ಲಿ ಈ ಗಂಟು ಬಹು ಪ್ರಯೋಜನಕಾರಿ.

(7) **ಹುಟ್ಟಿನ ಗಂಟು:** ಜೇನು ನೊಣಗಳ ಹುಟ್ಟಿನಂತೆ ಗಂಟು ಬೀಳುವುದ ರಿಂದ ಇದನ್ನು ಹುಟ್ಟಿನಗಂಟು ಎನ್ನುತ್ತಾರೆ [ಚಿತ್ರ 15(7)]. ಈ ಗಂಟನ್ನು ಸುಲಭ ವಾಗಿ ಬಿಡಿಸಲು ಬರುವುದಿಲ್ಲ. ಈ ಉದ್ದೇಶದಿಂದಲೇ ಈ ಗಂಟನ್ನು ಗಾಳ ಕಟ್ಟುವಾಗ, ತೇಗಿಸ, ಬಯಣಿ ಮುಂತಾದವುಗಳನ್ನು ಒಂದಕ್ಕೊಂದು ಕೂಡಿಸುವಾಗ ಉಪಯೋಗಿ ಸುತ್ತಾರೆ. ತೇಗಿಸ ಮತ್ತು ಬಯಣಿಗಳು ನುಣುಪಾಗಿರುತ್ತವೆ. ಇವುಗಳನ್ನು ಒಂದ ಕ್ಕೊಂದು ಜೋಡಿಸುವಾಗ ಸರಿಗಂಟು, ಸರಗಂಟು ಮುಂತಾದವುಗಳನ್ನು ಹಾಕಿದರೆ ನುಸುಳಿಹೋಗುತ್ತವೆ. ಆದುದರಿಂದ ಇವುಗಳನ್ನು ಜೋಡಿಸುವಾಗ ಹುಟ್ಟಿನ ಗಂಟನ್ನೇ ಉಪಯೋಗಿಸಬೇಕಾಗುತ್ತದೆ.

(8) **ಕವಲುಗಂಟು:** ಈ ಗಂಟನ್ನು ಬಲೆಗಳ ರಚನೆಯಲ್ಲಿ, ವಿಶೇಷವಾಗಿ ಸೀಸದ ಮಣಿಗಳನ್ನು ಪೋಣಿಸುವಾಗ ಉಪಯೋಗಿಸುತ್ತಾರೆ. ಮುಖ್ಯದಾರದ ಹುರಿ ಯನ್ನು ಒಡೆದು ಕವಲುದಾರದ ಒಂದು ತುದಿಯನ್ನು ತುಂಬುತ್ತಾರೆ. ಹೀಗೆ ತುಂಬುವ ಬದಲು ಗಂಟುಗಳನ್ನು ಹಾಕಿದ್ದಾದರೆ ಬೀಸುವಾಗಲೂ, ಜಗ್ಗುವಾಗಲೂ, ಗಂಟುಗಳು ಬಲೆಯ ಕಣ್ಣುಗಳಲ್ಲಿ ಸೇರಿ, ತೊಂದರೆಯಾಗಬಹುದು. ಅಲ್ಲದೆ, ಬಲೆಯು ಗಂಟು ಗಳಿಂದ ತುಂಬಿ, ಒರಟಾಗಿ ಕಾಣಿಸುತ್ತದೆ. ನಿಂಗಿಬಲೆಯಲ್ಲಿನ 22 ಎಳೆಗಳಿಗೆ ಕವಲು ಗಂಟುಗಳನ್ನು ಹಾಕಿರುತ್ತಾರೆ. ಈ ಗಂಟು ಗಟ್ಟಿಯಾಗಿರುವುದಲ್ಲದೆ ಒರಟಾಗಿಲ್ಲದೆ ಒಂದೇ ದಾರದಂತೆ ಕಾಣಿಸುತ್ತದೆ [ಚಿತ್ರ 15(8)].

(9) **ಜೋಡಿಗಂಟು:** ಈ ಗಂಟು ಸರಿಗಂಟಿನಂತೆಯೇ ಇರುತ್ತದೆ. ಆದರೆ ದಾರದ ಎರಡು ತುದಿಗಳಿಗೂ ಸರಿಗಂಟುಗಳನ್ನು ಹಾಕಿರುತ್ತಾರೆ. ಗಂಟಿನ ಎರಡು ದಾರಗಳನ್ನು ಜಗ್ಗಿದರೆ ಎರಡು ಗಂಟುಗಳು ಒಂದಕ್ಕೊಂದು ಕೂಡುತ್ತವೆ. ಇದೇ

ಜೋಡಿಗಂಟು [ಚಿತ್ರ 15(9)]. ಈ ಗಂಟನ್ನು ವಿಶೇಷವಾಗಿ ಗಾಳದ ತಯಾರಿಕೆಯಲ್ಲಿ, ತೆಂಗಿಸ ಮತ್ತು ಬಯಣಿಗಳನ್ನು ಕೂಡಿಸುವಾಗ ಉಪಯೋಗಿಸುತ್ತಾರೆ.

ಬಲೆಗಳಿಗೆ ಉಪಯೋಗಿಸುವ ಎಳೆ (ನಾರು) ಹಾಗೂ ರಸಗಳು

ಬಲೆಗಳ ತಯಾರಿಕೆಯಲ್ಲಿ ವಿವಿಧ ರೀತಿಯ, ವಿವಿಧ ಮೂಲಗಳ ಎಳೆಗಳನ್ನು ಉಪಯೋಗಿಸುತ್ತಾರೆ. ಈ ಎಳೆ(ನಾರು)ಗಳು ಗಟ್ಟಿಯಾಗಲು ಮತ್ತು ನೀರಿನಲ್ಲಿ ನೆನೆದು ಹಾಳಾಗದಂತೆ ಮಾಡಲು ಅನೇಕ ರಸಗಳನ್ನು ಉಪಯೋಗಿಸುತ್ತಾರೆ.

ಎಳೆಗಳು

ಬಲೆಗಳನ್ನು ತಯಾರಿಸಲು ಸಣಬು, ಹತ್ತಿ, ಲಿನನ್ ಹಾಗೂ ಹಲವಾರು ತೆರನಾದ ಕೃತ್ರಿಮ ವಸ್ತುಗಳ ಎಳೆಗಳನ್ನು ಉಪಯೋಗಿಸುತ್ತಾರೆ. ಇವುಗಳಲ್ಲಿ ಮುಖ್ಯವಾದ ಹಾಗೂ ಅತಿ ಸಾಮಾನ್ಯವಾದ ಎಳೆಗಳೆಂದರೆ ಸಣಬಿನ ನಾರು ಮತ್ತು ಹತ್ತಿಯ ಎಳೆಗಳು. ಬಲೆಗೆ ಆಸರೆಗಳನ್ನು ಕಟ್ಟಲು ಕೊಳಗಿನ ನಾರಿನಿಂದ ತಯಾರಿಸಿದ ಹಗ್ಗವನ್ನು ಉಪಯೋಗಿಸುತ್ತಾರೆ.

ಸಣಬಿನ ನಾರು 2 ರಿಂದ 4 ಅಡಿ ಉದ್ದ ಇರುತ್ತದೆ. ಅಗಲವಾದ ಕಲ್ಲು ಅಥವಾ ಸಿಮೆಂಟ್ ನೆಲದ ಮೇಲೆ ಇಟ್ಟು ಕಾಲಿನಿಂದ ಚೆನ್ನಾಗಿ ತುಳಿದು ಸಣಬಿನ ನಾರಿನ ಬಿರುಸುತನ ಕಡಮೆ ಮಾಡುತ್ತಾರೆ. ನಂತರ ಒಂದೊಂದೇ ನಾರಿನ ಎಳೆಯನ್ನು ತೆಗೆದುಕೊಂಡು ಅದನ್ನು ತಮ್ಮ ತೋರಬೆರಳಿನಿಂದ ನೀಳವಾಗಿ (ನೆಟ್ಟಗೆ) ಸೀಳುತ್ತಾರೆ. ಸೀಳುವ ಕ್ರಿಯೆಗೆ 'ಹಿಂಜುವುದು' ಎನ್ನುತ್ತಾರೆ. ಸಿದ್ಧವಾದ ನಾರು ಹಿಂಜುನಾರು. ನಂತರ ಉದ್ದ ತಕಲಿಯ ಸಹಾಯದಿಂದ ನೂಲನ್ನು ತೆಗೆಯುತ್ತಾರೆ.

ತಕಲಿಯು, ಭಾರವಾದ ಕಟ್ಟಿಗೆಯ ನಾಲ್ಕೈದು ಅಂಗುಲ ವ್ಯಾಸ, ಒಂದು ಅಂಗುಲ ದಪ್ಪ ಅರ್ಧಗೋಲಾಕಾರದ ಗಾಲಿಗೆ, ಅದರ ಮಧ್ಯಬಿಂದುವಿನಲ್ಲಿ ಅರ್ಧ ಅಂಗುಲ ವ್ಯಾಸವುಳ್ಳ ರಂಧ್ರವನ್ನು ತೆಗೆದು ಅದಕ್ಕೆ ಸರಿಯಾದ ಗಾತ್ರದ ಬಿದುರಿನ ಕಡ್ಡಿಯನ್ನು ಸೇರಿಸಿ, ಸಿದ್ಧಪಡಿಸಿದ ಸಾಧನ. ಬಿದುರಿನ ಕಡ್ಡಿಯು ಸಾಧಾರಣವಾಗಿ $1\frac{1}{2}$ ಅಡಿ ಉದ್ದ ಇರುತ್ತದೆ. ಗಾಲಿಯ ಬುಡದಲ್ಲಿ ಈ ಕಡ್ಡಿಯು V ಆಕಾರದಲ್ಲಿದ್ದು $1-1\frac{1}{2}$ ಅಂಗುಲ ಉದ್ದವಿರುತ್ತದೆ. ಮೇಲ್ಭಾಗವು ಸಪೂರಾಗುತ್ತ ಹೋಗಿ ತುದಿಯಲ್ಲಿ ಮೊನೆಯಾಗಿರುತ್ತದೆ. ಜಿನುಗಾದ ನೂಲನ್ನು ನೂಲುವಾಗ ಸಣ್ಣ ತಕಲಿಯನ್ನೂ, ಗಡುತರವಾದ ನೂಲನ್ನು ನೂಲುವಾಗ ದೊಡ್ಡ ತಕಲಿಯನ್ನೂ ಉಪಯೋಗಿಸುತ್ತಾರೆ.

ಹಿಂಜಿದ ನಾರಿನ ಎಳೆಯನ್ನು ಎಡಗೈಯಲ್ಲಿ, ತಕಲಿಯನ್ನು ಬಲಗೈಯಲ್ಲಿ, ತಕಲಿಯ ಕಡ್ಡಿಯನ್ನು ನಡುಬೆರಳು ಮತ್ತು ತೋರಬೆರಳುಗಳ ನಡುವೆ ಇರಿಸಿ ಹೆಬ್ಬೆರಳನ್ನು ಮುಂದಕ್ಕೆ ನೂಕಿ, ತೋರಬೆರಳನ್ನು ಹಿಂದಕ್ಕೆ ಎಳೆದು, ತಕಲಿಯನ್ನು ತಿರುಗಿಸಿ ನೂಲನ್ನು ನೂಲುತ್ತಾರೆ. ಎಡಗಾಲಿನ ತೊಡೆಗೆ ತಕಲಿಯನ್ನಿಟ್ಟುಕೊಂಡು

ಒಳಕ್ಕೆ ಎಳೆದು ನೂಲನ್ನು ಹೊಸೆಯುತ್ತಾರೆ. ಈ ರೀತಿಯಾಗಿ ಹೊಸೆದ ನೂಲನ್ನು ತಕಲಿಗೆ ಸುತ್ತುತ್ತ ಹೋಗುತ್ತಾರೆ. ಆ ತಕಲಿಯು ತುಂಬಿದ ಮೇಲೆ ಇನ್ನೊಂದು ತಕಲಿಗೆ ಸುತ್ತಿಡುತ್ತಾರೆ. ತಕಲಿಗೆ ಸುತ್ತಿಟ್ಟ ನೂಲನ್ನು ಬೇಕಾದ ಸಂಖ್ಯೆಯಲ್ಲಿ (2, 3 ಅಥವಾ 4) ಎಳೆ ಕೂಡಿಸಿ, ಚಂಡಿನಾಕಾರದ ನೂಲುಂಡೆಯನ್ನು ತಯಾರಿಸುತ್ತಾರೆ. ಆಮೇಲೆ ತಕಲಿ ಅಥವಾ ರಾಟೆಯ ಸಹಾಯದಿಂದ ಹುರಿ ಹಾಕುತ್ತಾರೆ. ಸಾಮಾನ್ಯವಾಗಿ, ಎರಡು, ಮೂರು ಎಳೆಯನ್ನು ಕೂಡಿಸಿ ದಾರವನ್ನು ತಯಾರಿಸುತ್ತಾರೆ. ದಾರ ತಯಾರಿಸಿದ ತರುವಾಯ, ಪುನಃ ಚೆಂಡಿನಾಕಾರದ ದಾರದ ಉಂಡೆಯನ್ನು ತಯಾರಿಸುತ್ತಾರೆ. ಈ ಉಂಡೆಗಳನ್ನು ನಾಲ್ಕೈದು ದಿನಗಳವರೆಗೆ ನೀರಿನಲ್ಲಿಡುತ್ತಾರೆ. ಚೆನ್ನಾಗಿ ನೆನೆದ ಮೇಲೆ ಅದನ್ನು ಹೊರತೆಗೆದು ತೆಂಗಿನ ಸಿಪ್ಪೆಯ ಕತ್ತರದ ಭಾಗಕ್ಕೆ ತೀಡುತ್ತಾರೆ.

ಒಂದು ಗೂಟ ಇಲ್ಲವೆ ಮರಕ್ಕೆ ತೆಂಗಿನ ಸಿಪ್ಪೆಯನ್ನು ಕಟ್ಟಿ, ದಾರವನ್ನು ಕತ್ತರಿಯಂತೆ ಹಾಕುತ್ತಾರೆ. ಉಂಡೆಯದಾರ ಎಡಗೈಯಲ್ಲಿ, ತೀಡಿ ಕೊಳೆತೆಗೆದ ದಾರ ಬಲಗೈಯಲ್ಲಿ ಹಿಡಿದಿರುತ್ತಾರೆ. ಬಲಗೈಯಿಂದ ಪ್ರಾರಂಭಿಸಿ, ದಾರವನ್ನು ಮೊದಲು ಬಲಗೈಯಿಂದ ನಂತರ ಎಡಗೈಯಿಂದ ಜಗ್ಗಿ ಕೆಳಗೆ ಬಿಡುವರು. ಕ್ರಮವಾಗಿ ಹೀಗೆ ತೀಡಿದರೆ ದಾರದಲ್ಲಿರುವ ಕೊಳೆ ಹಾಗೂ ಉರುಟುತನ ಹೋಗಿ ನೂಲು ಮೆದುವಾಗುತ್ತದೆ. ಆಗ ದಾರವು ಶುಭ್ರವಾಗಿಯೂ, ಪಾಲಿಶ್ ಮಾಡಿದಂತೆಯೂ ಕಾಣಿಸುವುದಲ್ಲದೆ, ಸಮಗಾತ್ರವುಳ್ಳದ್ದೂ ಆಗುತ್ತದೆ. ಇದನ್ನು ಉರಿಬಿಸಿಲಿನಲ್ಲಿ ಒಣಗಿಸಿ, ಉಂಡೆ ಮಾಡಿ ಇಡುತ್ತಾರೆ.

ಸಣಬಿನ ನೂಲು ಹೆಚ್ಚು ತಾಳಿಕೆ ಬರುತ್ತದೆ. ನೂಲಿನ ದಾರದಂತೆ ಇದು ನೀರಿನಲ್ಲಿ ಬೇಗನೆ ಕೊಳೆಯುವುದಿಲ್ಲ. ಇದು ಲಿನನ್ ದಾರಕ್ಕಿಂತಲೂ ಹೆಚ್ಚು ಗಟ್ಟಿಯಾಗಿರುತ್ತದೆ. ಆದುದರಿಂದಲೇ ಬಹಳ ಜನ ಮೀನುಗಾರರು ತಮ್ಮ ಬಲೆಗಳನ್ನು ತಯಾರಿಸಲು ಹೆಚ್ಚಾಗಿ ಸಣಬಿನ ದಾರವನ್ನೇ ಉಪಯೋಗಿಸುತ್ತಾರೆ.

ಅನೇಕರು ಬಲೆಯ ತಯಾರಿಕೆಗಾಗಿ ಹತ್ತಿಯ ನೂಲನ್ನೂ ಉಪಯೋಗಿಸುತ್ತಾರೆ. ಆದರೆ ಸಣಬಿನ ದಾರದಂತೆ ಈ ನೂಲನ್ನು ತಾವೇ ತಯಾರಿಸಿ, ಉಪಯೋಗಿಸದೆ 'ಮಿಲ್'ನಲ್ಲಿ ತಯಾರಾದ ನೂಲನ್ನೇ ಉಪಯೋಗಿಸುತ್ತಾರೆ. ಪ್ರಾರಂಭದಲ್ಲಿ ಮಿಲ್ಲಿನ ಒಂದು ಗಾತ್ರದ ದಾರವನ್ನು ಕೊಂಡು, ಮೀನುಗಾರರು ತಮಗೆ ಬೇಕಾದ ದಪ್ಪ ಗಾತ್ರದ ದಾರಗಳ ಎರಡು, ಮೂರು ಇಲ್ಲವೆ ನಾಲ್ಕು ಎಳೆಗಳನ್ನು ಕೂಡಿಸಿ ತಯಾರಿಸುತ್ತಿದ್ದರು. ಆದರೆ ಇಂದು ಬೇಕಾದ ಗಾತ್ರದ ಬೇರೆ ಬೇರೆ ದಾರಗಳು ಮಿಲ್ಲಿನಲ್ಲಿಯೇ ತಯಾರಾಗಿ ಅವರಿಗೆ ದೊರಕುತ್ತವೆ.

ಮೀನುಗಾರರು ಹೆಚ್ಚಾಗಿ 20×9, 20×8, 20×4, 20×3, 18×9, 16×9 ನಂಬರ್ ದಾರಗಳನ್ನು ಬಲೆಗಳಿಗೆ ಹೆಚ್ಚಾಗಿ ಉಪಯೋಗಿಸುತ್ತಾರೆ. 20×4, 20×3 ನಂಬರ್ ದಾರಗಳಿಂದ ಪಟ್ಟೆಬಲೆ, ಗೋರುವಬಲೆ, ಮಡ್ಲೆಬಲೆ ತಯಾರಿ

ಸಿದರೆ. 20×9 ನಂಬರ್ ದಾರದಿಂದ ಚಿಕ್ಕಕಣ್ಣುಳ್ಳ ಚಿಕ್ಕ ರಂಪಣಿ ಬಲೆಯನ್ನೂ, 18×9 ನಂಬರ್ ದಾರದಿಂದ ದೊಡ್ಡ ಕಣ್ಣುಳ್ಳ ದೊಡ್ಡ ರಂಪಣಿಯ ಬಲೆಯನ್ನೂ ತಯಾರಿಸುತ್ತಾರೆ. ಈ ದಾರಗಳಿಂದ ತಯಾರಿಸಿದ ಬಲೆಗಳು 1 ರಿಂದ 2 ವರ್ಷಗಳವರೆಗೆ ತಾಳಿಕೆ ಬರುತ್ತವೆ. ಹತ್ತಿಯ ನೂಲಿನಿಂದ ಸಿದ್ಧವಾದ ದಾರವು ಮೆತ್ತಗಿದ್ದು ಬಲೆ ಹೆಣೆಯಲು ಸುಲಭವಾಗುತ್ತದೆ. ಇದರಿಂದ ತಯಾರಿಸಿದ ಬಲೆಯೂ ಕೂಡ ಮೆತ್ತಗಿರುತ್ತದೆ. ಆದರೆ ನೀರಿನಲ್ಲಿ ಬೇಗ ಕೊಳೆಯುವುದರಿಂದ ಸಣಬಿನ ದಾರದ ಬಲೆಯಷ್ಟು ಇದು ತಾಳಿಕೆ ಬರುವುದಿಲ್ಲ. ಬಹುಕಾಲದಿಂದ ಬಲೆಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿದ್ದ ವಸ್ತುಗಳಿವು. ಇವುಗಳಲ್ಲದೆ ಪುಂಡಿನಾರು, ಕಲ್ಲುನಾರು ಹಾಗೂ ಕೆಲವು ಕೃತ್ರಿಮನೂಲು ಮೊದಲಾದುವುಗಳಿಂದಲೂ, ಹುರಿ ತಯಾರಿಸಿ ಬಲೆಗಳನ್ನು ರಚಿಸುತ್ತಾರೆ. ಇಂದು ಹಲವಾರು ಕೃತ್ರಿಮ ನೂಲುಗಳು ಬಳಕೆಯಲ್ಲಿ ಬಂದಿವೆ. ಅವುಗಳನ್ನೇ ಹೆಚ್ಚಾಗಿ ಬಲೆಗಳ ರಚನೆಯಲ್ಲಿ ಉಪಯೋಗಿಸುತ್ತಾರೆ. ಇಲ್ಲಿ ಬಲೆಗಳಿಗೆ ಬೇಕಾಗುವ ವಸ್ತುಗಳನ್ನೇ ಹಗ್ಗಗಳನ್ನು ತಯಾರಿಸಲೂ ಉಪಯೋಗಿಸುತ್ತಾರೆ. ಹಗ್ಗದ ತಯಾರಿಕೆಯಲ್ಲಿ ಕತ್ತ (ತೆಂಗಿನನಾರು) ಹಾಗೂ ಕೊಳಗಿನ ನಾರೂ ಕೂಡ ಹೆಚ್ಚಾಗಿ ಬಳಸಲ್ಪಡುತ್ತದೆ. ದೇಶಿಯ ವಸ್ತುಗಳಿಂದ ತಯಾರಿಸಿದ ಹಗ್ಗಗಳಲ್ಲಿ ಕತ್ತದಿಂದ ತಯಾರಿಸಿದ ಹಗ್ಗಗಳೇ ಬಹುಕಾಲ ಬಾಳುತ್ತವೆ.

ಬಲೆಗಳಿಗೆ ಹಾಕುವ ಅಸರೆಗಳು: ಮೀನುಗಾರರು ಬಲೆಗಳ ರಕ್ಷಣೆಗಾಗಿಯೂ ಚೆಂದ ಕಾಣಬೇಕೆಂದೂ ತಯಾರಿಸಿದ ಬಲೆಗಳಿಗೆ ಅಂಚುಗಳನ್ನು ಹಾಕುತ್ತಾರೆ. ಈ ಅಂಚುಗಳು ಒಂದು ವಿಶೇಷ ತೆರನಾಗಿದ್ದು, ಇದಕ್ಕೆ **ಅಸರೆ** ಎನ್ನುತ್ತಾರೆ. ಇವು **ಕುಳಿ** (ಬೆಂಡು) ಮತ್ತು **ಅಡಿ** – ಹೀಗೆ ಎರಡು ಪ್ರಕಾರದವುಗಳಾಗಿವೆ. ಕುಳಿ ಅಸರೆಯನ್ನು ಬಲೆಯ ಮೇಲ್ಬದಿಗೂ ಅಡಿ ಅಸರೆಯನ್ನು ಬಲೆಯ ಕೆಳಬದಿಗೂ ಹಾಕುತ್ತಾರೆ. ಈ ಅಸರೆಗಳಿಗೆ ವಿಶೇಷವಾಗಿ ಕೊಳಗಿನ (ಕೋಡಿ) ನಾರು, ಸಣಬಿನ ನಾರು ಇಲ್ಲವೆ. ಹತ್ತಿಯ ನೂಲುಗಳನ್ನು ಉಪಯೋಗಿಸುತ್ತಾರೆ.

ರಸಗಳು

ಬಲೆಗಳ ರಚನೆಯಲ್ಲಿ ಉಪಯೋಗಿಸುವ ವಸ್ತುಗಳಿಗೆ ಹಾಕುವ ವಿವಿಧ ರಸಗಳ ಪಾತ್ರ ಬಹು ಮುಖ್ಯ. ಹವಾಮಾನದ ಬದಲಾವಣೆಗಳಿಗೆ ಒಳಗಾಗಿ ಹಾಳಾಗದಿರಲೂ, ಹುಳಗಳು ಬಲೆಯನ್ನು ಕಡಿದುಹಾಕದಂತಿರಲೂ ಬಲೆಗಳಿಗೆ ರಸವನ್ನು ಹಾಕುತ್ತಾರೆ. ಅಲ್ಲದೆ, ಈ ರಸಗಳು ಬಲೆಗಳಿಗೆ ಹೊಳಪು ಮತ್ತು ಒಂದು ರೀತಿಯ ಅಲಂಕಾರವನ್ನೂ ಕೊಡುತ್ತವೆ. ಮತ್ತಿಚೆಲ್ಲಿಯ ರಸ, ತೆಂಗಿನಕಾಯಿಯ ರಸ, ತೆಂಬ್ರುಕಾಯಿಯ ರಸ ಮತ್ತು ಹಲವು ವನಸ್ಪತಿ ಹಾಗೂ ರಾಸಾಯನ ದ್ರವ್ಯಗಳಿಂದ ತಯಾರಿಸಿದ ರಸಗಳನ್ನು ಈ ಉದ್ದೇಶಕ್ಕಾಗಿ ಉಪಯೋಗಿಸುತ್ತಾರೆ. ರಸದಲ್ಲಿ ಅದ್ದಿದ ಬಲೆಯ ನೂಲು ನೀರಿನಲ್ಲಿ ಕೊಳೆಯುವುದಿಲ್ಲ; ಬೇಗ ಹರಿಯುವುದಿಲ್ಲ; ಹುರಿಯು ಸಡಿಲಗೊಳ್ಳುವುದಿಲ್ಲ. ಇದರಿಂದ

ಬಲೆಗಳು ಗಟ್ಟಿಯಾಗಿ ಹೆಚ್ಚುಬಾಳಿಕೆ ಬರುತ್ತವೆ. ರಸಗಳಲ್ಲಿ ಅದ್ದಿದ ಬಲೆಗಳು ತಮ್ಮ ಮೂಲ ಬಣ್ಣವನ್ನು ಕಳೆದುಕೊಂಡು ಬೇರೆ ತೆರನಾಗಿ, ನೀರಿನ ಬಣ್ಣವನ್ನೇ ಸಾಮಾನ್ಯವಾಗಿ ಹೊಂದಿ, ಬಲೆಹಾಕಿರುವುದು ಮೀನುಗಳಿಗೆ ತಿಳಿಯದೆ, ಅದರಲ್ಲಿ ಸಿಕ್ಕಿಬೀಳುತ್ತವೆ. ಇದೂ ಕೂಡ ಬಲೆಗಳಿಗೆ ರಸಹಾಕುವ ಉದ್ದೇಶಗಳಲ್ಲಿ ಒಂದು.

ಮತ್ತಿಚೆಲ್ಲಿಯ ರಸ: ಬಲೆಗಳಿಗೆ ಈ ರಸವನ್ನು ಹಾಕುವುದರಿಂದ ಅವುಗಳಿಗೆ ಒಂದು ರೀತಿಯ ಕೆಂಪು ಬಣ್ಣ ಬರುತ್ತದೆ. ರಸವು ದಾರಕ್ಕೆ ಕವಚದಂತಾಗಿ ದಾರದ ಎಳೆಗಳು ಕೂಡಿಕೊಳ್ಳುತ್ತವೆ. ಬಲೆಯನ್ನು ನೀರಿನಲ್ಲಿ ಹಾಕಿದಾಗ ಎಳೆಗಳು ನೀರನ್ನು ಹೀರಿಕೊಳ್ಳುವುದಿಲ್ಲ. ಈ ರಸವು ಜೊಗರಾಗಿಯೂ, ಕಹಿಯಾಗಿಯೂ ಇರುವುದರಿಂದ ಬಲೆಗೆ ಕ್ರಿಮಿಕೀಟಗಳಿಂದ ಬಾಧೆಯೂ ತಟ್ಟುವುದಿಲ್ಲ. ಮತ್ತಿಮರಗಳ ತೊಗಟೆಯಿಂದ ರಸ ತೆಗೆದು ಬಲೆಗಳಿಗೆ ಹಾಕಲು ಉಪಯೋಗಿಸುತ್ತಾರೆ. ತೊಗಟೆಯನ್ನು ಸಂಗ್ರಹಿಸಿ, ತುಂಡರಿಸಿ, ಜಜ್ಜಿ, ದೊಡ್ಡ ಪಾತ್ರೆಯಲ್ಲಿ ಹಾಕಿ, ಚೆಲ್ಲಿಯ 2 ಪಟ್ಟು ನೀರನ್ನು ಸೇರಿಸುತ್ತಾರೆ. ಸಂಜೆ ನೀರು ತುಂಬಿ, ರಾತ್ರಿಯೆಲ್ಲ ನೆನೆಯಲು ಬಿಟ್ಟು ಮರುದಿನ ಬೆಳಿಗ್ಗೆ ಅದನ್ನು ಕಾಯಿಸುತ್ತಾರೆ. ಪಾತ್ರೆಯಲ್ಲಿಯ ಅರ್ಧ ನೀರು ಬತ್ತುವವರೆಗೆ ಹೀಗೆಯೇ ಕಾಯಿಸುತ್ತಾರೆ. ಆಗ ಇದು ಬೆಲ್ಲದ ಬಣ್ಣಕ್ಕೆ ತಿರುಗುತ್ತದೆ. ಇದಕ್ಕೆ **ತೊಗರು** ಎನ್ನುತ್ತಾರೆ. ಬಲೆಗಳಿಗೆ ತೊಗರನ್ನು ಹಾಕುವ ಹಿಂದಿನ ದಿನ ಬಲೆಗಳನ್ನು ಸ್ವಚ್ಛ ನೀರಿನಲ್ಲಿ ತೊಳೆದು ಅವುಗಳಲ್ಲಿರುವ ಹೊಲಸು ಹಾಗೂ ಉಪ್ಪಿನ ಅಂಶವನ್ನು ತೆಗೆದು ಶುಚಿ ಮಾಡುತ್ತಾರೆ. ಮರುದಿನ ಬಲೆಯನ್ನು ಒಣಗಿಸಿ ತೊಗರಿನಲ್ಲಿ ಮುಳುಗಿಸುತ್ತಾರೆ. ನಂತರ ಬಲೆಯನ್ನು ಹೊರಕ್ಕೆ ತೆಗೆದು ಬಿಸಿಲಿನಲ್ಲಿ ಒಣಹಾಕುತ್ತಾರೆ. ಬಲೆಯು ಒಣಗಿದ ತರುವಾಯ ಇನ್ನೊಮ್ಮೆ ತೊಗರಿನಲ್ಲಿ ಮುಳುಗಿಸಿ ಒಣಗಿಸುತ್ತಾರೆ. ಈ ಪ್ರಕಾರ ಎರಡು ಮೂರು ಸಲ ಮಾಡುತ್ತಾರೆ. ನೂಲಿನ ಇಲ್ಲವೆ ಸಣಬಿನ ಹೊಸ ಬಲೆಗಳನ್ನು ತೊಗರಿನಲ್ಲಿ ಅದ್ದುವ ಪೂರ್ವದಲ್ಲಿ ಸುಣ್ಣದ ನೀರಿನಲ್ಲಿ ಮುಳುಗಿಸಿ, ಆಡುಸೋಗೆಯ ಎಲೆಯನ್ನು ಹಾಕಿ ಚೆನ್ನಾಗಿ ಕುದಿಸುತ್ತಾರೆ. ಇದರಿಂದ ನೂಲು ಇಲ್ಲವೆ ನಾರಿನಲ್ಲಿರುವ ಸೂಕ್ಷ್ಮಕ್ರಿಮಿಗಳು ನಾಶವಾಗುತ್ತವೆ. ಕುದಿಸಿದ ಬಲೆಯನ್ನು ಹೊರಕ್ಕೆ ತೆಗೆದು ಎತ್ತರವಾದ ಮರದ ಕೊಂಬೆಗೆ ಅದರ ಒಂದು ತುದಿಯನ್ನು ಕಟ್ಟಿ, ಇನ್ನೊಂದು ತುದಿಗೆ ಭಾರವನ್ನು ಕಟ್ಟಿ ಜೋತುಬಿಡುತ್ತಾರೆ. ಹೀಗೆ ಬಲೆಯನ್ನು ಜೋತುಬಿಡುವುದರಿಂದ ಬಲೆಗೆ ಹಾಕಿದ ಗಂಟುಗಳು ಬಿಗಿಯಾಗಿ ಹೊಂದಿಕೊಳ್ಳುತ್ತವೆ. ಮೂರು ನಾಲ್ಕು ದಿನಗಳ ತರುವಾಯ ಈ ಬಲೆಯನ್ನು ಸ್ವಚ್ಛ ನೀರಿನಲ್ಲಿ ತೊಳೆದು ಒಣಗಿಸುತ್ತಾರೆ. ಒಣಗಿದ ಬಲೆಯನ್ನು ತೊಗರಿನಲ್ಲಿ ಹಾಕುತ್ತಾರೆ.

ತೆಂಗಿನ ರಸ: ಎರಡು ಇಲ್ಲವೆ ಮೂರು ತೆಂಗಿನ ಕಾಯಿಗಳನ್ನು ಕೆರೆದು ಸುಳಿ ಮಾಡುತ್ತಾರೆ. ಈ ಸುಳಿಯಲ್ಲಿ ಅದರ 1/8 ರಷ್ಟು ಅಕ್ಕಿ ಕೂಡಿಸಿ, ಚೆನ್ನಾಗಿ ಹಿಟ್ಟಾಗುವಂತೆ ಅರೆಯುತ್ತಾರೆ. ಅರೆದಾದ ಮೇಲೆ ದೊಡ್ಡದಾದ ಪಾತ್ರೆಯೊಂದರಲ್ಲಿ ಹಾಕಿ ಯೋಗ್ಯ ಪ್ರಮಾಣದಲ್ಲಿ ನೀರನ್ನು ಸೇರಿಸಿ ಕುದಿಸುತ್ತಾರೆ. ಕುದಿಯುವ ಮಿಶ್ರಣ

ದಲ್ಲಿ ಚೆನ್ನಾಗಿ ತೊಳೆದ ಬಲೆಯನ್ನು ಮುಳುಗಿಸುತ್ತಾರೆ. ತೆಳುವಾದ ದಾರದಿಂದ ತಯಾರಿಸಿದ ಬಿರುಸು ಬಲೆಗಳನ್ನು ಈ ರಸದಲ್ಲಿ ಮುಳುಗಿಸುವುದು ವಾಡಿಕೆ. ತೆಂಗಿನ ರಸದಲ್ಲಿಯ ಸ್ನಿಗ್ಧವಾದ ಎಣ್ಣೆ ಅಂಶವು ಈ ಬಲೆಗಳ ದಾರಗಳ ಮೇಲೆ ಕೂತು ಅದನ್ನು ಮೆತ್ತಗೆ ಮಾಡುತ್ತದೆ. ರಸದಲ್ಲಿ ಅಕ್ಕಿ ಸೇರಿಸಿ, ಅರೆಯುವುದರಿಂದ ರಸವು ಜಿಗುಟಾಗುತ್ತದೆ. ಪರಿಣಾಮವಾಗಿ ಅದರಲ್ಲಿ ಅದ್ದಿದ ದಾರವು ಬಿರುಸು ಮತ್ತು ಶಕ್ತಿಯುತವಾಗುತ್ತದೆ. ಈ ರಸದ ಸಂಪರ್ಕದಿಂದ ಬಲೆಗೆ ಹೊಸ ಬಣ್ಣ ಬಾರದೆ, ಬಲೆಯು ಬಿಳಿಯಾಗಿಯೇ ಉಳಿಯುತ್ತದೆ. ಈ ರಸದಲ್ಲಿ ವಿಶೇಷವಾಗಿ ಬಿಳಿ ಬಲೆ (ಪಟ್ಟೆಬಲೆ)ಗಳನ್ನೇ ಅದ್ದುತ್ತಾರೆ.

ತೆಂಬ್ರಿಕಾಯಿಯ ರಸ: ತೆಂಬ್ರಿ ಮರಗಳಿಂದ ಮೋಸಂಬಿಯನ್ನು ಹೋಲುವ ಅವುಗಳ ಕಾಯಿಗಳನ್ನು ಸಂಗ್ರಹಿಸಿ, ಒಂದು ಪಾತ್ರೆಗೆ ಹಾಕಿ ನೀರು ಬೆರೆಸಿ, ನಾಲ್ಕೈದು ತಾಸುಗಳವರೆಗೆ ಕೊಳೆಯಲು ಬಿಡುತ್ತಾರೆ. ಇದರಿಂದ ಜಿಗುಟಾದ ರಸವು ತಯಾರಾಗುತ್ತದೆ. ಈ ರಸವನ್ನು ವಿಶೇಷವಾಗಿ ವಾಲ್‌ಗಾಳ ಮತ್ತು ಹಗ್ಗಗಳಿಗೆ ಉಪಯೋಗಿಸುತ್ತಾರೆ.

ಅಧ್ಯಾಯ 4


ಅಪಘಾತ ತಡೆ ಮುನ್ಸೂಚನೆಗಳು

ಮೀನುಗಾರರು ಕಡಲಿನಲ್ಲಿ ಮೀನು ಹಿಡಿಯಲು ಹೋಗುವಾಗ ಅನೇಕ ರೀತಿಯ ಎಡರುತೊಡರುಗಳನ್ನು ಎದುರಿಸಬೇಕಾಗುತ್ತದೆ. ಕಡಲಿನಲ್ಲಿ ಅಪಘಾತಕ್ಕೆ ಈಡಾಗುವ ಸಂದರ್ಭಗಳನ್ನು ಹೋಗಲಾಡಿಸಲು ಮೀನುಗಾರರು ಈ ಅಪಘಾತಗಳ ಪೂರ್ವ ಸೂಚನೆಗಳನ್ನು ಕಂಡುಕೊಳ್ಳುವುದು ಅವಶ್ಯವಿದೆ. ಸಮುದ್ರತಳದಲ್ಲಿ ಬಂಡೆಕಲ್ಲುಗಳಿವೆಯೇ? ಉಸುಕಿನ ದಿನ್ನೆಗಳಿವೆಯೇ? ಒಡೆದು ಮುಳುಗಿದ ಹಡಗು ಇಲ್ಲವೆ ಮಚುವೆಗಳಿವೆಯೇ? ಕಡಲ ಮೇಲೆ ಬಿರುಗಾಳಿ ಬೀಸುವ ಸಂಭವವಿದೆಯೇ? ಇವೇ ಮೊದಲಾದ ಸಂಗತಿಗಳನ್ನು ಅವುಗಳ ಬಗೆಗಿನ ಮುನ್ಸೂಚನೆಗಳ ಮೂಲಕ ಅರಿತುಕೊಳ್ಳಬೇಕಾಗುತ್ತದೆ. ಸಂಭವಿಸಬಹುದಾದ ಅಪಘಾತಗಳನ್ನು ಕೆಲವು ವಿಶಿಷ್ಟ ಸಂಕೇತಗಳ ಮುಖಾಂತರ ದಡದಲ್ಲಿರುವ ಮೀನುಗಾರರು ನದಿಯ ಅಥವಾ ಸಮುದ್ರ ಪ್ರವಾಸ ಕೈಗೊಂಡಿರುವ ತಮ್ಮ ಇತರ ಮೀನುಗಾರ ಬಂಧುಗಳಿಗೆ ತಿಳಿಸುತ್ತಾರೆ. ಅಂತಹ ಪ್ರಸಂಗಗಳಲ್ಲಿ ಸಮುದ್ರ ಅಥವಾ ನದಿಯ ಮಧ್ಯವನ್ನು ಸೇರಿದ ಮೀನುಗಾರರು ಅಪಾಯದ ಘಟನೆಗಳನ್ನು ಅರಿತು ತೀವ್ರಗತಿಯಿಂದ ದಡವನ್ನು ಮುಟ್ಟುತ್ತಾರೆ. ನದಿ ಅಥವಾ ಸಮುದ್ರದಲ್ಲಿ ಹೋಗುವ ತಯಾರಿಯಲ್ಲಿರುವ ಮೀನುಗಾರರು ಈ ಅಪಾಯದ ಘಟನೆಗಳನ್ನು ಅರಿತು ತಮ್ಮ ಪ್ರಯಾಣವನ್ನು ರದ್ದುಗೊಳಿಸುತ್ತಾರೆ.

ಮೊದಮೊದಲು ಈ ತೆರನಾದ ಮುನ್ಸೂಚಕ ಸಂಕೇತಗಳನ್ನು ಮೀನುಗಾರರು ತಮ್ಮ ಹಳೆಯ ಪದ್ಧತಿಯಂತೆ ಪ್ರಕಟಿಸುತ್ತಿದ್ದರು. ಇಂದು ನೌಕಾಪ್ರಯಾಣವು ವ್ಯಾಪಾರ ಮತ್ತು ಸಾರಿಗೆಯ ದೃಷ್ಟಿಯಿಂದ ಮಹತ್ವವನ್ನು ಪಡೆದಿದೆ. ಇದರ ಫಲವಾಗಿ ಅನೇಕ ಸುಧಾರಣೆಗಳು ತಲೆದೋರಿವೆ. ಸರಕಾರವು ಕರಾವಳಿ ಪ್ರದೇಶದ ಉದ್ದಕ್ಕೂ ನಿಶಾನೆಕಟ್ಟೆ ಹಾಗೂ ದೀಪಸ್ತಂಭಗಳನ್ನು ಸ್ಥಾಪಿಸಿ ಅವುಗಳ ಮೂಲಕ ಮೀನುಗಾರರಿಗೆ ಹಾಗೂ ನಾವಿಕರಿಗೆ ಅಪಘಾತದ ಎಚ್ಚರಿಕೆಯನ್ನು ನೀಡುವ ವ್ಯವಸ್ಥೆ ಮಾಡಿದೆ. ಸೂಚನೆಗಳು ವಿಶಿಷ್ಟ ಸಂಕೇತಗಳ ಮುಖಾಂತರ ತಿಳಿಸಲಾಗುತ್ತದೆ. ಕೆಲವು ಸಂಕೇತಗಳ ಬಗೆಗೆ ವಿವರಗಳು ಇಂತಿವೆ :

ಬಿರುಗಾಳಿಯ ಸಂಕೇತಗಳು: ಪೋರ್ಟ್ ಇಲಾಖೆಯವರು, ಬೆಸ್ತರು ಹಾಗೂ ಸಮುದ್ರ ಪ್ರಯಾಣಿಕರಿಗೆ ಬಿರುಗಾಳಿಯ ಪರಿಸ್ಥಿತಿಯನ್ನು ತಿಳಿಸುವುದಕ್ಕೋಸ್ಕರ ಕೆಲವು ಸಂಕೇತಗಳನ್ನು ನಿಗದಿಪಡಿಸಿದ್ದಾರೆ. ಹಗಲಿನಲ್ಲಿ ಗುರುತು, ಹಾಗೂ ರಾತ್ರಿಯಲ್ಲಿ ದೀಪಗಳು ಮಾರ್ಗದರ್ಶನ ನೀಡುವ ಸಂಕೇತಗಳಾಗಿವೆ. ಅವುಗಳ ವಿವರ ಕೆಳಗಿನಂತಿದೆ :

ಪೋರ್ಟ್ ಇಲಾಖೆಯುವರು, ಬೆಸ್ತರು ಹಾಗೂ ಸಮುದ್ರ ಪ್ರಯಾಣಿಕರಿಗೆ ಬಿರುಗಾಳಿಯ ಪರಿಸ್ಥಿತಿಯನ್ನು ಸೂಚಿಸಲು ನಿಗದಿಮಾಡಿದ ದೀಪಗಳ ಸಂಕೇತಗಳು :



ಅ.ಸ.	ಹಗಲು ಗುರ್ತು	ರಾತ್ರಿ ದೀಪಗಳು	ಅಪಾಯ ಸೂಚನೆ ವಿವರ
1			**ಮುಂಜಾಗ್ರತೆ:** ನಾವಿಕರು ಸಂಚಾರಮಾಡಬಹುದು; ಆದರೂ ಜಾಗ್ರತೆ ವಹಿಸಬೇಕು.
2			**ಎಚ್ಚರಿಕೆ:** ನಾವಿಕರು ಸಂಚಾರ ಮಾಡಲೇಬಾರದು. ಬೀರುಗಾಳಿ ಬರುವ ಸಂಭವವಿದೆ.
3(i)			**ಅಪಾಯ:** ಬೀರುಗಾಳಿ ಭಯವಿದೆ.
(ii)			ದೂರದಲ್ಲಿ ಬಿರುಗಾಳಿ ಏಳುವ ಸಂಭವ. ಗಾಳಿ, ಮಳೆ ಅಧಿಕಗೊಳ್ಳಬಹುದು.
(iii)			ಸಾಧಾರಣ ರಭಸದ ಬಿರುಗಾಳಿ. ಅದು ಬಂದರದ ದಕ್ಷಿಣ ಭಾಗದಿಂದ ಹಾದುಹೋಗಬಹುದು.
(iv)			ಸಾಧಾರಣ ರಭಸದ ಬಿರುಗಾಳಿ. ಅದು ಬಂದರದ ಉತ್ತರ ಭಾಗದಿಂದ ಹಾದುಹೋಗುವುದು.
(v)			ಸಾಧಾರಣ ಬಿರುಗಾಳಿ, ಅದು ಬಂದರಿನ ಹತ್ತಿರದಿಂದ ಅಥವಾ ಮೇಲಿಂದ ಹಾದುಹೋಗುತ್ತದೆ.
4(i)			**ಬಹಳ ಅಪಾಯ:** ಅಧಿಕ ರಭಸದ ಬಿರುಗಾಳಿ. ಅದು ಬಂದರಿನ ದಕ್ಷಿಣ ಭಾಗದಿಂದ ಹಾದುಹೋಗುತ್ತದೆ.
(ii)			ಅಧಿಕ ರಭಸದ ಬಿರುಗಾಳಿ. ಅದು ಬಂದರಿನ ಉತ್ತರ ಭಾಗದಿಂದ ಹಾದುಹೋಗುತ್ತದೆ.
5(i)			**ದೊಡ್ಡ ಅಪಾಯ:** ಅತ್ಯಧಿಕ ರಭಸದ ಬಿರುಗಾಳಿ. ಅದು ಬಂದರಿನ ಮೇಲಿಂದ ಅಥವಾ ಹತ್ತಿರದಿಂದ ಹಾದು ಹೋಗುತ್ತದೆ.
(ii)			ಹವಾಮಾನ ವೀಕ್ಷಣಾಲಯದಿಂದ ಯಾವ ಸುದ್ದಿಯೂ ಇಲ್ಲ. ಅದರ ಸಂಪರ್ಕ ಕಡಿದುಹೋಗಿದೆ.

ಸೂಚಿ: W–ಬಿಳಿ; R ಕೆಂಪು

ಚಿತ್ರ 16: ಬಿರುಗಾಳಿ ಪರಿಸ್ಥಿತಿಸೂಚಿಸುವ ದೀಪ ಸಂಕೇತಗಳು

ಕಡಲಿನಲ್ಲಿ ನಿರ್ದೇಶಿಸಿದ ಸಂಕೇತಗಳು:

ಕಡಲಿನಲ್ಲಿ ದೊಡ್ಡ ದೊಡ್ಡ ಬಂಡೆಗಲ್ಲು, ಮರಳು ದಿಣ್ಣೆ, ನೀರಲ್ಲಿ ಮುಳುಗಿದ ಹಡಗು, ನದಿಗಳ ಮೂಲಕ ತೇಲಿಬರುವ ಮರ ಮುಂತಾದವುಗಳು ಹುಗಿದುಕೊಂಡಿರುತ್ತವೆ. ಇವುಗಳ ಇರುವಿಕೆ ನಾವಿಕರ ಗಮನಕ್ಕೆ ಬರುವುದಿಲ್ಲವಾದುದರಿಂದ ಬಹಳ ಅಪಾಯಕಾರಿ. ನಾವೆಗಳಲ್ಲಿ ಸಂಚರಿಸುವಾಗ ನೀರಿನಲ್ಲಿ ಮುಳುಗಿರುವ ಬಂಡೆಗಲ್ಲುಗಳಿಗೆ ಅಪ್ಪಳಿಸಿ, ನಾವೆಗಳು ನುಚ್ಚುನೂರಾಗಬಹುದು. ಈ ಅಪಘಾತಗಳನ್ನು ತಪ್ಪಿಸಲು ಕಡಲ ಮಧ್ಯದಲ್ಲಿರುವ ಬಂಡೆಗಲ್ಲುಗಳ ಮೇಲೆ ಕೆಲವು ಸಂಕೇತಗಳನ್ನು ಇಡುತ್ತಾರೆ. ಇವುಗಳಿಗೆ **ಬೊವೆ**ಗಳು ಎಂದು ಹೆಸರು.

ಸಮುದ್ರಗಳಲ್ಲಿ, ತೆಪ್ಪೆತೆಪ್ಪೆಗಳಲ್ಲಿ ಬರುವ ಮೀನುಗಳನ್ನು ಹಿಡಿಯಲು ಬಲೆಗಳನ್ನು ಬೀಸುವಾಗ ಒಂದು ವೇಳೆ ಆ ಮೀನು ತೆಪ್ಪೆಗಳು, ಮುಳುಗಿದ ಬಂಡೆಗಲ್ಲು ಇಲ್ಲವೆ ಮರಳು ದಿಣ್ಣೆ ಸ್ಥಳಗಳಲ್ಲಿ ಇದ್ದಲ್ಲಿ, ಹಾಕಿದ ಬಲೆಯು ಕಳೆದುಹೋಗಬಹುದು. ಬಲೆಯು ನಷ್ಟವಷ್ಟೇ ಅಲ್ಲದೆ ಇಡೀ ದಿನದ ಶ್ರಮವೂ ನಿಷ್ಫಲವಾಗುತ್ತದೆ. ಇವುಗಳನ್ನು ತಪ್ಪಿಸಲು ಸಂಬಂಧಪಟ್ಟ ಖಾತೆಯವರು ಇಂತಹ ಸ್ಥಳಗಳಲ್ಲಿ ಬೊವೆಗಳನ್ನು ಹಾಕಿರುತ್ತಾರೆ. ಬೊವೆಗಳು ಬೇರೆ ಬೇರೆ ಆಕಾರ ಹಾಗೂ ಬೇರೆ ಬೇರೆ ಬಣ್ಣದವುಗಳಾಗಿರುತ್ತವೆ. ಒಂದೊಂದು ಆಕಾರ, ಹಾಗೂ ಒಂದೊಂದು ಬಣ್ಣಕ್ಕೆ ಒಂದು ಸೂಚನೆ. ಆದ್ದರಿಂದ ಸಮುದ್ರದಲ್ಲಿ ಪ್ರಯಾಣ ಮಾಡುವಾಗ ಈ ಬೊವೆಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು. ಇವುಗಳ ವಿವರ ಕೆಳಗಿನಂತಿದೆ:

(1) **ಬಲಬದಿಯ ಬೊವೆ:** (i) ಕೆಂಪುಬಣ್ಣವುಳ್ಳದ್ದಾಗಿದ್ದು ತ್ರಿಕೋನಾಕೃತಿಯಲ್ಲಿರುತ್ತದೆ. ಇಲ್ಲವೆ, (ii) ಕಪ್ಪುಬಣ್ಣದ್ದಾಗಿದ್ದು ಚಚ್ಚೌಕವಾಗಿರುತ್ತದೆ. ಅದರ ಮೇಲೆ ಬಿದುರಿನ ಕೊಕ್ಕೆ ಇರುತ್ತದೆ.

(2) **ಎಡಬದಿಯ ಬೊವೆ:** (i) ಬಿಳಿಯ ಮತ್ತು ಕಪ್ಪುಬಣ್ಣದ ಪೀಪಾಯಿ (ಡ್ರಮ್) ಯನ್ನು ನೀರ ಮೇಲೆ ತೇಲಿ ಬಿಟ್ಟಿರುತ್ತಾರೆ. ಇಲ್ಲವೆ, (ii) ಬಿಳಿಯ ಮತ್ತು ಕೆಂಪು ಬಣ್ಣಗಳಿರುವ ಪೀಪಾಯಿಯ ಮೇಲೆ ಮರದ ತುಂಡುಗಳನ್ನು ಇಟ್ಟಿರುತ್ತಾರೆ.

(3) **ದಾರಿಯ ಸ್ಥಿತಿ:** (i) ಕಪ್ಪುಬಣ್ಣದ ಪೀಪಾಯಿ ಇದ್ದು ಅದರ ಮೇಲೆ ಸ್ತಂಭ ಇದ್ದರೆ ದಾರಿ ಚೆನ್ನಾಗಿದೆ ಎಂದು ತಿಳಿದುಕೊಳ್ಳಬೇಕು. (ii) ಕಪ್ಪುಬಣ್ಣದ ಮತ್ತು ಹಳದಿ ಬಣ್ಣದ ತ್ರಿಕೋನದಂತೆ ಇದ್ದರೆ, ದಾರಿ ಚೆನ್ನಾಗಿಲ್ಲ ಎಂದು ತಿಳಿದುಕೊಳ್ಳಬೇಕು.


(4) **ಹೋಗಬಾರದಂತಹ ಸ್ಥಳಗಳು:** (i) ಕೆಂಪು ಪೀಪಾಯಿ ತೇಲಾಡುತ್ತಿದ್ದರೆ ಅಲ್ಲಿ ದೋಣಿ ಲಂಗರು ಹಾಕಿದ ಸ್ಥಳವೆಂದು ತಿಳಿಯಬೇಕು. (ii) ಕಪ್ಪು ತ್ರಿಕೋನದ ಬೊವೆಗಳು ಟೆಲಿಗ್ರಾಫ್ ತಂತಿಗಳ ಇರುವ ಸಂಕೇತ.

(5) **ಒಡೆದುಹೋದ ದೋಣಿಗಳ ಜಾಗ:**

(i) **ಹಗಲು**–(ಅ) ಹಸುರು ಬಣ್ಣದ ತ್ರಿಕೋನಾಕಾರದ ಬೊವೆಗಳನ್ನು ತೇಲಿಬಿಡುತ್ತಾರೆ. ಇದನ್ನು ಕಂಡರೆ ನಾವೆಗಳು ಬೊವೆಯ ಎಡಬದಿಯಲ್ಲಿ ಪ್ರಯಾಣ ಮಾಡಬೇಕು. (ಆ) ಹಸುರು ಬಣ್ಣದ ಪೀಪಾಯಿ ಇದ್ದರೆ ನಾವೆಯನ್ನು ಬೊವೆಯ ಬಲಬದಿಯಲ್ಲಿ ನಡೆಸಬೇಕು. (ಇ) ಹಸುರು ಬಣ್ಣದ ಉರುಟಾದ ಚೆಂಡು ಇದ್ದರೆ ನಾವೆಯನ್ನು ಎರಡು ಬದಿಯಲ್ಲೂ ನಡೆಸಬಹುದು.

(ii) **ರಾತ್ರಿ**–(ಅ) ಎರಡು ಹಸುರು ಬೆಳಕುಗಳು ಇದ್ದರೆ ಬೆಳಕಿನ ಬಲಭಾಗದಲ್ಲಿ ನಾವೆಯನ್ನು ನಡೆಸಬೇಕು. (ಆ) ಮೂರು ಹಸುರು ಬೆಳಕು ಇದ್ದರೆ ಬೆಳಕಿನ ಎಡಭಾಗದಲ್ಲಿ ನಾವೆಯನ್ನು ನಡೆಸಬೇಕು. (ಇ) ನಾಲ್ಕು ಹಸುರು ಬೆಳಕುಗಳು ಇದ್ದರೆ ಎರಡೂ ಬದಿಯಲ್ಲಿ ಹೋಗಬಹುದು.

ನದಿ ಅಥವಾ ಕಡಲುಗಳಲ್ಲಿ ನಾವೆಗಳು ಪ್ರವೇಶಿಸಲು ಅನುಕೂಲವಾಗುವ ಬೊವೆಗಳು:



ಚಿತ್ರ 17: ಬೊವೆಗಳು

ಮೇಲಿನ ಚಿತ್ರದಲ್ಲಿ ನಾವೆಗಳು ಹಗಲು ಮತ್ತು ರಾತ್ರಿ ಸಮಯಗಳಲ್ಲಿ ಅಲೆದಾಡಲು ಅನುಕೂಲವಾಗುವಂತೆ ಕೆಲವು ಸೂಚನೆಗಳಿವೆ.

ಅಧ್ಯಾಯ 5

ಕಡಲ ಅಪಘಾತ ತಡೆ ನಿಯಮಗಳು ಹಾಗೂ ನಾವಿಕರ ಆಧುನಿಕ ಸಾಧನಗಳು

ಕಡಲ ಅಪಘಾತದ ತಡೆ ನಿಯಮಗಳು

ರೈಲು, ರಸ್ತೆಗಳಲ್ಲಿ ಅಪಘಾತಗಳು ಸಂಭವಿಸುವಂತೆ ಕಡಲಿನಲ್ಲಿಯೂ ಹಲವಾರು ಅಪಘಾತಗಳು ಸಂಭವಿಸುವುದುಂಟು. ಅವುಗಳನ್ನು ತಪ್ಪಿಸಲು ಹಲವಾರು ನಿಯಮಗಳನ್ನು ಮಾಡಲಾಗಿದೆ. ಈ ನಿಯಮಗಳು ಬೆಳಕು, ಧ್ವನಿಗಳಿಗೆ ಸಂಬಂಧಪಟ್ಟವುಗಳಾಗಿವೆ. ಈ ನಿಯಮಗಳು ಸಮುದ್ರದಲ್ಲಿ ಹಡಗುಗಳು ಮತ್ತು ದೋಣಿಗಳು ಸಂಚರಿಸುವ ಎಲ್ಲ ಸ್ಥಳಗಳಲ್ಲಿಯೂ ಜಾರಿಯಲ್ಲಿರುತ್ತವೆ. ಈ ಕಾನೂನುಗಳು ನಾವಿಕರಿಗೆಲ್ಲಾ ಗೊತ್ತಿರಬೇಕು. ಅವುಗಳನ್ನು ಒಂದೊಂದಾಗಿ ಇಲ್ಲಿ ವಿವರಿಸಲಾಗಿದೆ.

1ನೆಯ ನಿಯಮ

ಬೆಳಕಿನ ನಿಯಮಗಳನ್ನು ಎಲ್ಲ ಹವಾಮಾನಗಳಲ್ಲಿ ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ ಪಾಲಿಸತಕ್ಕದ್ದು. ಈ ಸಮಯದಲ್ಲಿ ಬೇರಾವ ಬೆಳಕನ್ನೂ ನಿಯಮದ ಬೆಳಕಿನಂತೆ ಉಪಯೋಗಿಸಕೂಡದು.

2ನೆಯ ನಿಯಮ (ಯಾಂತ್ರಿಕ ಹಡಗುಗಳಲ್ಲಿ)


(1) ಬಿಳಿ ಬೆಳಕು (ದೀಪಗಳು) ದೋಣಿಯ ಮುಂಭಾಗದಿಂದ ಎಡಕ್ಕೆ 10. ಬಲಕ್ಕೆ 10, ಹೀಗೆ ಒಟ್ಟು 20 ಇದ್ದು, ಪ್ರತಿಯೊಂದು ಬೇರೆ ಬೇರೆ ದಿಕ್ಕುಗಳಿಗೆ ಅಂದರೆ ಒಟ್ಟು 20 ದಿಕ್ಕುಗಳಿಗೆ ಪ್ರಕಾಶಮಾನವಾಗಿ 5 ಮೈಲು ದೂರದವರೆಗೆ ಕಾಣುವಂತಿರಬೇಕು. ಈ ದೀಪಗಳು ಹಡಗಿನ ಮೇಲ್ಭಾಗದಿಂದ 20 ಅಡಿಯ ಮೇಲೆ ಇಡಲ್ಪಟ್ಟಿರಬೇಕು.

(2) ಬಲಭಾಗ (ಸ್ಟಾರ್ ಬೋರ್ಡ್) – ಬಲಭಾಗದ ಬೆಳಕು ಹಸುರು ಬಣ್ಣದ್ದಿದ್ದು, ದೋಣಿಯ ಮುಂಭಾಗದಿಂದ 10 ದಿಕ್ಕುಗಳಿಗೆ ಪ್ರಕಾಶಮಾನವಾಗಿ 2 ಮೈಲು ದೂರಕ್ಕೆ ತೋರುವಂತಿರಬೇಕು.

(3) ಎಡಭಾಗ (ಪೋರ್ಟ್‌ಸೈಡ್) – ಎಡಭಾಗದ ಬೆಳಕು ಮೇಲೆ ಹೇಳಿದಂತಿದ್ದು ಕೆಂಪು ಬಣ್ಣದ್ದಾಗಿರಬೇಕು ಮತ್ತು ಬಲಭಾಗಕ್ಕೆ ತೋರದಂತಿರಬೇಕು.

(4) ಹಡಗುಗಳ ಒಳಭಾಗದಿಂದ ಮೂರು ಅಡಿ ಉದ್ದವಾಗಿರುವ ಹಲಗೆಯನ್ನು ಹಡಗಿನ ಮುಂಭಾಗಕ್ಕೆ ಇಟ್ಟುಕೊಂಡು ಬದಿಯ ಬೆಳಕುಗಳು ವಿರುದ್ಧ ದಿಕ್ಕುಗಳಿಗೆ ತೋರದಂತೆ ಮಾಡಬೇಕು.

(5) ಎಂಜಿನ್ ದೋಣಿಯ ಉದ್ದವು 150 ಅಡಿಗಳಿಗಿಂತ ಹೆಚ್ಚಿಗೆ ಇದ್ದಲ್ಲಿ, ಇನ್ನೊಂದು ಬಿಳಿ ಬೆಳಕನ್ನು (ಮಾಸ್ಟಲೈಟ್) ದೋಣಿಯ ಹಿಂಭಾಗದಲ್ಲಿ ಮಾಸ್ಟ್ ಕಂಬಕ್ಕೆ ಕಟ್ಟಿಕೊಳ್ಳಬೇಕು. ಈ ಬೆಳಕು ಕೂಡ ಮೇಲಿನ (1)ನೆಯದರಲ್ಲಿ ಹೇಳಿದ ಬೆಳಕಿನಂತೆ 5 ಮೈಲುಗಳವರೆಗೂ ಕಾಣುವಂತಿದ್ದು 15 ಅಡಿಗಳಿಗಿಂತ ಹೆಚ್ಚಿಗೆ ಎತ್ತರದಲ್ಲಿರಬೇಕು ಮತ್ತು ಎರಡೂ ಬೆಳಕುಗಳ ದೂರ 15 ಅಡಿಗಳಿಗಿಂತ ಕಡಮೆ ಇರಕೂಡದು.



ಚಿತ್ರ 18: ನಾವೆಯಲ್ಲಿ ದೀಪಗಳ ಸ್ಥಾನ ಸೂಚಿ

3ನೆಯ ನಿಯಮ (ಎಳೆದುಕೊಂಡು ಹೋಗುವ ಮತ್ತು ಎಳೆಯಲ್ಪಡುವ ಎಂಜಿನು ದೋಣಿಗಳಲ್ಲಿ)

ಒಂದು ಹಡಗು ಇನ್ನೊಂದು ಹಡಗನ್ನು ಎಳೆದುಕೊಂಡು (ಜಗ್ಗಿಕೊಂಡು) ಹೋಗುವುದಿದ್ದರೆ ಬದಿಯ ಎರಡು ಬೆಳಕುಗಳಲ್ಲದೆ ಪ್ರಕಾಶಮಾನವಾದ 2 ಮಾಸ್ಟ ಬಿಳಿ ದೀಪಗಳನ್ನು ನೇರವಾಗಿ 6 ಅಡಿ ಅಂತರದಲ್ಲಿ ಒಂದರ ಮೇಲೊಂದರಂತೆ ಇಟ್ಟುಕೊಳ್ಳಬೇಕು. ಎಳೆಯಲ್ಪಡುವ ದೋಣಿಯ ಉದ್ದವು 600 ಅಡಿಗಿಂತ ಹೆಚ್ಚಾಗಿದ್ದಲ್ಲಿ ಇನ್ನೊಂದು ಬಿಳಿ ಬೆಳಕನ್ನು 6 ಅಡಿಗಿಂತ ಮೇಲೆ ಅಥವಾ ಕೆಳಗೆ ಇರಿಸತಕ್ಕದ್ದು.

ಈ ಬೆಳಕುಗಳು 2ನೆಯ ನಿಯಮದಲ್ಲಿ ಹೇಳಿದಂತಿರಬೇಕು. ಮೂರನೇ ದೀಪದ ಬೆಳಕಿನ ಎತ್ತರ ದೋಣಿಯ ಮೇಲ್ಭಾಗದಿಂದ 14 ಅಡಿಗಿಂತ ಕಡಮೆ ಇರಕೂಡದು. ಎಳೆದುಕೊಂಡು ಹೋಗುವ ಹಾಗೂ ಎಳೆಯಲ್ಪಡುವ ದೋಣಿಗೆ ಬದಿಯ ದೀಪಗಳು ಇರಬೇಕು. ಹಡಗಿನ ಹಿಂಭಾಗದಲ್ಲಿ ಒಂದು ಬಿಳಿ ದೀಪವಿದ್ದು, ಅದು ಎಳೆಯಲ್ಪಡುವ ಹಡಗಿಗೆ (ದೋಣಿಗೆ) ದಾರಿ ತೋರಿಸುವಂತಿರಬೇಕು. ಈ ಬೆಳಕು ಹಡಗಿನ ಮಧ್ಯ ಭಾಗದ ಮುಂಭಾಗಕ್ಕೆ ಬೀಳಬಾರದು.

4ನೆಯ ನಿಯಮ (ತಟಸ್ಥ ಎಂಜಿನ್ ದೋಣಿಗಳಲ್ಲಿ)

(1) ಚಲಿಸುತ್ತಿರುವ ಒಂದು ಹಡಗಿನ ಎಂಜಿನು ಅಕಸ್ಮಾತ್ತಾಗಿ ಕೆಟ್ಟುನಿಂತರೆ ಅಥವಾ ಲಂಗರಗ ಹಾಕಿಕೊಂಡು ನಿಂತರೆ, 2ನೆಯ ನಿಯಮ (1)ರಲ್ಲಿ ಹೇಳಿದಂತೆ ದೀಪವನ್ನು ತೂಗಹಾಕಬೇಕು. ಕೆಂಪು ಬಣ್ಣದ ಈ ದೀಪವು ಎತ್ತರದಲ್ಲಿದ್ದು ಅದರ ಬೆಳಕು ಎಲ್ಲ ದಿಕ್ಕುಗಳಿಗೂ ಚೆನ್ನಾಗಿ ತೋರುವಂತಿರಬೇಕು. ನೆಟ್ಟಗೆ ಒಂದರ ಮೇಲೊಂದು 6 ಅಡಿ ಅಂತರದಲ್ಲಿದ್ದು, ಅದರ ಪ್ರಕಾಶವು 2 ಮೈಲು ದೂರದವರೆಗೆ ಕಾಣುವಂತಿರ ಬೇಕು.

(2) ಹಗಲಿನಲ್ಲಿ ಎರಡು ಅಡಿಗಿಂತ ಕಡಮೆ ಅಗಲವಿರುವ ಕಪ್ಪುಬಣ್ಣದಿಂದ ಕೂಡಿದ ಚೆಂಡಿನಾಕೃತಿಯ ಗುರುತುಗಳನ್ನು 6 ಅಡಿ ಅಂತರದಲ್ಲಿ ಇಟ್ಟುಕೊಳ್ಳಬೇಕು.

(3) ಕೇಬಲ್ ಲೈಟ್ – ಹಡಗು ಸಮುದ್ರದಲ್ಲಿ ಟೆಲಿಗ್ರಾಫಿಕ್ ವೈರನ್ನು ಹಾಕು ವುದಿದ್ದರೆ, ಅಥವಾ ತೆಗೆಯುವುದಿದ್ದರೆ 2ನೆಯ ನಿಯಮ (1)ರಲ್ಲಿ ಹೇಳಿದಂತೆ ಎದುರು ದೀಪ ಹಚ್ಚುವ ಅವಶ್ಯಕತೆ ಇಲ್ಲ. ಅದರ ಬದಲು 6 ಅಡಿ ಅಂತರದಲ್ಲಿ ಮೇಲೆ ಕೆಂಪು, ನಡುವೆ ಬಿಳಿ. ಕೆಳಗೆ ಕೆಂಪು ಹೀಗೆ ಮೂರು ದೀಪಗಳನ್ನು ಒಂದರ ಮೇಲೊಂದು ಇರಿಸತಕ್ಕದ್ದು. ಇವುಗಳ ಪ್ರಕಾಶವು 2 ಮೈಲು ದೂರದವರೆಗೆ ಎಲ್ಲ ದಿಕ್ಕುಗಳಿಗೂ ಕಾಣುವಂತಿರಬೇಕು. ಹಗಲಿನಲ್ಲಿ 6 ಅಡಿಗಿಂತ ಕಡಮೆ ಇರದ ಕಂಬಕ್ಕೆ ಒಂದು ಹಗ್ಗ ವನ್ನು ಕಟ್ಟಿ, ಅದಕ್ಕೆ ಎರಡು ಅಡಿ ಗಾತ್ರಕ್ಕಿಂತ ಕಡಮೆಯಾಗಿರದ. ಮೇಲೂ ಕೆಳಗೂ ಕೆಂಪು ಬಣ್ಣದ ಉರುಟಾಗಿರುವ ಹಾಗೂ ಮಧ್ಯಭಾಗದಲ್ಲಿ ಡಾಯಮಂಡ್ ಆಕಾರದ ಗುರ್ತು ಇರುವ ಬಟ್ಟೆ ಪಟವನ್ನು ಒಂದರ ಮೇಲೊಂದು ಕಟ್ಟಿ ಸ್ಪಷ್ಟವಾಗಿ ತೋರು ವಂತೆ ತೂಗುಬಿಡಬೇಕು. ಮೇಲೆ ಹೇಳಿದ ಹಡಗು ಪ್ರವಾಸಮಾಡದಿದ್ದಲ್ಲಿ ಬದಿಯ ಬೆಳಕಿನ ದೀಪಗಳು ಬೇಕಾಗಿಲ್ಲ. ಪ್ರವಾಸ ಮಾಡುವಾಗ ಮಾತ್ರ ಬದಿಗಳ ದೀಪಗಳು ಅವಶ್ಯವಾಗಿ ಬೇಕು. ಮೇಲೆ ತಿಳಿಸಿದ ಬೆಳಕು ಮತ್ತು ಗುರ್ತುಗಳು ತಟಸ್ಥ ಹಡಗು ಗಳು ದಾರಿ ಬಿಟ್ಟುಕೊಡಲು ಸಾಧ್ಯವಿಲ್ಲವೆಂಬುದನ್ನು ಸೂಚಿಸುತ್ತವೆ.

5ನೆಯ ನಿಯಮ (ಎಳೆಯಲ್ಪಡುವ ಹಾಯಿ ದೋಣಿಗಳಲ್ಲಿ)

ಹಾಯಿಯಿಂದ ಓಡಾಡುವ ಹಡಗು ಮತ್ತು ಎಳೆದುಕೊಂಡು ಹೋಗಲ್ಪಡುವ

ಹಡಗುಗಳು 2ನೆಯ ನಿಯಮ (1)ರಲ್ಲಿ ಹೇಳಿದಂತೆ ಬದಿಗಳ ದೀಪಗಳನ್ನು ಮಾತ್ರ ಉಪಯೋಗಿಸತಕ್ಕದ್ದು ಮತ್ತು ಮುಂಭಾಗದ ದೀಪಗಳನ್ನು ಎಂದಿಗೂ ಉಪಯೋಗಿಸ ಬಾರದು.

6ನೆಯ ನಿಯಮ (ಸಣ್ಣ ಹಡಗುಗಳಲ್ಲಿ)

ಡೆಕ್ ಇಲ್ಲದಿರುವ ದೋಣಿಗಳು ತುಫಾನಿನಲ್ಲಿ ಓಡಾಡುತ್ತಿರುವಾಗ ಬದಿಯ ದೀಪಗಳನ್ನು ಹೊಂದಿಸಿಕೊಳ್ಳಲು ಸಾಧ್ಯವಿಲ್ಲದಿದ್ದರೆ ಈ ದೀಪಗಳನ್ನು ಹತ್ತಿರದಲ್ಲಿ ತಯಾರಾಗಿಟ್ಟುಕೊಂಡಿದ್ದು, ಇನ್ನೊಂದು ಹಡಗು ಹತ್ತಿರ ಬರುವಾಗ ಬದಿಗಳಲ್ಲಿ ದೀಪಗಳನ್ನು ತಾತ್ಕಾಲಿಕವಾಗಿ ತೋರಿಸಿ ಅಪಘಾತವಾಗದಂತೆ ಜಾಗ್ರತೆವಹಿಸಬೇಕು.

7ನೆಯ ನಿಯಮ [ಸಣ್ಣ ಎಂಜಿನ್ ಹಡಗುಗಳು ಅಥವಾ ದಂಡು (ಹುಟ್ಟು) ದೋಣಿಗಳಲ್ಲಿ]

ಸಣ್ಣ ಎಂಜಿನ್ ಹಡಗುಗಳು ಅಂದರೆ 40 ಟನ್‌ಗಳಿಗಿಂತ ಕಡಮೆ ತೂಕದ ಹಡಗುಗಳು. ದಂಡು ಅಥವಾ ಹಾಯಿಯ 20 ಟನ್‌ಗಳಿಗಿಂತ ಕಡಮೆ ತೂಕದ ಸಣ್ಣ ದೋಣಿಗಳು ಚಲಿಸುತ್ತಿರುವಾಗ 2ನೆಯ ನಿಯಮದ (1), (2) ಹಾಗೂ (3)ರಲ್ಲಿ ಹೇಳಿದಂತೆ ದೀಪಗಳನ್ನು ಉಪಯೋಗಿಸಬೇಕು. ಒಂದು ವೇಳೆ ಹಾಗೆ ಉಪಯೋಗಿ ಸುವುದು ಸಾಧ್ಯವಿಲ್ಲದಿದ್ದಲ್ಲಿ ಈ ಕೆಳಗಿನ ರೀತಿಗಳಲ್ಲಿ ದೀಪಗಳನ್ನು ಉಪಯೋಗಿಸ ತಕ್ಕದ್ದು:

(1) 40 ಟನ್‌ಗಳಿಗಿಂತ ಕಡಮೆ ತೂಕದ ದೋಣಿಯ ಎದುರು ಭಾಗದಲ್ಲಿ, ಇಲ್ಲವೆ ಚುಕ್ಕಾಣಿಯ ಎದುರು ಭಾಗದಲ್ಲಿ *9* ಅಡಿ ಎತ್ತರದಲ್ಲಿ ಒಂದು ಬಿಳಿ ದೀಪ ವನ್ನು 2ನೆಯ ನಿಯಮದಲ್ಲಿ ಹೇಳಿದಂತೆ ಇಡಬೇಕು. ಈ ಬೆಳಕು 2 ಮೈಲು ದೂರದ ವರೆಗೆ ಕಾಣುವಷ್ಟು ಪ್ರಕಾಶಮಾನವಾಗಿರಬೇಕು.

(2) ಹಸುರು ಮತ್ತು ಕೆಂಪು ಬಣ್ಣದ ದೀಪಗಳನ್ನು 2ನೆಯ ನಿಯಮ (2) ಹಾಗೂ (3)ರಲ್ಲಿ ಹೇಳಿದಂತೆ ಇಟ್ಟಿರಬೇಕು. ಈ ಬೆಳಕು ಒಂದು ಮೈಲು ದೂರದ ವರೆಗೆ ತೋರುವಂತಿರಬೇಕು.

(3) ಹಡಗು ಮತ್ತು ದೋಣಿಗಳಲ್ಲಿ ಒಂದು ಬಿಳಿ ಬಣ್ಣದ ಪ್ರಕಾಶ ದೀಪವನ್ನು 9 ಅಡಿಗಳಿಗಿಂತ ಕೆಳಗಿಡಬಹುದು.

(4) 20 ಟನ್‌ಗಳಿಗಿಂತ ಕಡಮೆ ತೂಕದ ಹುಟ್ಟುಹಾಕುವ ಅಥವಾ ಹಾಯಿ ದೋಣಿಗಳಲ್ಲಿ ಒಂದು ಬದಿಯಲ್ಲಿ ಕೆಂಪು ಮತ್ತೊಂದು ಬದಿಯಲ್ಲಿ ಹಸುರು ಬಣ್ಣ ವಿರುವ ಚಿಮಣಿಯ ಲಾಂಧ್ರಗಳನ್ನು ದೋಣಿಗಳಲ್ಲಿ ಇಟ್ಟುಕೊಂಡಿರಬೇಕು. ಬೇರೆ

ದೋಣಿಗಳು ಕಂಡೊಡನೆ ಅಥವಾ ಬೇರೆ ದೋಣಿಗಳ ಹತ್ತಿರಕ್ಕೆ ಹೋಗುವುದಿದ್ದರೆ, ಕೂಡಲೆ ಜಾಗ್ರತೆವಹಿಸಿ ಹಸುರು ಬಣ್ಣ ಎಡಭಾಗಕ್ಕೆ, ಕೆಂಪುಬಣ್ಣ ಬಲಭಾಗಕ್ಕೆ ತೋರುವಂತೆಯೂ ಲಾಂದ್ರವನ್ನು ತೋರಿಸಬೇಕು.

(5) ಹಾಯಿ ದೋಣಿ ಇಲ್ಲವೆ ದಂಡಿನ ದೋಣಿಯು ಸಂಚರಿಸುತ್ತಿರುವಾಗ ಪ್ರಕಾಶಮಾನವಾದ ಒಂದು ಲಾಂದ್ರವನ್ನು ತಯಾರಿಸಿಟ್ಟುಕೊಂಡು ಸಂದರ್ಭಕ್ಕೆ ಅನುಸಾರವಾಗಿ ತೋರಿಸಿ, ಅಪಘಾತವಾಗದಂತೆ ನೋಡಿಕೊಳ್ಳಬೇಕು. ಈ ನಿಯಮದಲ್ಲಿ ಹೇಳಿದ ದೋಣಿಗಳು 1ನೆಯ ನಿಯಮ ಮತ್ತು 4ನೆಯ ನಿಯಮ (1)ರಲ್ಲಿ ಹೇಳಿದ ಪ್ರಕಾರ ದೀಪಗಳನ್ನು ಇಡುವ ಆವಶ್ಯಕತೆ ಇಲ್ಲ.

8ನೆಯ ನಿಯಮ(ಮೀನು ಹಿಡಿಯುವ ದೋಣಿಗಳಲ್ಲಿ)

ಮೀನು ಹಿಡಿಯುವ ದೋಣಿ ಮತ್ತು ಯಾಂತ್ರಿಕ ಹಡಗು ಚಲಿಸುತ್ತಿರುವಾಗ ಈ ಕೆಳಗೆ ಹೇಳಿರುವ ದೀಪಗಳನ್ನು ಉಪಯೋಗಿಸಬೇಕು. ಇಲ್ಲದೇ ಹೋದಲ್ಲಿ ಅವುಗಳ ಭಾರಕ್ಕೆ ಸಂಬಂಧಪಟ್ಟ ದೀಪಗಳನ್ನು ಉಪಯೋಗಿಸಬೇಕು.

(i) **ಓಪನ್ ಬೋಟ್ (ತೆರವಾಗಿರುವ ದೋಣಿ):** ಒಳಭಾಗಕ್ಕೆ ನೀರು ಬೀಳದಂತೆ ಮುಂಭಾಗದಿಂದ ಹಿಂಭಾಗದವರೆಗೆ ತಡೆಯಿಲ್ಲದ ಓಪನ್‌ಬೋಟ್‌ಗಳಿಂದ ರಾತ್ರಿಯಲ್ಲಿ ಮೀನು ಹಿಡಿಯುತ್ತಿರುವಾಗ ಸುತ್ತಲೂ ತೋರುವ ಒಂದು ಬಿಳಿ ದೀಪವನ್ನು ಉಪಯೋಗಿಸಬೇಕು.

(ii) **ಯಾಂತ್ರಿಕ ದೋಣಿಗಳು:** ಯಾಂತ್ರಿಕ ದೋಣಿಗಳು ಟ್ರೋಲ್ ಮಾಡುವಾಗ (ಅಂದರೆ ಉಪಕರಣಗಳನ್ನು ಸಮುದ್ರ ತಳದಲ್ಲಿ ಎಳೆಯುತ್ತಿರುವಾಗ) 2ನೆಯ ನಿಯಮ (1)ರಲ್ಲಿ ಹೇಳಿದ ಪ್ರಕಾರ (ದೀಪ ಹಚ್ಚುವ ಜಾಗದ) ಮೂರು ಬಣ್ಣದ ಲಾಂದ್ರವನ್ನು ಕ್ರಮವಾಗಿ ತಯಾರಿಸಿ, ಬಿಳಿ ಬೆಳಕು ನೇರವಾಗಿ ಎದುರಿನಿಂದ 2 ದಿಕ್ಕುಗಳಿಗೆ ಬೀಳುವಂತೆ, ಹಸರು ಮತ್ತು ಕೆಂಪು ಬಣ್ಣ ದೀಪಗಳು ದೋಣಿಯ ಮುಂಭಾಗದಲ್ಲಿ, ಕೆಂಪು ಬಣ್ಣದ್ದು ಎಡಬದಿಯಲ್ಲಿ, ಹಾಗೂ ಹಸರು ಬಣ್ಣದ್ದು ಬಲಬದಿಯಲ್ಲಿ ಬರುವಂತೆ ಇರಿಸಬೇಕು. ಹಿಂಭಾಗಕ್ಕೆ 6ರಿಂದ 12 ಅಡಿಗಳ ಈ ಮೂರು ಬಣ್ಣಗಳ ದೀಪದ ಅಡಿಯಲ್ಲಿ ಎಲ್ಲ ದಿಕ್ಕುಗಳಿಗೆ ಅಡೆತಡೆಯಿಲ್ಲದೆ ತೋರುವಂಥ ಒಂದು ಬಿಳಿ ದೀಪವನ್ನು ಇಡಬೇಕು.

(iii) **ಹಾಯಿದೋಣಿಗಳು:** (ಅ) ಒಂದು ಬಿಳಿ ಲಾಂದ್ರ ಇಟ್ಟು ಅದು ಎಲ್ಲ ದಿಕ್ಕುಗಳಿಗೆ ಸರಿಯಾಗಿ ತೋರುವಂತೆ ಇರಬೇಕು. ಬೇರೆ ದೋಣಿಯು ಹತ್ತಿರ ಬಂದಾಗ ಅದಕ್ಕೆ ಕ್ಲುಪ್ತ ಕಾಲದಲ್ಲಿ ದೀಪದ ಸಹಾಯದಿಂದ ಬೆಳಕು ತೋರಿಸಿ, ಅಪಘಾತವಾಗದಂತೆ ಎಚ್ಚರ ವಹಿಸಬೇಕು.

(ಅ) ಸಬ್‌ಡಿವಿಜನ್ ಒಂದರಲ್ಲಿ ಹೇಳಿದ ಬೆಳಕುಗಳು 2 ಮೈಲು ದೂರದ **ವರೆಗೆ** ಕಾಣುವಂತಿರಬೇಕು.

(ಇ) ಮೀನು ಹಿಡಿಯುವ ದೋಣಿ ಅಥವಾ ಹಡಗಿನ ಉದ್ದ 150 ಅಡಿಗಿಂತ ಹೆಚ್ಚು ಇದ್ದರೆ ಅದು ಲಂಗರಿನಲ್ಲಿ ಇರುವಾಗ ಒಂದು ಬಿಳಿ ದೀಪವನ್ನು, ಒಂದು ಮೈಲು ದೂರದವರೆಗೆ ಸುತ್ತಲೂ ತೋರುವಂತೆ ಇಟ್ಟಿರಬೇಕು ಹಾಗೂ ಇನ್ನೊಂದು ಬಿಳಿ ದೀಪವನ್ನು ಅವುಗಳ ಅಗಲದ ಮೇರೆಗೆ 2ನೆಯ ನಿಯಮದಲ್ಲಿ ಹೇಳಿದಂತೆ ಉಪಯೋಗಿಸಬೇಕು.

(ಈ) 20 ಟನ್‌ಗಳಿಗಿಂತ ಹೆಚ್ಚಿಗೆ ಭಾರವಿರುವ ದೋಣಿಗಳಲ್ಲಿ ಗಾಳಬಲೆ, ಬೀಡಬಲೆ, ಡ್ರಿಪ್ಟ್‌ಬಲೆ ಮುಂತಾದವುಗಳಿಂದ ಮೀನು ಹಿಡಿಯುತ್ತಿರುವಾಗ ಮಳೆ ಅಥವಾ ಹಿಮ ವಿಪರೀತವಾಗಿ ಬಿದ್ದರೆ, ಆ ವೇಳೆಯಲ್ಲಿ ಈ ದೋಣಿಗಳು ನಿಮಿಷಕ್ಕೆ ಒಂದು ಸಾರಿ ವಿಶಲ್ ಊದಿ ಶಬ್ದ ಮಾಡಬೇಕು. ಉಗಿ ಹಡಗುಗಳಾದರೆ ವಿಶಲ್ ಸಯರನ್ ಮಾಡಬೇಕು.

9ನೆಯ ನಿಯಮ (ದಾಟಿಹೋಗುವ ದೋಣಿಗಳಲ್ಲಿ)

ಒಂದು ದೋಣಿಯು ಇನ್ನೊಂದು ದೋಣಿಯನ್ನು ದಾಟಿ ಹೋಗುವುದಾದರೆ, ಆ ದೋಣಿಯ ಹಿಂಭಾಗದಲ್ಲಿ ಒಂದು ಬಿಳಿ ದೀಪವನ್ನು ಇಡಬೇಕು.

10ನೆಯ ನಿಯಮ (ಶಬ್ದಮಾಡಿ ತೋರಿಸುವ ಕ್ರಮ)

ವಿಪರೀತ ಮಳೆ, ಹಿಮ ಮುಂತಾದವುಗಳಲ್ಲಿ ದೀಪ ಸರಿಯಾಗಿ ಕಾಣದಿರ ಬಹುದಾದುದರಿಂದ ಎಲ್ಲ ಸೂಚನೆಗಳನ್ನು ಶಬ್ದದ ಮೂಲಕ ಸೂಚಿಸಬೇಕು. ಹಡಗು ಅಥವಾ ದೋಣಿ ಮುಂತಾದವುಗಳು ಚಲಿಸುತ್ತಿರುವಾಗ ಈ ಪದ್ಧತಿಯನ್ನು ಆಚರಿಸ ಬೇಕು.

(i) ಎಂಜಿನ್ ದೋಣಿಗಳು ವಿಶಲ್ ಸಾಯರನ್‌ನಿಂದ ಸಂಕೇತ ಮಾಡಬೇಕು. ಹಾಯಿ ಹಡಗುಗಳು ಮತ್ತು ಎಳೆದುಕೊಂಡು ಹೋಗುವ ಹಡಗುಗಳು ಫಾಗ್‌ಹಾರ್ನ್ ನಿಂದ ಸಪ್ಪಳಮಾಡಬೇಕು.

(ii) ಹಾಯಿ ದೋಣಿ 20 ಟನ್‌ಗಳಿಗಿಂತ ಹೆಚ್ಚಿದ್ದರೆ ಮೇಲೆ ಹೇಳಿದ ಫಾಗ್‌ಹಾರ್ನ್ ಇಡಬೇಕು. ಹಿಮ, ಇಬ್ಬನಿ ಬೀಳುವಿಕೆ ಮತ್ತು ವಿಶೇಷ ಮಳೆಯ ಕಾಲದಲ್ಲಿ ಹಗಲಿನಲ್ಲಾಗಲೀ, ರಾತ್ರಿಯಲ್ಲಾಗಲೀ ಈ ಚಿಹ್ನೆಗಳನ್ನು ಉಪಯೋಗಿಸ ಬೇಕು.

(iii) ಒಂದು ಯಾಂತ್ರಿಕ ದೋಣಿಯು ಓಡುತ್ತಿರುವಾಗ ಮುಂಭಾಗದಲ್ಲಿ ಬೇರೊಂದು ದೋಣಿಯು ದಾರಿಯಲ್ಲಿ ನಿಂತುಕೊಂಡಿದ್ದರೆ, ದಾರಿ ಬಿಡುವುದರ ಸಲುವಾಗಿ ಪ್ರತಿ ನಿಮಿಷಕ್ಕೆರಡು ಬಾರಿ ದೀರ್ಘವಾದ ಬ್ಲಾಸ್ಟನ್ನು ಮಾಡಬೇಕು. ದೋಣಿಯು ಲಂಗರಿನಲ್ಲಿದ್ದರೆ ಒಂದು ನಿಮಿಷಕ್ಕೊಂದು ಬಾರಿ ಘಂಟೆಯನ್ನು 5 ಸೆಕೆಂಡಿನ ವರೆಗೆ ಬಾರಿಸತಕ್ಕದ್ದು.

(iv) ಒಂದು ಹಡಗು ಇನ್ನೊಂದು ಹಡಗನ್ನು ಎಳೆಯುತ್ತಿರುವಾಗ, ಟೆಲಿಗ್ರಾಫ್ ವೈರನ್ನು ಹಾಕುತ್ತಿರುವಾಗ ಅಥವಾ ತೆಗೆಯುತ್ತಿರುವಾಗ, ಇನ್ನೊಂದು ದೋಣಿಗೆ ದಾರಿ ಬಿಟ್ಟುಕೊಡಲು ಆಗುವುದಿಲ್ಲ. ಆಗ ಎರಡು ನಿಮಿಷಗಳಿಗೊಂದು ಬಾರಿ ಬ್ಲಾಸ್ಟ್ ಮಾಡುವ ಬದಲಿಗೆ ಎರಡು ನಿಮಿಷಗಳಲ್ಲಿ ಮೂರು ಬ್ಲಾಸ್ಟ್‌ಗಳನ್ನು ('ಭೂಂ' 'ಭೂಂ' 'ಭೂಂ') ಕೊಡತಕ್ಕದ್ದು. ಇದರ ಒಂದು ಬ್ಲಾಸ್ಟ್ ದೀರ್ಘವಾಗಿದ್ದು ಉಳಿದ ಎರಡು ಚಿಕ್ಕವಾಗಿರಬೇಕು. ಇಪ್ಪತ್ತು ಟನ್‌ಗಳಿಗಿಂತ ಕಡಮೆ ಇರುವ ಹಾಯಿ ದೋಣಿಗಳು ಈ ರೀತಿಯ ಸಪ್ಪಳವನ್ನು ಮಾಡಬೇಕಾಗಿಲ್ಲ.

ಹಡಗುಗಳ ಓಟವು ಮಂಜು ಮತ್ತು ಇಬ್ಬನಿ ಮುಸುಕಿದ ಸ್ಥಳಗಳಲ್ಲಿ ಮಿತಿ ಮೀರಿ ವಾತಾವರಣವು ಕೆಟ್ಟಿದ್ದರೆ ಅದಕ್ಕೆ ಹೊಂದಿಕೊಂಡು ಹೋಗತಕ್ಕದ್ದು.

11ನೆಯ ನಿಯಮ

ಎರಡು ಹಾಯಿ ದೋಣಿಗಳು ಎದುರುಬದುರಾಗಿ ಬರುವಾಗ, ಒಂದಕ್ಕೊಂದು ಡಿಕ್ಕಿ ಆಗುವ ಸಂಭವವಿದ್ದಾಗ ಯಾವುದಾದರೊಂದು ದೋಣಿಯು ಇನ್ನೊಂದು ದೋಣಿಗೆ ದಾರಿಯನ್ನು ಈ ಕೆಳಗೆ ಹೇಳಿದ ರೀತಿಯಲ್ಲಿ ಬಿಡಬೇಕು.

ಗಾಳಿಯ ದಿಕ್ಕಿನಲ್ಲಿ ಸಾಗುವ ಹಾಗೂ ಗಾಳಿಯ ವಿರುದ್ಧ ದಿಕ್ಕಿನಿಂದ ಬರುವ ದೋಣಿಗಳೆರಡು ಸಂಧಿಸಿದ್ದಾಗ ಗಾಳಿ ವಿರುದ್ಧ ದಿಕ್ಕಿನಲ್ಲಿ ಬರುವ ದೋಣಿ ಪಕ್ಕಕ್ಕೆ ಸರಿದು ಗಾಳಿಯ ದಿಕ್ಕಿನಲ್ಲಿ ಸಾಗುವ ದೋಣಿಗೆ ದಾರಿ ಬಿಟ್ಟುಕೊಡಬೇಕು. ಬಂದರಿನ ಬೆಳಕಿನಿಂದ (ಎಡಭಾಗದಿಂದ) ಕ್ರಾಸ್‌ಮಾಡಿ ಬರುವ ದೋಣಿಯು ಎಡಭಾಗದ ಮುಂಭಾಗದಿಂದ ಕ್ರಾಸ್‌ಮಾಡಿ ಬರುವ ದೋಣಿಗೆ ದಾರಿಯನ್ನು ಬಿಟ್ಟುಕೊಡಬೇಕು. ಎರಡು ದೋಣಿಗಳು ಗಾಳಿಯ ದಿಕ್ಕಿನಲ್ಲೇ ಸಾಗುತ್ತಿರುವಾಗ ಎಡಭಾಗದಿಂದ ಬರುವ ದೋಣಿಯು ಬಲಭಾಗದಿಂದ ಬರುವ ದೋಣಿಗೆ ದಾರಿಯನ್ನು ಬಿಟ್ಟುಕೊಡಬೇಕು.

12ನೆಯ ನಿಯಮ

ಎರಡು ಹಡಗುಗಳು ಎದುರುಬದುರಾಗಿ ಒಂದನ್ನೊಂದು ಸಮೀಪಿಸಿ, ಘರ್ಷಣೆ ಆಗುವ ಸಂಭವವಿದ್ದರೆ ಎರಡೂ ಹಡಗುಗಳು ತಮ್ಮ ತಮ್ಮ ಬಲಭಾಗಗಳಿಗೆ ತಿರುಗಿ ಒಂದು ಇನ್ನೊಂದರ ಎಡಭಾಗದಿಂದ ಹಾದುಹೋಗಬೇಕು. ಈ ನಿಯಮ ಹಡಗುಗಳ ಡಿಕ್ಕಿ ಆಗುವ ಸಂದರ್ಭದಲ್ಲಿ ಮಾತ್ರ ಅನ್ವಯಿಸುತ್ತದೆ.

13ನೆಯ ನಿಯಮ

ಎರಡು ಹಡಗುಗಳು ಒಂದೇ ದಿಕ್ಕಿನಿಂದ ಹಾದುಹೋಗುವಾಗ ಘರ್ಷಣೆ ಆಗುವ ಸಂಭವವಿದ್ದರೆ ಬಲಭಾಗದ ಹಡಗಿಗೆ ಎಡಭಾಗದ ಹಡಗು ದಾರಿ ಬಿಟ್ಟು ಕೊಡಬೇಕು.

14ನೆಯ ನಿಯಮ (ಆವಿ ದೋಣಿ ಮತ್ತು ಹಾಯಿ ದೋಣಿಗಳಲ್ಲಿ)

ಆವಿ ದೋಣಿ ಮತ್ತು ಹಾಯಿ ದೋಣಿಗಳು ಒಂದಕ್ಕೊಂದು ತಾಗಿಕೊಂಡು ಓಡುವಂತಿದ್ದರೆ ಆವಿ ದೋಣಿಯು ಹಾಯಿದೋಣಿಗೆ ದಾರಿಯನ್ನು ಬಿಟ್ಟುಕೊಡಬೇಕು.

15ನೆಯ ನಿಯಮ

ತನ್ನ ದಾರಿ ಯಾವುದೆಂಬುವನ್ನು ಒಂದು ದೋಣಿಯು ನಿರ್ಣಯಿಸಿಕೊಂಡಾದ ಮೇಲೆ ನಿಯಮ ಯಾವುದೇ ಪ್ರಕಾರವಾದರೂ, ಒಂದು ದೋಣಿಗೆ ಇನ್ನೊಂದು ದೋಣಿಯು ದಾರಿಮಾಡಿಕೊಡಲೇಬೇಕು. ಆ ದೋಣಿಯಾದರೂ ಅದೇ ದಾರಿ ಮತ್ತು ವೇಗದಲ್ಲೇ ಚಲಿಸಬೇಕು.

ಸೂಚನೆ:- ಕೆಟ್ಟ ಹವೆಯಿಂದಾಗಿ ಇಲ್ಲವೇ ಬೇರೆ ಯಾವುದೇ ಕಾರಣದಿಂದಾಗಿ ದಾರಿಬಿಡಬೇಕಾದ ದೋಣಿಯು ದಾರಿ ಬಿಡಲಾಗದಿದ್ದಲ್ಲಿ ಅದು ಆ ದೋಣಿಯ ತಪ್ಪೆನಿಸುವುದಿಲ್ಲ.

16ನೆಯ ನಿಯಮ (ಮುಂಭಾಗದಿಂದ ಅಡ್ಡವಾಗಿ ಹೋಗುವುದು)

ಒಂದು ದೋಣಿಯು ಇನ್ನೊಂದು ದೋಣಿಯ ಮುಂಭಾಗದಿಂದ ಅಡ್ಡವಾಗಿ ಹೋಗುತ್ತಿದ್ದರೆ ಅದಕ್ಕೆ ದಾರಿ ಬಿಟ್ಟುಬಿಡಬೇಕು. ಆದರೆ ನಿಯಮದಲ್ಲಿ ಹೇಳಿದಂತೆ ದಾರಿಯನ್ನು ಬಿಟ್ಟು ಕೊಡಬೇಕಾಗಿದ್ದರೂ ಚಲಿಸುವ ಪ್ರತಿಯೊಂದು ದೋಣಿಯೂ ಇನ್ನೊಂದು ದೋಣಿಯ ಮುಂಭಾಗದಿಂದ ಅಡ್ಡವಾಗಿ ದಾಟಿ ಹೋಗುವುದನ್ನು ಸಾಧ್ಯವಾದಷ್ಟೂ ತಪ್ಪಿಸಬೇಕು. ಏಕೆಂದರೆ ಹೀಗೆ ಹೋಗುವಾಗ ಅಪಘಾತಗಳಾಗುವ ಸಂಭವ ಹೆಚ್ಚು.

17ನೆಯ ನಿಯಮ (ಯಾಂತ್ರಿಕ ದೋಣಿಗಳ ವೇಗವನ್ನು ಕಡಮೆ ಮಾಡುವುದು)

ಪ್ರತಿಯೊಂದು ಯಾಂತ್ರಿಕ ದೋಣಿಯು ತನ್ನ ಸಮೀಪ ಬರುವ ಬೇರೊಂದು ಯಾಂತ್ರಿಕ ದೋಣಿಗೆ ನಿಯಮದ ಪ್ರಕಾರ ದಾರಿಯನ್ನು ಬಿಟ್ಟುಕೊಡುವಾಗ ಅವಶ್ಯವಿದ್ದಲ್ಲಿ ವೇಗವನ್ನು ಕಡಮೆ ಮಾಡಬೇಕು; ದೋಣಿಯನ್ನು ನಿಲ್ಲಿಸಬೇಕು, ಅಥವಾ ದೋಣಿಯನ್ನು ಹಿಂದೆ ಸರಿಸಬೇಕು.

18ನೆಯ ನಿಯಮ (ಮುಂದೊತ್ತಿ ಹೋಗುವ ದೋಣಿಗಳು)

ಪ್ರತಿಯೊಂದು ದೋಣಿಯು ಇನ್ನೊಂದು ದೋಣಿಯನ್ನು ದಾಟಿ ಮುಂದೊತ್ತಿ ಹೋಗುವುದಿದ್ದರೆ, ಮುಂದೊತ್ತಿ ಹೋಗುವ ದೋಣಿಯು ಇನ್ನೊಂದು ದೋಣಿಯಿಂದ ಕನಿಷ್ಟ ಎರಡು ಅಡಿಗಳಿಗಿಂತ ಹೆಚ್ಚು ದೂರವಿರಬೇಕು. ಮುಂದೊತ್ತಿ ಹೋಗುವ ದೋಣಿಯ ಬದಿಯ ದೀಪಗಳನ್ನು ಆರಿಸಿರಬೇಕು.

19ನೆಯ ನಿಯಮ (ಇಕ್ಕಟ್ಟಾದ ಕಾಲುವೆಗಳಲ್ಲಿ ಯಾಂತ್ರಿಕ ದೋಣಿ)

ಇಕ್ಕಟ್ಟಾದ ಕಾಲುವೆಗಳಲ್ಲಿ ಹೋಗುವ ಯಾಂತ್ರಿಕ ದೋಣಿಯು ಬಲಬದಿಯಿಂದ ಸಾಗಬೇಕು. ಬಲಬದಿಯ ದಾರಿಯು ಸರಿ ಇಲ್ಲದಿದ್ದರೆ ಕಾಲುವೆಯ ಮಧ್ಯಭಾಗದಿಂದ ಸಾಗಬಹುದು.

20ನೆಯ ನಿಯಮ (ಮೀನು ಹಿಡಿಯುತ್ತಿರುವ ದೋಣಿಗಳಿಂದ ದೂರ ವಿರುವಿಕೆ)

ಗಾಳ ಬಲೆಯಿಂದ ಇಲ್ಲವೆ ಟ್ರಾಲ್ ಬಲೆಯಿಂದ ಮೀನು ಹಿಡಿಯುವಿಕೆ ನಡೆದ ಸ್ಥಳಗಳಲ್ಲಿ ಚಲಿಸುತ್ತಿರುವ ಹಾಯಿ ದೋಣಿಗಳು ಬಲೆಗಳಿಗೆ ಯಾವ ತೆರನಾದ ಧಕ್ಕೆ ಆಗದಂತೆ ಜಾಗ್ರತೆವಹಿಸಿ, ದೂರದಿಂದಲೇ ಹೋಗಬೇಕು.

21ನೆಯ ನಿಯಮ

ಈ ಕಾನೂನು ಪಾಲನೆಗೆ ಪ್ರಯಾಣ ಸಮಯದಲ್ಲಿ ಸಮುದ್ರದ ವಾತಾವರಣ, ಅಪಘಾತ ಕಾರಣ, ಅರಿತಿರುವುದು ಅವಶ್ಯ. ವಿಶೇಷ ಸಂದರ್ಭಗಳಲ್ಲಿ ನಿಯಮಗಳನ್ನು ತಕ್ಕಂತೆ ಸಡಿಲಿಸಿ ಮುಂಬರಬಹುದಾದ ತೊಂದರೆಗಳನ್ನು ನಿವಾರಿಸುವುದಕ್ಕೆ ಪ್ರಯತ್ನಗಳನ್ನು ಮಾಡಬೇಕು.

22ನೆಯ ನಿಯಮ (ಶಬ್ದಗಳ ಸಂಕೇತ)

ಕೂಡಿಕೊಂಡು ಸಮುದ್ರದಲ್ಲಿ ಸಾಗಿದ ದೋಣಿಗಳು ಒಂದಕ್ಕೊಂದು ಕಾಣುವಂತಾದಾಗ ಈ ಕೆಳಗೆ ಹೇಳಿದಂತೆ ವಿಶಲ್ ಅಥವಾ ಸಯರನ್ ಶಬ್ದ ಮಾಡಬೇಕು:

(i) ಒಂದು ಚಿಕ್ಕಬ್ಲಾಸ್ಟ್ — ಬಲಕ್ಕೆ ಹೋದ ಸಂಕೇತ.
(ii) ಎರಡು ಚಿಕ್ಕಬ್ಲಾಸ್ಟ್ — ಎಡಕ್ಕೆ ಹೋದ ಸಂಕೇತ.
(iii) ಮೂರು ಚಿಕ್ಕಬ್ಲಾಸ್ಟ್ — ಎಂಜಿನ್ನಿನ ಸಹಾಯದಿಂದ ಹಿಂದಕ್ಕೆ ಹೋದ ಸಂಕೇತ.

ಚಿಕ್ಕಬ್ಲಾಸ್ಟ್ ಅಂದರೆ ಒಂದು ಸೆಕೆಂಡಿನವರೆಗಿನ ಶಬ್ದ. ಇಂಥ ಸಂದರ್ಭಗಳಲ್ಲಿ ಯಾವ ದೋಣಿಯಾದರೂ ನಿರ್ಲಕ್ಷತನದಿಂದ ವರ್ತಿಸಬಾರದು.

23ನೆಯ ನಿಯಮ (ಬಂದರುಗಳಿಗೆ ಮತ್ತು ಒಳನಾವೆಗಳಿಗಾಗಿ ಇರಿಸಿದ ಪ್ರತ್ಯೇಕ ನಿಯಮಗಳು)

ಈ ಕಾನೂನಿನನ್ವಯ ಸಂಬಂಧಪಟ್ಟ ಮೇಲಾಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿಯ ಬಂದರು, ಹೊಳೆ ಮತ್ತು ಒಳನಾವೆಗಳಿಗೆ ಸಂದರ್ಭಾನುಸಾರ ವಿಶೇಷ ಕಾಯದೆಗಳನ್ನು ರಚಿಸಿಕೊಳ್ಳಬಹುದು. ಈ ಕಾಯದೆಗಳು ಜನಹಿತದ ಸಲುವಾಗಿರಬೇಕು. ಇವನ್ನು ಯಾರೂ ಉಲ್ಲಂಘಿಸಕೂಡದು. ಉಲ್ಲಂಘಿಸಿದರೆ, ಕ್ರಮಕ್ಕೆ ಗುರಿಯಾಗಬೇಕಾಗುತ್ತದೆ.

24ನೆಯ ನಿಯಮ (ಕಷ್ಟಕಾಲದ ಚಿಹ್ನೆಗಳು)

ಒಂದು ದೋಣಿಯು ತೊಂದರೆಯಲ್ಲಿದ್ದು ಇನ್ನೊಂದು ದೋಣಿ, ಅಥವಾ ದಂಡೆಯಿಂದ ಸಹಾಯಬೇಕಾಗಿದ್ದರೆ ಈ ಕೆಳಗಿನ ಸಂಕೇತಗಳನ್ನು ಸೂಚಿಸಬೇಕು:

(1) ಹಗಲಿನಲ್ಲಿ:

(i) ಕೋವಿ (ಬಂದೂಕು)ಯಿಂದ ಒಂದು ನಿಮಿಷಕ್ಕೆ ಒಂದು ಸಲ ಶಬ್ದ ಮಾಡುತ್ತಿರಬೇಕು.

(ii) ಅಂತರರಾಷ್ಟ್ರೀಯ ಸಂಕೇತ ಭಾಷೆಯ ನಿರ್ದೇಶನದಂತೆ ಸಿಗ್ನಲ್ ಫ್ಲೇಗ್ (NC) ಉಪಯೋಗಿಸಬೇಕು.

(iii) ನಾಲ್ಕು ಮೂಲೆಯ ಒಂದು ಧ್ವಜಕ್ಕೆ ಮೇಲೆ ಅಥವಾ ಕೆಳಗೆ ಒಂದು ಉರುಟಾದ ಚೆಂಡು ಕಟ್ಟಬೇಕು.

(iv) ಫಾಗ್ ಸಿಗ್ನಲ್ ಎಡಬಿಡದೆ ಶಬ್ದ ಮಾಡುತ್ತಿರಬೇಕು.

(2) ರಾತ್ರಿಯಲ್ಲಿ:

(i) ಬಂದೂಕಿನಿಂದ ನಿಮಿಷಕ್ಕೆ ಒಂದಾವರ್ತಿಯಂತೆ ಶಬ್ದ ಮಾಡುತ್ತಿರಬೇಕು.

(ii) ದೋಣಿಯ ಮೇಲ್ಭಾಗದಲ್ಲಿ ಟಾರಿನ ಡಬ್ಬಿ ಇತ್ಯಾದಿ ಉರಿಸಿ ಬೆಂಕಿ ಮಾಡಬೇಕು.

(iii) ರಾಕೆಟ್ ಸೆಲ್ಸ್ (ಗರ್ನಾಲು), ಥ್ರೋಯಿಂಗ್ ಸ್ಟಾರ್ಸ್‌ಗಳನ್ನು ಒಂದಾದ ನಂತರ ಒಂದನ್ನು ಸ್ವಲ್ಪ ಸಮಯದ ಅಂತರದಲ್ಲಿ ಹಾರಿಸತಕ್ಕದ್ದು.

ನಾವಿಕರ ಆಧುನಿಕ ಸಾಧನಗಳು

ಹಡಗಿನಲ್ಲಿ ಪ್ರಯಾಣ ಮಾಡುವಾಗ ಅಥವಾ ಸಮುದ್ರಗಳಲ್ಲಿ ಮೀನುಗಳನ್ನು ಹಿಡಿಯಲು ಹಡಗು, ದೋಣಿ ಮುಂತಾದವುಗಳಲ್ಲಿ ಹೋಗುವಾಗ ನಾವಿಕರ ದಿಕ್ಸೂಚಿ, ಅಗ್ನಿಶಾಮಕ, ದ್ರವಮಾಪಕ, ಹಿಮಮಾಪಕ ಮತ್ತು ಕಾರ್ಟೆಸಿಯನ್ ಡೈವರ್, ಸಂರಕ್ಷಕ

ಪಟ್ಟಿ ಮತ್ತು ಸಂರಕ್ಷಕ ಟ್ಯೂಬುಗಳು, ದೂರದರ್ಶಕಗಳೇ ಮೊದಲಾದ ಕೆಲವು ಆವಶ್ಯಕ ವಸ್ತುಗಳನ್ನು ಒಯ್ಯಬೇಕಾಗುತ್ತದೆ.

(1) **ನಾವಿಕರ ದಿಕ್ಸೂಚಿ:** ಈ ಸಾಧನ ಹಡಗು ಯಾವ ದಿಕ್ಕಿನಲ್ಲಿ ಹೊರಟಿದೆ ಎಂಬುದನ್ನು ಅರಿಯಲು ನಾವಿಕರಿಗೆ ನೆರವಾಗುತ್ತದೆ. ಇದು ಯಾವಾಗಲೂ ಹಡಗಿನ ಚುಕ್ಕಾಣಿ ಹಿಡಿಯುವವನ ಬಳಿಯಲ್ಲಿಯೇ ಇರುತ್ತದೆ. ಇದನ್ನು ನೋಡಿ ಆತನು ನಾವೆಯನ್ನು ತನಗೆ ಬೇಕಾದ ದಿಕ್ಕಿನತ್ತ ನಡೆಸುತ್ತಾನೆ.

(2) **ಅಗ್ನಿಶಾಮಕ ಉಪಕರಣ:** ಇದು ಶಂಖುವಿನಾಕಾರವಿರುತ್ತದೆ. ಇದರ ಹೊರಹೊದಿಕೆಯನ್ನು ಲೋಹದಿಂದ ಮಾಡಿರುತ್ತಾರೆ. ಇದರ ಒಳಗೆ ಬೇರೆ ಬೇರೆ ಸಿಲೆಂಡರುಗಳಲ್ಲಿ ಪ್ರಬಲ ವಾಷಿಂಗ್ ಸೋಡದ ದ್ರಾವಣ ಮತ್ತು ಗಂಧಕಾಮ್ಲ ವಿರುತ್ತದೆ. ಉಪಕರಣದ ಹಿಡಿಯನ್ನು ಒತ್ತಿದ ಕೂಡಲೆ ಪ್ರಬಲ ಗಂಧಕಾಮ್ಲವು ವಾಷಿಂಗ್ ಸೋಡ ದ್ರಾವಣದೊಡನೆ ವರ್ತಿಸಿ ಇಂಗಾಲದ ಡೈಆಕ್ಸೈಡ್ ಉತ್ಪತ್ತಿ ಯಾಗುತ್ತದೆ. ಇದು ದಹನ ಪ್ರತಿಕೂಲ ಅನಿಲವಾದುದರಿಂದ ಬೆಂಕಿಯಾರಿಸಲು ಅನುಕೂಲವಾಗುತ್ತದೆ.

(3) **ಧ್ರುವಮಾಪಕ, ಹಿವಮಾಪಕ ಮತ್ತು ಕಾರ್ಟೆಸಿಯನ್ ಡೈವರ್:** ಇವು ತೇಲುವಿಕೆಯ ತತ್ವದ ಮೇರೆಗೆ ಕೆಲಸ ಮಾಡುವ ಉಪಕರಣಗಳು. ಮೀನುಗಾರಿಕೆ ಯಲ್ಲಿ ಇವುಗಳನ್ನು ಬಳಸುತ್ತಾರೆ.

(4) **ಸಂರಕ್ಷಕ ಪಟ್ಟಿಗಳು ಅಥವಾ ಸಂರಕ್ಷಕ ಟ್ಯೂಬುಗಳು:** ಸಂರಕ್ಷಕ ಪಟ್ಟಿ ಹಾಗೂ ಟ್ಯೂಬುಗಳು ಹಡಗುಗಳಲ್ಲಿರಬೇಕಾಗುತ್ತದೆ. ಸಂರಕ್ಷಕ ಪಟ್ಟಿಯ ಒಳಗೆ ಗಾಳಿತುಂಬಿದ ರಬ್ಬರು ಟ್ಯೂಬು ಇರುತ್ತದೆ. ಸಂರಕ್ಷಕ ಪಟ್ಟಿಗಳು ಮತ್ತು ಟ್ಯೂಬುಗಳಲ್ಲಿ ಗಾಳಿ ತುಂಬಿರುವುದರಿಂದ ಅವು ನೀರಿನಲ್ಲಿ ತೇಲುತ್ತವೆ. ಹಡಗಿಗೆ ಬೆಂಕಿ ಹತ್ತಿದರೆ ಇಲ್ಲವೆ ಬಿರುಗಾಳಿಗೆ ಸಿಕ್ಕಿ ಅಪಾಯಕ್ಕೀಡಾದರೆ ನಾವಿಕರು ಈ ಸಂರಕ್ಷಕ ಪಟ್ಟಿಗಳನ್ನು ಕಟ್ಟಿಕೊಂಡು ನೀರಿನಲ್ಲಿ ಜಿಗಿದು, ತೇಲಿಕೊಂಡು ಹೋಗಿ ದಡ ಸೇರಬಹುದು.

(5) **ದೂರದರ್ಶಕ:** ಹಡಗು ಸಾಗರದಲ್ಲಿ ಚಲಿಸುವಾಗ ದೂರದಿಂದ ಬರುವ ಹಡಗುಗಳನ್ನು ಗುರುತಿಸಲು ಸಮುದ್ರದಲ್ಲಿ ಹಾಕಿದ ಬೊವೆಗಳನ್ನು, ಹಾಗೂ ಕಲ್ಲು ಬಂಡೆಗಳನ್ನು ಗುರುತಿಸಲು ಮತ್ತು ಭೂಭಾಗಗಳನ್ನು ನೋಡಲು ನಾವಿಕರು ದೂರ ದರ್ಶಕಗಳನ್ನು ಉಪಯೋಗಿಸುತ್ತಾರೆ. ಆಕಾಶದಲ್ಲಿ ಬಹುದೂರದಲ್ಲಿರುವ ಚಂದ್ರ, ಸೂರ್ಯ, ಗ್ರಹ ಮತ್ತು ನಕ್ಷತ್ರಗಳನ್ನು ನೋಡಲೂ ದೂರದರ್ಶಕಗಳ ಉಪಯೋಗ ಬೀಳುತ್ತದೆ. ಇಂಥ ದೂರದರ್ಶಕಗಳಿಗೆ ಖಗೋಳ ದೂರದರ್ಶಕಗಳೆನ್ನುವರು. ಈ ದೂರದರ್ಶಕಗಳಿಂದ ಬರಿಗಣ್ಣಿಗೆ ಕಾಣದ ಎಷ್ಟೋ ನಕ್ಷತ್ರ ಹಾಗೂ ಗ್ರಹಗಳನ್ನು ನೋಡಬಹುದಾಗಿದೆ. ಇವುಗಳ ಸಹಾಯದಿಂದ ನಾವಿಕರು ದಿಕ್ಕು, ಸಮಯ, ಮುಂತಾ ದವುಗಳನ್ನು ತಿಳಿದುಕೊಳ್ಳುತ್ತಾರೆ.

ಪಾರಿಭಾಷಿಕ ಶಬ್ದಕೋಶ

(i) ಇಂಗ್ಲಿಷ್-ಕನ್ನಡ

A

Aljion — ಆಲ್ವಿಯನ್

B

Blast — ಬ್ಲಾಸ್ಟ್ (ಶಿಳ್ಳಿನ ಸಪ್ಪಳ)
Blind fish — ಕುರುಡಿ ಮೀನು
Bogasi net — ಬೊಗಸಿ ಬಲೆ
Bottom net — ಬುಡಿಬಲೆ
Buoys — ಬೊವೆ
Buttress rope — ಆಸರೆಹಗ್ಗ

C

Cast net — ಬೀಸುವಬಲೆ
Chitnet — ಮಡ್ಲೆಬಲೆ, ಶೆಟ್ಲೆಬಲೆ
Clove hitch — ಗೂಟದ ಗಂಟು
Coil rope — ವಾಲಕಾಂಡ
Cuttal fish — ನುಚುಕಿ ಮೀನು

D

Duck — ಡಕ್
Dredging net — ಮಾರಿಬಲೆ
Drifter — ಕಾಂಟಲಿಬಲೆ

E

Eal fish — ಕೀಲಿಸ ಮೀನು
Extensive eye knot — ಹೋಲಿಕಣ್ಣು
Eye seal — ಹಗರು

F

Ferry — ಹುಟ್ಟು
Figure of eight knot — ಜೋಡಿಗಂಟು
Fishing hook — ಗಾಳ
Fishing rod — ಛಡಿಗಾಳ
Fishing wire — ಲಾಂಬೋರಿ
Floatil — ಕಳಿ, ಬೆಂಡು
Fog — ಹಿಮ
Foghorn — ಫಾಗಹಾರ್ನ

H

High tide — ಭರತಿ
Hive knot — ಹುಟ್ಟಿನ ಗಂಟು

I

Internal setting up hooks — ವಾಲಗಾಳ

K

Knot — ಗಂಟು

N

Netting needle — ಚಿಗಲಿ

P

Pag net — ನಿಂಗಿಬಲೆ
Pati net — ಪಟ್ಟಿಬಲೆ
Pocket net — ಚೀಲಬಲೆ
Port side — ಹಡಗಿನ ಎಡಭಾಗ
Prawn — ಶೆಟ್ಲೆ

R

Rampan — ರಂಪಣಿಬಲೆ
Ray fish — ತೊರ್ಕೆಮೀನು
Reef knot — ಸರಿಗಂಟು
Roling hitch — ಸರಗಂಟು

S

Sandinet — ಹೊಂಗಿಬಲೆ
Side of dredging net — ತಟಬಲೆ

T

Tube method — ಕುಳಿ ಪದ್ಧತಿ

W

Wall knot — ಕವಲು ಗಂಟು
Whale — ತಿಮಿಂಗಲ

(ii) ಕನ್ನಡ-ಇಂಗ್ಲಿಷ್

ಅ	
ಆಲ್ಜಿಯನ್	Aljion
ಆಸರೆ ಹಗ್ಗ	Buttress rope
ಕ	
ಕಳಿ	Floatil
ಕವಲುಗಂಟು	Wall knot
ಕಾಂಟಲಬಲೆ	Drifter
ಕುರುಡಿ ಮೀನು	Blind fish
ಕುಳಿ ಪದ್ಧತಿ	Tube method
ಕೀಲಸ ಮೀನು	Eal fish
ಗ	
ಗಂಟು	Knot
ಗಾಳ	Fishing hook
ಗೂಟದ ಗಂಟು	Clove hitch
ಚ	
ಚಿಗಲಿ	Netting needle
ಚೀಲಬಲೆ	Pocket net
ಛ	
ಛಡಿಗಾಳ	Fishing rod
ಜ	
ಜೋಡಿಗಂಟು	Figure of eight knot
ಡ	
ಡಕ್ಕು	Dock
ತ	
ತಟಬಲೆ	Slide of dredging net
ತಿಮಿಂಗಲ	Whale
ತೊರ್ಕೆಮೀನು	Ray fish
ನ	
ನಿಂಗಿಬಲೆ	Pag net
ನುಚುಕಿ ಮೀನು	Cuttal fish
ಪ	
ಪಟ್ಟೆಬಲೆ	Pati net
ಫಾಗ್‌ಹಾರ್ನ್	Foghorn
ಬ	
ಬ್ಲಾಸ್ಟ್ (ಶಿಳ್ಳಿನ ಸಪ್ಪಳ)	Blast
ಬೀಸುವಬಲೆ	Cast net
ಬುಡಿಬಲೆ	Bottam net
ಬೆಂಡು	Floatil
ಬೊಗಸಿ ಬಲೆ	Bogasi net
ಬೊವೆ	Buoy
ಭರತಿ	High tide
ಮ	
ಮಡ್ಲೆಬಲೆ	Chitnut
ಮಾರಿಬಲೆ	Dredging net
ರ	
ರಂಪಣಿ ಬಲೆ	Rampan
ಲ	
ಲಾಂಬೋರಿ	Fishing wire
ವ	
ವಾಲ್‌ಕಾಂಡ	Coil rope
ವಾಲ್‌ಗಾಳ	Internal setting up hooks
ಶ	
ಶೆಟ್ಲೆ	Prawn
ಶೆಟ್ಲೆಬಲೆ	Chitnet
ಸ	
ಸರಗಂಟು	Roling hitch
ಸರಿಗಂಟು	Reef knot
ಹ	
ಹಗರು	Eye seal
ಹಡಗಿನ ಎಡಭಾಗ	Port side
ಹಿಮ	Fog
ಹುಟ್ಟಿನ ಗಂಟು	Hive knot
ಹೊಂಗಿ ಬಲೆ	Sandinet
ಹೋಲಿಕಣ್ಣು	Extensive eye knot

ಆಧಾರ ಗ್ರಂಥಗಳು

Licut Col W.P.C. Tenison B.S.O., A history of ***Fishes.,*** *London: Ernest Benn Ltd., 1958.*

Wickham, T.F., Seamanship., London: English ***University*** *Press Ltd., 1964.*

ಕೃಷಿ ವಿಶ್ವವಿದ್ಯಾನಿಲಯದ ಪ್ರಕಟಣೆಗಳು

1.	ಸುಭಿಕ್ಷತೆಗೆ ತೆರೆದ ಬಾಗಿಲು	(ಪ್ರತಿಗಳು ತೀರಿವೆ)	ರೂ.	1–50
2.	ಪೀಡೆ ನಿರ್ವಹಣೆ	(,,)		3–75
3.	ಕೀಟ ಹತೋಟಿ	(,,)		10–00
4.	ಮೈಸೂರು ರಾಜ್ಯದಲ್ಲಿ ಕೃಷಿ	(,,)	ಕ್ಯಾಲಿಕೊ ಪ್ರತಿ	10–00
5.	ತರಕಾರಿ ಬೇಸಾಯ	(,,)		10–00
6.	ಕೀಟಗಳ ವಿಂಗಡನೆ	(,,)		12–00
7.	ಕೃಷಿ ರಸಾಯನ ಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ		ಸಾದಾ ಪ್ರತಿ	3–75
			ಕ್ಯಾಲಿಕೊ ಪ್ರತಿ	5–00
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ		ಸಾದಾ ಪ್ರತಿ	12–00
			ಕ್ಯಾಲಿಕೊ ಪ್ರತಿ	15–00
9.	ರೈತರ ನೆಚ್ಚುಮೆಚ್ಚಿನ ಮರಗಳು		ಸಾದಾ ಪ್ರತಿ	12–00
			ಕ್ಯಾಲಿಕೊ ಪ್ರತಿ	15–00
10.	ಸಾಕುಪ್ರಾಣಿಗಳ ಶರೀರಕ್ರಿಯಾಶಾಸ್ತ್ರ (ಭಾಗ I)		ಸಾದಾ ಪ್ರತಿ	5–00
11.	ಸಾಕುಪ್ರಾಣಿಗಳ ಶರೀರಕ್ರಿಯಾಶಾಸ್ತ್ರ (ಭಾಗ II)		ಸಾದಾ ಪ್ರತಿ	9–00
			ಕ್ಯಾಲಿಕೊ ಪ್ರತಿ	12–00
12.	ಸಾಕುಪ್ರಾಣಿಗಳ ಶರೀರಕ್ರಿಯಾಶಾಸ್ತ್ರ (ಭಾಗ III)		ಸಾದಾ ಪ್ರತಿ	8–00
			ಕ್ಯಾಲಿಕೊ ಪ್ರತಿ	12–00
13.	ಮಣ್ಣು ಮತ್ತು ನೀರು ನಿರ್ವಹಣೆ		ಸಾದಾ ಪ್ರತಿ	12–00
			ಕ್ಯಾಲಿಕೊ ಪ್ರತಿ	15–00
14.	ಮಣ್ಣು		ಸಾದಾ ಪ್ರತಿ	9–00
			ಕ್ಯಾಲಿಕೊ ಪ್ರತಿ	12–00
15.	ಕೃಷಿ ಸಹಕಾರ		ಸಾದಾ ಪ್ರತಿ	5–00
			ಕ್ಯಾಲಿಕೊ ಪ್ರತಿ	8–00
16.	ಕಳೆಗಳು ಮತ್ತು ಕಳೆಗಳ ನಿಯಂತ್ರಣ		ಸಾದಾ ಪ್ರತಿ	12–00
			ಕ್ಯಾಲಿಕೊ ಪ್ರತಿ	15–00
17.	ಗೋಸಂಪತ್ತು		ಸಾದಾ ಪ್ರತಿ	5–00
			ಕ್ಯಾಲಿಕೊ ಪ್ರತಿ	8–00
18.	ಧಾನ್ಯ ದಾಸ್ತಾನು ತತ್ವ ಮತ್ತು ಪದ್ಧತಿಗಳು		ಸಾದಾ ಪ್ರತಿ	6–00
			ಕ್ಯಾಲಿಕೊ ಪ್ರತಿ	9–00
19.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ		ಸಾದಾ ಪ್ರತಿ	14–00
			ಕ್ಯಾಲಿಕೊ ಪ್ರತಿ	17–00
20.	ಪಶುವೈದ್ಯಕೀಯ ವಿಜ್ಞಾನ		ಸಾದಾ ಪ್ರತಿ	6–00
			ಕ್ಯಾಲಿಕೊ ಪ್ರತಿ	9–00

21.	ಹೊಲದ ಬೆಳೆಗಳಿಗೆ ಬೀಳುವ ಕೀಟಗಳು (ಗುರುತಿಸುವಿಕೆ ಹಾಗೂ ನಿಯಂತ್ರಣ)	ಸಾದಾ ಪ್ರತಿ	6–50
		ಕ್ಯಾಲಿಕೊ ಪ್ರತಿ	9–50
22.	ಟ್ರಾಕ್ಟರು ಹಾಗೂ ಟ್ರಾಕ್ಟರುಗಳನ್ನು ಸುಸ್ಥಿತಿಯಲ್ಲಿಡುವ ಕ್ರಮಗಳು	ಸಾದಾ ಪ್ರತಿ	6–00
		ಕ್ಯಾಲಿಕೊ ಪ್ರತಿ	10–00
23.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	ಸಾದಾ ಪ್ರತಿ	8–00
		ಕ್ಯಾಲಿಕೋ ಪ್ರತಿ	12–00
24.	ಸಸ್ಯ ವರ್ಗೀಕರಣ ಶಾಸ್ತ್ರ	ಸಾದಾ ಪ್ರತಿ	12–00
		ಕ್ಯಾಲಿಕೊ ಪ್ರತಿ	16–00
25.	ಪೌಷ್ಟಿಕ ಆಹಾರ		7–00
26.	ಶಿಶುವಿಹಾರ	ಸಾದಾಪ್ರತಿ	7–50
		ಕ್ಯಾಲಿಕೊ ಪತ್ರಿ	10–50
27.	ಕಡಲ ಮೀನುಗಾರಿಕೆ		4–00
28.	ಧಾನ್ಯ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ನಿಯಂತ್ರಣ		8–50

ಅಚ್ಚಿನಲ್ಲಿವೆ

29. ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ
30. ಬೀಜಗಣಿತ
31. ಗಣಿತಶಾಸ್ತ್ರ ಪ್ರವೇಶಿಕೆ (ಭಾಗ I)
32. ಗಣಿತಶಾಸ್ತ್ರ ಪ್ರವೇಶಿಕೆ (ಭಾಗ II)
33. ಸಾಕುಪ್ರಾಣಿಗಳ ಎಲುಬುಶಾಸ್ತ್ರ
34. ಕೃಷಿ ಎಂಜನಿಯರಿಂಗ್ ಪಠ್ಯಪುಸ್ತಕ (ಸಮೀಕ್ಷಣೆ)